RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ **Volume 148**	ಬೆಂಗಳೂರು, ಗುರುವಾರ, ಮೇ ೯, ೨೦೧೩ (ವೈಶಾಖ ೧೯, ಶಕ ವರ್ಷ ೧೯೩೫) **Bangalore, Thursday, May 9, 2013 (Vaishakha 19, Shaka Varsha 1935)**	ಸಂಚಿಕೆ ೧೯ **Issue 19**

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub : Constitution of Executive Committee on Kanaja Project.

Read : 1) GO No. ED 122 URC 2012 Dt:09-10-2012.

2) Office Order No: 16 dt: 9/12/2010

PREAMBLE:

In the Government Order read at (1) above, the Department of Information Technology, Bio Technology and Science and Technology has been appointed as the Nodal Department of the KANAJA Portal Project.

In the meeting held on 6.11.2012 under the chairmanship of Principal Secretary, IT, BT and ST regarding KANAJA Portal, it was decided to constituted a Executive Committee under the Chairmanship of Principal Secretary, IT, BT and ST Department. Hence the order.

GOVERNMENT ORDER No: ITD 197 MIS 2012, BANGALORE, DATED: 21-12-2012.

In the circumstance explained in the preamble, Government is pleased to constitute the Executive Committee on KANAJA Portal project with the following.

a) Principal Secretary -IT, BT and S & T	- Chairman
b) Prof. Sridhar, Member Secretary & Executive Director, Karnataka Jnana Ayoga	- Member
c) Dr. Rajagopalan, IIIT B	- Member
d) Representative of Kannada & Culture Dept.	- Member
e) Consortium Partner	- Member

By Order and in the name of the Governor of Karnataka,

E. Ramakrishnappa

Under Secretary to Government

Department of Information Technology

Biotechnology and Science & Technology

P.R. 311

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ನಗರಾಭಿವೃದ್ಧಿ ಇಲಾಖೆಯ ಕಡತಗಳು ಕಾಣೆಯಾಗಿರುವುದಕ್ಕೆ ಸಂಬಂಧಪಟ್ಟಂತೆ ಸಂಬಂಧಿಸಿದ ಅಧಿಕಾರಿ/ನೌಕರರುಗಳ ವಿರುದ್ಧದ ಶಿಸ್ತು ಕ್ರಮದ ಅಂತಿಮ ಆದೇಶವನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ ನಅಇ 126 ಬೆಮಪ್ರಾ 2010 (ಭಾಗ), ದಿನಾಂಕ: 18–8–2010.

2) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 14 ಸೇಇವಿ 2010, ದಿನಾಂಕ: 4–9–2010.

3) ನೋಟೀಸ್ ಸಂಖ್ಯೆ ಸಿಆಸುಇ 14 ಸೇಇವಿ 2010, ದಿನಾಂಕ: 13–10–2010.

4) ಆರೋಪಿತ 11 ಮಂದಿ ಅಧಿಕಾರಿ / ನೌಕರರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳು.

5) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 14 ಸೇಇವಿ 2010, ದಿನಾಂಕ: 8–6–2011.

6) ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 14 ಸೇಇವಿ 2010, ದಿನಾಂಕ: 23–7–2011.

7) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ: 31–8–2012.

ಪ್ರಸ್ತಾವನೆ :

ಘನ ಸರ್ವೋಚ್ಚ ನ್ಯಾಯಾಲಯದ ಮುಂದಿದ್ದ ಎಸ್.ಎಲ್.ಪಿ. (ಸಿವಿಲ್) ಪ್ರಕರಣ ಸಂಖ್ಯೆ: 6662–6670/2002 ಶ್ರೀ ವಸಂತ್ ಶ್ರೀಧರ್ ಕುಲಕರ್ಣಿ ಮತ್ತು ಇತರರು – ವಿರುದ್ಧ – ಸರ್ಕಾರ ಮತ್ತು ಇತರರು, ಇದಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯ ಅಭಿವೃದ್ಧಿ ಪ್ರಾಧಿಕಾರ ಶಾಖೆಯಲ್ಲಿನ ಕಡತ ಸಂಖ್ಯೆ ನಅಇ 118 ಬೆಮಪ್ರಾ 2000ನ್ನು ಹಾಗೂ ಇದರೊಂದಿಗೆ ಜೋಡಣೆಯಾಗಿದ್ದ ನಅಇ 172 ಬೆಮಪ್ರಾ 1998 ಕಡತವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿತ್ತು. ಘನ ಸರ್ವೋಚ್ಚ ನ್ಯಾಯಾಲಯಕ್ಕೆ ಅಗತ್ಯವಾಗಿ ಒದಗಿಸಬೇಕಾಗಿರುವ ಎರಡು ಕಡತಗಳು ಲಭ್ಯವಾಗದೇ ಇದ್ದ ಹಿನ್ನೆಲೆಯಲ್ಲಿ ಸದರಿ ಕಡತಗಳು ಕಣ್ಮರೆ / ಕಳೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದ ಹಾಗೂ ಕಡತಗಳು ಕಣ್ಮರೆ / ಕಳೆದು ಹೋಗಿರುವುದಕ್ಕೆ ಸಂಬಂಧಿಸಿದಂತೆ ಮೇಲೆ ಓದಲಾದ (1)ರ ಪತ್ರದಲ್ಲಿನ ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಶಿಫಾರಸ್ಸಿನಂತೆ ಹೊಣೆಗಾರರಾದ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಬಾಕಿ ಇರಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದು ಅವಶ್ಯಕವೆಂದು ಸರ್ಕಾರವು ಭಾವಿಸಿದ್ದರಿಂದ ಮೇಲೆ ಓದಲಾದ (2)ರ ಆದೇಶದಲ್ಲಿ ಈ ಕೆಳಕಂಡ ಅಧಿಕಾರಿ/ನೌಕರರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು:

1) ಶ್ರೀ ಎಸ್.ಜೆ. ಸಂಪತ್‌ಕುಮಾರ್, (ಹಿಂದಿನ ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ) ಪ್ರಸ್ತುತ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ
2) ಶ್ರೀ ಶಾಂತರಾಮ್ ನಾಯಕ್, ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ
3) ಶ್ರೀ ಟಿ. ಹಾಲಸಿದ್ಧಪ್ಪ, (ಹಿಂದಿನ ಸಹಾಯಕರು, ನಗರಾಭಿವೃದ್ಧಿ ಇಲಾಖೆ) ಪ್ರಸ್ತುತ ಹಿರಿಯ ಸಹಾಯಕರು, ಸಿ.ಆ.ಸು.ಇ. (ಸೇವೆಗಳು–ಡಿ)
4) ಶ್ರೀ ಜಗದೀಶರೆಡ್ಡಿ, (ಹಿಂದಿನ ಸಹಾಯಕರು, ನಗರಾಭಿವೃದ್ಧಿ ಇಲಾಖೆ) ಪ್ರಸ್ತುತ ಹಿರಿಯ ಸಹಾಯಕರು, ಜಲಸಂಪನ್ಮೂಲ ಇಲಾಖೆ
5) ಶ್ರೀ ಎಲ್. ರಮೇಶ್, ಸಹಾಯಕರು, ನಗರಾಭಿವೃದ್ಧಿ ಇಲಾಖೆ ಪ್ರಸ್ತುತ ಕಂದಾಯ ಇಲಾಖೆ
6) ಶ್ರೀ ಟಿ.ಹೆಚ್. ಚಿಕ್ಕಹುಚ್ಚಯ್ಯ, ಕಿರಿಯ ಸಹಾಯಕರು, ನಗರಾಭಿವೃದ್ಧಿ ಇಲಾಖೆ, ಪ್ರಸ್ತುತ ಸಿ.ಆ.ಸು.ಇ. (ಲೆಕ್ಕಪತ್ರ–1)

ಮೇಲ್ಕಂಡ ಅಧಿಕಾರಿ/ನೌಕರರುಗಳನ್ನೊಳಗೊಂಡಂತೆ ಒಟ್ಟು 11 ಅಧಿಕಾರಿ/ನೌಕರರುಗಳು ಈ ಪ್ರಕರಣಕ್ಕೆ ಜವಾಬ್ದಾರರೆಂದು ಕಂಡುಬಂದಿದ್ದರಿಂದ ಮೇಲೆ ಓದಲಾದ (3)ರನ್ವಯ ಈ ಕೆಳಕಂಡ ಆರೋಪಿತ ಅಧಿಕಾರಿ / ನೌಕರರುಗಳಿಗೆ ಕಾರಣ ಕೇಳುವ ನೋಟೀಸ್‌ನೊಂದಿಗೆ ದೋಷಾರೋಪಣಾ ಪಟ್ಟಿಗಳನ್ನು ಜಾರಿ ಮಾಡಲಾಗಿತ್ತು:

1) **ಎಸ್.ಜೆ. ಸಂಪತ್‌ಕುಮಾರ್**
ಅಧೀನ ಕಾರ್ಯದರ್ಶಿ

2) **ಸಿ.ಟಿ. ನಾರಾಯಣಸ್ವಾಮಿ**
ಅಧೀನ ಕಾರ್ಯದರ್ಶಿ

3) **ಎನ್.ವೈ. ಸಾಗರ್**
ಅಧೀನ ಕಾರ್ಯದರ್ಶಿ

4) **ಶಾಂತರಾಮ್ ನಾಯಕ್**
ಶಾಖಾಧಿಕಾರಿ

5) **ಜಿ.ಎಸ್. ಪ್ರಕಾಶ್**
ಹಿರಿಯ ಸಹಾಯಕರು

6) **ಟಿ. ಹಾಲಸಿದ್ಧಪ್ಪ**
ಹಿರಿಯ ಸಹಾಯಕ

7) **ಎಲ್. ರಮೇಶ್**
ಸಹಾಯಕರು

8) **ಜಗದೀಶರೆಡ್ಡಿ**
ಸಹಾಯಕರು

9) **ಸಿ.ಆರ್. ರವಿಚಂದ್ರ**
ಸಹಾಯಕ

10) **ಪಿ.ಎನ್. ನಾಗರಾಜ್**
ಸಹಾಯಕರು

11) **ಟಿ.ಹೆಚ್. ಚಿಕ್ಕಹುಚ್ಚಯ್ಯ**
ಕಿರಿಯ ಸಹಾಯಕ

ಮೇಲ್ಕಂಡ ಆರೋಪಿತ 11 ಮಂದಿ ಅಧಿಕಾರಿ/ನೌಕರರುಗಳು ತಮ್ಮ ವಿರುದ್ಧ ಹೊರಿಸಲಾದ ಆರೋಪಗಳನ್ನು ನಿರಾಕರಿಸಿ ತಮ್ಮನ್ನು ದೋಷಮುಕ್ತರನ್ನಾಗಿಸುವಂತೆ ಮೇಲೆ ಓದಲಾದ (4)ರಲ್ಲಿ ತಮ್ಮ ಲಿಖಿತ ಹೇಳಿಕೆಗಳಲ್ಲಿ ಕೋರಿರುತ್ತಾರೆ. ಸದರಿ ಲಿಖಿತ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ವಿಚಾರಣೆಯನ್ನು ನಡೆಸಲು ತೀರ್ಮಾನಿಸಿದ ಸರ್ಕಾರವು ಮೇಲೆ ಓದಲಾದ (5)ರ ಆದೇಶದನ್ವಯ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11 ಮತ್ತು 13ರನ್ವಯ ಜಂಟಿ ಇಲಾಖಾ ವಿಚಾರಣೆ ನಡೆಸಲು ನಿಯಮ 11(2)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ಶ್ರೀ ರಿಚರ್ಡ್ ಲೋಬೋ, ಜಂಟಿ ಪ್ರಾರೂಪಣಕಾರರು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,** ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಬೆಂಗಳೂರು ಅವರನ್ನು **ವಿಚಾರಣಾಧಿಕಾರಿ**ಯಾಗಿ ಹಾಗೂ ಇದೇ ನಿಯಮಾವಳಿಗಳ ನಿಯಮ 11(5)(ಸಿ)ರ ಅನ್ವಯ **ಶ್ರೀ ಜೋಸ್ ಗ್ಸೇವಿಯರ್, ಅಂದಿನ ಶಾಖಾಧಿಕಾರಿ,** ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಕೋಶ) ಅವರನ್ನು **ಮಂಡನಾಧಿಕಾರಿ**ಯನ್ನಾಗಿ ನೇಮಕ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (6)ರ ಆದೇಶದನ್ವಯ ಅಮಾನತ್ತಿನಲ್ಲಿದ್ದ ಆರು ಅಧಿಕಾರಿ ನೌಕರರುಗಳ ವಿರುದ್ಧದ ಶಿಸ್ತಿನ ಕ್ರಮವನ್ನು ಬಾಕಿಯಿಟ್ಟು ಸೇವೆಗೆ ಪುನರ್‌ಸ್ಥಾಪಿಸಲಾಗಿರುತ್ತದೆ.

ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿ ಮೇಲೆ ಓದಲಾದ (7)ರಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸುತ್ತಾ, ಮೇಲ್ಕಂಡ ಆರೋಪಿತ ಎಲ್ಲಾ ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪ ಸಾಬೀತಾಗಿರುವುದಿಲ್ಲ ಮತ್ತು ಈ ಪ್ರಕರಣದಲ್ಲಿ ಕಡತ ಕಾಣೆಯಾಗಲು ಕಾರಣರಾದ ಅಧಿಕಾರಿ/ಸಿಬ್ಬಂದಿಗಳನ್ನು ಗುರುತಿಸಿ ಹೊಣೆಗಾರರನ್ನಾಗಿಸುವುದು ಸಾಧ್ಯವಿರುವುದಿಲ್ಲವೆಂದು ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ. ವಿಚಾರಣಾಧಿಕಾರಿಯವರು ಸಲ್ಲಿಸಿರುವ ದಿನಾಂಕ: 31–8–2012ರ ವಿಚಾರಣಾ ವರದಿಯನ್ನು ಸರ್ಕಾರವು ಅಂಗೀಕರಿಸಿ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲು ನಿರ್ಧರಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 14 ಸೇಇವಿ 2010, ಬೆಂಗಳೂರು, ದಿನಾಂಕ: 11ನೇ ಫೆಬ್ರವರಿ 2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಕಡತ ಕಾಣೆಯಾಗಿರುವುದಕ್ಕೆ ಸಂಬಂಧಿಸಿದಂತೆ ಆರೋಪಿಸಲಾದ ಹನ್ನೊಂದು ಅಧಿಕಾರಿ/ನೌಕರರುಗಳ ಪೈಕಿ ಈ ಕೆಳಕಂಡ ಆರು ಅಧಿಕಾರಿ/ನೌಕರರ ವಿರುದ್ಧ ಆರೋಪವು ಸಾಬೀತಾಗದೇ ಇರುವುದರಿಂದ ಇವರುಗಳನ್ನು ಆರೋಪದಿಂದ **ದೋಷಮುಕ್ತಗೊಳಿ**ಸಿ ಆದೇಶಿಸಲಾಗಿದೆ:

1) ಶ್ರೀ ಎಸ್.ಜೆ. ಸಂಪತ್‌ಕುಮಾರ್, ಅಂದಿನ ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ
ಪ್ರಸ್ತುತ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

2) ಶ್ರೀ ಶಾಂತರಾಮ್ ನಾಯಕ್, ಶಾಖಾಧಿಕಾರಿ, ನಗರಾಭಿವೃದ್ಧಿ ಇಲಾಖೆ
ಪ್ರಸ್ತುತ ಶಾಖಾಧಿಕಾರಿ, ಕಂದಾಯ ಇಲಾಖೆ (ಭೂಮಿ)

3) ಶ್ರೀ ಟಿ. ಹಾಲಸಿದ್ಧಪ್ಪ, ಹಿಂದಿನ ಸಹಾಯಕರು
ಪ್ರಸ್ತುತ ಹಿರಿಯ ಸಹಾಯಕರು, ಸಿ.ಆ.ಸು. ಇಲಾಖೆ (ಸೇವೆಗಳು–ಡಿ)

4) ಶ್ರೀ ಜಗದೀಶರೆಡ್ಡಿ, ಹಿಂದಿನ ಸಹಾಯಕರು, ನಗರಾಭಿವೃದ್ಧಿ ಇಲಾಖೆ
ಪ್ರಸ್ತುತ ಹಿರಿಯ ಸಹಾಯಕರು, ಜಲಸಂಪನ್ಮೂಲ ಇಲಾಖೆ.

5) ಶ್ರೀ ಎಲ್. ರಮೇಶ್, ಸಹಾಯಕರು, ನಗರಾಭಿವೃದ್ಧಿ ಇಲಾಖೆ
ಪ್ರಸ್ತುತ ಸಹಾಯಕರು, ಕಂದಾಯ ಇಲಾಖೆ.

6) ಶ್ರೀ ಟಿ.ಹೆಚ್. ಚಿಕ್ಕಹುಚ್ಚಯ್ಯ, ಕಿರಿಯ ಸಹಾಯಕರು, ನಗರಾಭಿವೃದ್ಧಿ ಇಲಾಖೆ
ಪ್ರಸ್ತುತ ಸಿ.ಆ.ಸು. ಇಲಾಖೆ (ಲೆಕ್ಕಪತ್ರ–1)

ಮೇಲ್ಕಂಡ ಅಧಿಕಾರಿ/ನೌಕರರು ಅಮಾನತ್ತಿನಲ್ಲಿ ಕಳೆದ ದಿನಾಂಕ: 4–9–2010 ರಿಂದ 23–7–2011ರವರೆಗಿನ ಅವಧಿಯನ್ನು **"ಕರ್ತವ್ಯದ ಅವಧಿ"** ಎಂದು ಪರಿಗಣಿಸಿ ಆದೇಶಿಸಲಾಗಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನುಳಿದ ಈ ಕೆಳಕಂಡ ಆರೋಪಿತ ಅಧಿಕಾರಿ/ನೌಕರರುಗಳನ್ನು ಸದರಿ ಆರೋಪದಿಂದ **ದೋಷಮುಕ್ತಗೊಳಿಸಿ** ಆದೇಶಿಸಲಾಗಿದೆ:

1) ಶ್ರೀ ಸಿ.ಟಿ. ನಾರಾಯಣಸ್ವಾಮಿ, ಅಧೀನ ಕಾರ್ಯದರ್ಶಿ
ಪ್ರಸ್ತುತ ನಿಯೋಜನೆ ಮೇಲೆ (ಕೆ–ಶಿಫ್).

2) ಶ್ರೀ ಎನ್.ವೈ.ಸಾಗರ್, ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

3) ಶ್ರೀ ಪಿ.ಎನ್. ನಾಗರಾಜ್, ಸಹಾಯಕರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

4) ಶ್ರೀ ಸಿ.ಆರ್. ರವಿಚಂದ್ರ, ಸಹಾಯಕ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

5) ಶ್ರೀ ಜಿ.ಎಸ್. ಪ್ರಕಾಶ್, ಹಿರಿಯ ಸಹಾಯಕರು
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ)

ಇದೇ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿತರಾಗಿರುವ ಈ ಕೆಳಕಂಡ ಅಧಿಕಾರಿ/ನೌಕರರು ಕಡತದ ಲಭ್ಯತೆ ಬಗ್ಗೆ ಭೌತಿಕವಾಗಿ ಪರೀಕ್ಷಿಸದೇ ಸದರಿ ಕಡತವನ್ನು ದಿನಾಂಕ: 13–8–2009 ರಂದು ಮುಕ್ತಾಯಗೊಳಿಸುವ ಮೂಲಕ ನಿರ್ಲಕ್ಷ್ಯ ದೋರಣೆ ಅನುಸರಿಸಿರುವುದರಿಂದ, ಇನ್ನು ಮುಂದೆ ಇಂತಹ ನಿರ್ಲಕ್ಷ್ಯ/ಕರ್ತವ್ಯ ಲೋಪಗಳಿಗೆ ಅವಕಾಶ ನೀಡಬಾರದೆಂದು ಕಟ್ಟುನಿಟ್ಟಿನ **"ಆಡಳಿತಾತ್ಮಕ ಎಚ್ಚರಿಕೆ"** ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

1) ಶ್ರೀ ಸಿ.ಟಿ. ನಾರಾಯಣಸ್ವಾಮಿ, ಅಧೀನ ಕಾರ್ಯದರ್ಶಿ
ಪ್ರಸ್ತುತ ನಿಯೋಜನೆ ಮೇಲೆ (ಕೆ–ಶಿಫ್).

2) ಶ್ರೀ ಶಾಂತರಾಮ್ ನಾಯಕ್, ಶಾಖಾಧಿಕಾರಿ, ಶಾಖಾಧಿಕಾರಿ ಕಂದಾಯ ಇಲಾಖೆ (ಭೂಮಿ)

3) ಶ್ರೀ ಎಲ್. ರಮೇಶ್, ಸಹಾಯಕರು, ಕಂದಾಯ ಇಲಾಖೆ.

4) ಶ್ರೀ ಟಿ.ಹೆಚ್. ಚಿಕ್ಕಹುಚ್ಚಯ್ಯ, ಕಿರಿಯ ಸಹಾಯಕರು, ಸಿ.ಆ.ಸು. ಇಲಾಖೆ (ಲೆಕ್ಕಪತ್ರ–1)

ಈ ಜಂಟಿ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಮೇಲ್ಕಂಡ ಎಲ್ಲಾ ಹನ್ನೊಂದು ಅಧಿಕಾರಿ/ನೌಕರರುಗಳು ಯಾವ ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿದ್ದರೋ, ಆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಆರ್. ನಾಗರಾಜ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–6)

P.R. 261

ಜಲಸಂಪನ್ಮೂಲ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಜಸಂಇ/39/ಸಿಎಎಂ/2011. ಬೆಂಗಳೂರು, ದಿನಾಂಕ: 01–01–2013

ಸರ್ಕಾರದ ಆದೇಶ ಸಂಖ್ಯೆ:ಜಸಂಇ/39/ಸಿಎಎಂ/2011, ದಿನಾಂಕ:17–11–2012ರ ಅನುಬಂಧ–1ರ ಜಂಟಿ ನಿರ್ದೇಶಕರು (ಇಂಜಿನಿಯರಿಂಗ್) (ಅಧೀಕ್ಷಕ ಇಂಜಿನಿಯರ್) ಕಾಲಂನ ಭಾಗದಲ್ಲಿ **"ಸಹಾಯಕ ನಿರ್ದೇಶಕರು (ಕೃಷಿ)–2"** ಎಂದು ನಮೂದಿಸಿರುವುದರ ಬದಲಿಗೆ **"ಸಹಾಯಕ ಕೃಷಿ ಅಧಿಕಾರಿ"** ಎಂದು ಹಾಗೂ ಅನುಬಂಧ–4(ii) ರ ಕ್ರಮ ಸಂಖ್ಯೆ(1)ರ ನಾಲ್ಕನೇ ಕಾಲಂನಲ್ಲಿರುವ **"ಈಗಾಗಲೇ ಕಾಡಾ, ತುಂಗಭದ್ರಾ ಇಂದ ಕಾಡಾ ಯು.ಕೆ.ಪಿ.ಗೆ ಹುದ್ದೆ ಸ್ಥಳಾಂತರಿಸಲಾಗಿದೆ"** ಎಂಬುದನ್ನು **"ಈಗಾಗಲೇ ಕಾಡಾ ಯು.ಕೆ.ಪಿ. ಇಂದ ಕಾಡಾ ತುಂಗಭದ್ರಾ ಗೆ ಹುದ್ದೆ ಸ್ಥಳಾಂತರಿಸಲಾಗಿದೆ"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್. ಬೈರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ (ಕಾಡಾ)

ಜಲಸಂಪನ್ಮೂಲ ಇಲಾಖೆ

P.R. 262

COMMERCE & INDUSTRIES SECRETARIAT

Sub : Karnataka Aerospace Policy 2013-2023.

Ref : Government Order No. CI 233 SPI 2008, Bangalore, Dated: 28.02.2009.

PREAMBLE :

Karnataka is home to India's Aerospace industry. The establishment of Hindustan Aeronautics Limited (HAL) in 1940 heralded the aerospace activities in Bangalore. Subsequent establishment of defence public sector undertakings and R&D institutions like BEML, BHEL, GTRE, NAL, DRDO, ADA, ADE, ISRO, IISc etc., positioned Karnataka as a prime location for Aerospace industry in India.

India's Aerospace & Defence (A&D) sector is at an inflection point. Various estimates put the A&D expenditure on acquisitions at around Rs.5.00 lakh crores (US $ 100 Billion) over the next 10 years. The robust growth potential of the industry is attracting global majors in Aerospace sector to set up shop in India thereby providing tremendous opportunities for Indian industry participation.

Defence Procurement Policy (DPP-2011) has included civil aviation equipment in the list of direct offsets. By 2017, the Indian aviation market is projected to be among the three largest markets globally.

India's MRO segment is estimated to reach Rs.1300 crores by 2020. Given the labour intensive nature of MRO, several leading MRO companies, OEMs and international airlines have outsourced heavy maintenance work. The grand success of Aero India 2011 with the largest international participation was a reflection of the immense potential for investments by domestic and international firms.

Karnataka has a high potential to emerge as an Aerospace Hub due to following strengths and advantages:

- A relatively low cost aerospace manufacturing and MRO activities in Asia and Middle East providing a competitive edge.
- Presence of defence PSUs and scientific and technical institutes along with research and development agencies.
- Expertise in aerospace with more than 2000 SMEs which execute niche subcontracting work for the DPSUs.
- Bangalore being recognized as the Silicon Valley of India has a number of top companies in IT/ITES and electronics hardware, many of them being a part of the supply chain to the Aerospace sector.
- Maximum number of engineering graduates in the country, with a large number of them employed in IT design & engineering affirming advantageous position with reference to skill sets.

Karnataka intends to take advantages of the promising scenario and strive to project the State as the aerospace hub for Asia in the next 5 years and as one of the top global aerospace and MRO destinations by 2023.

Despite the strengths that, Aerospace industry in Karnataka enjoys, the industry faces various challenges both at institutional as well as at the operational level. Focusing all energies and resources to overcome these challenges and building on critical areas of opportunities and strengths can lead to sustained competitive advantage for the State in the long term. Keeping these points in view, the State intends to formulate Karnataka Aerospace Policy to provide enabling environment for investors in Aerospace Sector. The New Aerospace Policy 2013 lays emphasis on the development of infrastructure and human resource in addition to other measures.

The aerospace industry must operate with a long-term perspective and hence this Policy would be implemented in two phases viz. the near term view in Phase-I (Growth Phase: 2013-18) and a medium to long term view Phase-II (Consolidation Phase: 2018-23 and beyond) with the overall objective of making the policy attractive to entrepreneurs as well as large investors.

This policy is framed on the broad principles of Karnataka Industrial Policy of 2009-14. The Policy has been formulated through Extensive consultation process with industry associations, trade bodies, related Government departments & organizations and other stakeholders. The Policy has also been discussed by the Aerospace Core Group committee constituted by the Government of Karnataka. The valuable inputs provided by CII & PwC and suggestions offered by various stakeholders have been incorporated suitably to make this policy more industry friendly.

In light of the facts, covered in the Preamble, a decision has been taken by the Government to formulate and adopt the Karnataka Aerospace Policy for the period 2013-23.

Hence, the following Order.

GOVERNMENT ORDER NO. CI 17 SPI 2012, BANGALORE, DATED: 06.02.2013

In the circumstances explained in the preamble, Govt. is pleased to announce the Karnataka Aerospace Policy 2013-23 as detailed in Annexe to this order and supported by following Appendices:

Appendix – 1: Incentives & Concessions for Aerospace Sector.

Appendix – 2: Definitions and Terms & Conditions for sanction of Incentives and Concessions.

The salient features of the Karnataka Aerospace Policy 2013-23 are as follows:

i) Envision to establish Karnataka as a Vibrant Aerospace Hub of Asia and a globally recognised aerospace destination.

ii) Attract investments of Rs. 60,000 crores (10 billion USD) over a period of 10 years in two phases i.e. 2013-18 and 2018-2013 and generating direct employment for about one lakh persons and derive large spin off effects.

iii) Create an Aerospace Eco-system across the State by providing enabling and industry-friendly environment.

The above Karnataka Aerospace Policy shall come into immediate effect from 6th February, 2013 and shall be in force up to 31st January, 2023.

This order is issued with the concurrence of Finance Department vide Note No. FD 96 Exp-I/2013, dated: 30.01.2013 and Planning Department vide Note No. PDE 11 FRO 2012, dated: 22.06.2012.

By order and in the name of the Governor of Karnataka,
SHIVASHANKAR NAIK.L
Desk Officer (Technical Cell),
Commerce & Industries Department.

P.R. 263

COMMERCE & INDUSTRIES SECRETARIAT

Sub : Appointment of Principal Secretary to Government, Commerce and Industries Department as the member of Central Manufacturing Technology Institute, Bangalore-reg.

Read : 1) Government of India Order No. 15(1)/2012-LEI, dated: 30.07.2012. Ministry of Commerce and Industry, Department of Industrial Policy and Promotion (Light Engineering Industry).

2) Concurrence from Chief Minister's Office No. CM/32/GOI/2013, dated: 29.01.2013.

PREAMBLE:

Government of India, under Rule 28 and 29 of Rules and Regulations of Central Manufacturing Technology Institute, Bangalore, had reconstituted the Governing Council of the said institute, which is a registered Society under Mysore Societies Registration Act. The Government order was issued as read above.

In the order read above, Chief Secretary, Government of Karnataka or his nominee is made the member for the said Governing Council. In file No. CS 71 COMP 2013, the subject was discussed and as Central Manufacturing Technology Institute, Bangalore is under the administrative jurisdiction of Commerce and Industries Department. It is directed to appoint Principal Secretary to Government, Commerce and Industries Department as the member of Governing Council of Central Manufacturing Technology Institute, Bangalore.

Hence the following Order.

GOVERNMENT ORDER NO: CI 33 SPI 2013, BANGALORE, DATED: 11.02.2013

Government is pleased to appoint Principal Secretary to Government, Commerce and Industries Department as Member of Governing Council of Central Manufacturing Technology Institute, Bangalore.

By order and in the name of the Governor of Karnataka,
SHIVASHANKAR NAIK.L
Desk Officer (Technical Cell),
Commerce & Industries Department.

P.R. 264

ತೋಟಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ಬೆಂಗಳೂರು ಇಲ್ಲಿಗೆ ನಿರ್ದೇಶಕರ ನೇಮಕಾತಿ ಕುರಿತು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ: ತೋಇ 200 ರೇಕೃವಿ 2012 ದಿನಾಂಕ: 07–11–2012.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ: 07–11–2012ರ ಅಧಿಸೂಚನೆಯಲ್ಲಿ ಡಾ॥ ಸಿ.ಎಸ್. ಪಾಟೀಲ್, ವಿಜ್ಞಾನಿ ಡಿ ಇವರನ್ನು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಸದರಿಯವರ ನೇಮಕಾತಿಯ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ಜಾರಿಗೊಳಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ತೋಇ 200 ರೇಕೃವಿ 2012, ಬೆಂಗಳೂರು, ದಿನಾಂಕ: 04–01–2013

ಡಾ॥ ಸಿ.ಎಸ್. ಪಾಟೀಲ್, ವಿಜ್ಞಾನಿ ಡಿ ಇವರನ್ನು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರಾಗಿ ನೇಮಿಸಲಾಗಿದೆ. ಸದರಿಯವರ ನೇಮಕಾತಿಯ ಸೇವಾ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತೆ ಜಾರಿಗೊಳಿಸಿ ಸರ್ಕಾರವು ಆದೇಶಿಸಿದೆ.

1) Dr.C.S.Patil's appointment as Director of Karnataka State Sericulture Research and Development Institute is upto attaining age to superannuation or until further order whichever is earlier.

2) His appointment shall be terminable on a notice in writing by Government without assigning any reason as set out below:

   a) During the period of probation : One month

   b) After completion of the period of probation: Three months

3) During employment, he will be governed by the Rules and Regulations and Bye-laws in force and those which may be framed, amended, altered or extended from time to time

4) Pay: The pay scale of the post of Director is Rs.22125-30300. The scale may be revised as per State Government's pay scales admissible from time to time

5) D.A. and other Compensatory Allowances: He will be entitled to DA and compensatory allowances in accordance with the rules of the State Government.

6) Joining time and T.A: He should join the post within 45 days from the date of dispatch of the appointment order. No transfer T.A. is admissible for joining the post.

7) Disability leave and salary: The Institute shall be liable to pay leave salary towards the disability leave in respect of disability incurred in and through service in the Institute and even if such disability manifests itself after termination of service rendered to the Institute

8) Leave Travel Concession: He will be entitled to leave travel concession to the extent and on conditions laid down in regulations of the Institute and the liability on this account shall be borne by the Institute.

9) Medical Concession: He will be entitled to medical concessions to the extent of the scale prescribed in the Karnataka Government Medical Attendance Rules and the liability in this behalf shall be borne by the Institute as per Institute's Rules.

10) Other conditions not specified: He will be entitled to receive from the institute any other concessions or benefits which he would have received in ordinary course of service at the institute as per rules of the Institute.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಬಿ. ವಿಜಯಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ (ರೇಷ್ಮೆ)

P.R. 268

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಅಪಜೀ 155 ಎಫ್ಎಎಫ್ 2012, ಬೆಂಗಳೂರು, ದಿನಾಂಕ: 17–09–2012.

ಸರ್ಕಾರದ ಆದೇಶದ ಸಂಖ್ಯೆ: ಅಪಜೀ 144 ಎಫ್ಎಎಫ್ 2009, ದಿನಾಂಕ: 10.02.2011 ರ ಒಂದನೇ ಪ್ಯಾರಾದ ಉಪ ಖಂಡಿಕೆ (1) ರ ಮೊದಲನೆಯ ಸಾಲಿನಲ್ಲಿ ನಮೂದಿಸಿರುವ "ಉಪ ವಿಭಾಗಾಧಿಕಾರಿ, ಬೆಳಗಾವಿ ಉಪ ವಿಭಾಗ" ಎಂಬುದಕ್ಕೆ ಬದಲಾಗಿ "ಉಪ ವಿಭಾಗಾಧಿಕಾರಿ ಬಿಜಾಪುರ ಉಪ ವಿಭಾಗ" ಎಂದು ಓದಿಕೊಳ್ಳತಕ್ಕದ್ದು,

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಆರ್.ಅನಂತರಾಮು
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

P.R. 269

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ಕ್ಯಾಲಸನಹಳ್ಳಿ ಗ್ರಾಮದ ಸ.ನಂ.19ರ ಜಮೀನುಗಳಲ್ಲಿರುವ 1.07 ಎ/ಗುಂ. ಬಿ–ಖರಾಬು ಜಮೀನನ್ನು ಶ್ರೀಮತಿ ಡಿ. ಶ್ವೇತ ಬಿನ್ ದೇವರಾಜಪ್ಪರವರಿಗೆ ಮಂಜೂರು ಮಾಡುವ ಕುರಿತು.

ಓದಲಾಗಿದೆ :
(1) ಪತ್ರ ಸಂಖ್ಯೆ:ಎಲ್ಎನ್‌ಡಿ (ಪೂ):ಸಿ:ಆರ್166/2011–12 ದಿನಾಂಕ: 02.01.2012 ಮತ್ತು 10.07.2012
(2) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 459 ಎಲ್‌ಜಿಬಿ 2012 ದಿನಾಂಕ: 17.08.2012
(3) ಪತ್ರ ಸಂಖ್ಯೆ: ಎಲ್ಎನ್‌ಡಿ (ಪೂ):ಸಿ.ಆರ್166/2011–12 ದಿನಾಂಕ: 06.11.2012

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ಕ್ಯಾಲಸನಹಳ್ಳಿ ಗ್ರಾಮದ ಸ.ನಂ.19 ರಲ್ಲಿ ಒಟ್ಟು 10.22 ಎ/ಗುಂ. ವಿಸ್ತೀರ್ಣದ ಜಮೀನಿದ್ದು, ಈ ಪೈಕಿ 0.26 ಗುಂಟೆ ಹಳ್ಳ, 0.14 ಗುಂಟೆ ಸರವು, 0.07 ಗುಂಟೆ ಬಂಡಿದಾರಿ, ಒಟ್ಟು 1.07 ಗುಂಟೆ ಖರಾಬು ಜಮೀನು ಶ್ರೀಮತಿ ಶ್ವೇತರವರ ಒಡೆತನದ ಜಮೀನಿನಿಂದ ಸುತ್ತುವರೆದಿದ್ದು, ಖರಾಬಿನ ಗುಣಲಕ್ಷಣಗಳನ್ನು ಕಳೆದುಕೊಂಡಿರುವುದರಿಂದ ಸದರಿ ಜಮೀನಿನ ಮೇಲೆ ಸಾರ್ವಜನಿಕ ಹಕ್ಕನ್ನು ವಿಹಿತಗೊಳಿಸಿ ಶ್ರೀಮತಿ ಶ್ವೇತ ರವರಿಗೆ ಮಾರುಕಟ್ಟೆ ಬೆಲೆ ನಿಗದಿಪಡಿಸಿ ಮಂಜೂರು ಮಾಡುವ ಬಗ್ಗೆ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರು ಕೋರಿದ್ದು, ಸರ್ಕಾರದ ಪೂರ್ವಾನುಮೋದನೆ ಪಡೆದು ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 68(1)ರನ್ವಯ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 29.03.2012 ರಂದು ಪ್ರಕಟಣೆ ಹೊರಡಿಸಿದ್ದು, ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ.

ಮೇಲೆ ಓದಲಾದ (2)ರಲ್ಲಿ ಸದರಿ ಜಮೀನನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ(5)ರಡಿ ದಿನಾಂಕ: 23.08.2012ರ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಶ್ರೀಮತಿ ಶ್ವೇತ ರವರು ಮನವಿ ಸಲ್ಲಿಸಿ, ಸದರಿ 1.07 ಎ/ಗುಂ. ಖರಾಬು ಜಮೀನನ್ನು ಮಾರುಕಟ್ಟೆ ದರದಲ್ಲಿ ತಮಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3)ರಲ್ಲಿ ಸದರಿ ಜಮೀನು ಸ.ನಂ.19ರಲ್ಲಿ ವಿಲೀನಗೊಂಡಿರುವುದರಿಂದ ಈ ಖರಾಬು ಜಮೀನನ್ನು ಹರಾಜು ಮಾಡಲು ಸಾಧ್ಯವಿಲ್ಲವೆಂದು, ಹಿಡುವಳಿದಾರರಿಗೆ ಸೂಕ್ತ ಮಾರುಕಟ್ಟೆ ದರ ವಿಧಿಸಿ ಮಂಜೂರು ಮಾಡಬಹುದಾಗಿರುತ್ತದೆಂದು ಹಾಗೂ ಸದರಿ ಜಮೀನಿನ ಮಾರ್ಗಸೂಚಿ ದರ ಎಕರೆಯೊಂದಕ್ಕೆ ರೂ. 80 ಲಕ್ಷಗಳಾಗಿದ್ದು, ಮಾರುಕಟ್ಟೆ ದರ ರೂ.1.00 ಕೋಟಿ ಗಳಾಗಿರುತ್ತದೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ 459 ಎಲ್.ಜಿ.ಬಿ. 2012 ಬೆಂಗಳೂರು ದಿನಾಂಕ: 28–01–2013

ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ಕ್ಯಾಲಸನಹಳ್ಳಿ ಗ್ರಾಮದ ಸ.ನಂ.19 ರಲ್ಲಿನ ಒಟ್ಟು 1.07 ಎ/ಗುಂ. ಬಿ–ಖರಾಬು ಜಮೀನನ್ನು ಪ್ರಚಲಿತ ಮಾರುಕಟ್ಟೆ ದರವಾದ ಪ್ರತಿ ಎಕರೆಗೆ ರೂ. 1.00 ಕೋಟಿ (ರೂಪಾಯಿ ಒಂದು ಕೋಟಿಗಳು ಮಾತ್ರ) ದರವನ್ನು ವಿಧಿಸಿ ನಿಯಮಾನುಸಾರ ಇತರೆ ಶುಲ್ಕಗಳನ್ನು ಪಾವತಿಸುವ ಷರತ್ತಿಗೆ ಒಳಪಟ್ಟು ಶ್ರೀಮತಿ ಡಿ. ಶ್ವೇತ ಬಿನ್ ದೇವರಾಜಪ್ಪ ರವರಿಗೆ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ.ಮಂ)

P.R. 270

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ಕ್ಯಾಲಸನಹಳ್ಳಿ ಗ್ರಾಮದ ಸ.ನಂ. 88ರ ಜಮೀನುಗಳಲ್ಲಿರುವ 0.15 ಗುಂಟೆ ಬಿ–ಖರಾಬು ಜಮೀನನ್ನು ಶ್ರೀ ಕೆ.ಎಂ. ನವೀನ್ ಬಿನ್ ಕೆ.ಎನ್.ಮಂಜುನಾಥ್ ರವರಿಗೆ ಮಂಜೂರು ಮಾಡುವ ಕುರಿತು.

ಓದಲಾಗಿದೆ : (1) ಪತ್ರ ಸಂಖ್ಯೆ: ಎಲ್‌ಎನ್‌ಡಿ(ಪೂ):ಸಿ:ಆರ್167/2011–12, ದಿನಾಂಕ: 02.01.2012 ಮತ್ತು 10.07.2012

(2) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 458 ಎಲ್‌ಜಿಬಿ 2012, ದಿನಾಂಕ: 17.08.2012

(3) ಪತ್ರ ಸಂಖ್ಯೆ: ಎಲ್‌ಎನ್‌ಡಿ(ಪೂ):ಸಿ.ಆರ್167/2011–12, ದಿನಾಂಕ: 06.11.2012

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ಕ್ಯಾಲಸನಹಳ್ಳಿ ಗ್ರಾಮದ ಸ.ನಂ.88 ರಲ್ಲಿ ಒಟ್ಟು 8.00 ಎಕರೆ ಜಮೀನಿದ್ದು 0.15 ಗುಂಟೆ ಖರಾಬು ಜಮೀನು ಶ್ರೀ ಕೆ.ಎಂ. ನವೀನ್ ಬಿನ್ ಕೆ.ಎನ್. ಮಂಜುನಾಥ್ ರವರ ಒಡೆತನದ ಜಮೀನಿನಿಂದ ಸುತ್ತುವರೆದಿದ್ದು, ಖರಾಬಿನ ಗುಣಲಕ್ಷಣಗಳನ್ನು ಕಳೆದುಕೊಂಡಿರುವುದರಿಂದ ಸದರಿ ಜಮೀನಿನ ಮೇಲೆ ಸಾರ್ವಜನಿಕ ಹಕ್ಕನ್ನು ವಿಹಿತಗೊಳಿಸಿ ಶ್ರೀ ಕೆ.ಎಂ. ನವೀನ್ ಬಿನ್ ಕೆ.ಎನ್. ಮಂಜುನಾಥ್ ರವರಿಗೆ ಮಾರುಕಟ್ಟೆ ಬೆಲೆ ನಿಗದಿಪಡಿಸಿ ಮಂಜೂರು ಮಾಡುವ ಬಗ್ಗೆ ಜಿಲ್ಲಾಧಿಕಾರಿ, ಬೆಂಗಳೂರು ಇವರು ಕೋರಿದ್ದು, ಸರ್ಕಾರದ ಪೂರ್ವಾನುಮೋದನೆ ಪಡೆದು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 68(1)ರನ್ವಯ ದಿನಾಂಕ: 29.03.2012ರ ರಾಜ್ಯ ಪತ್ರದಲ್ಲಿ ಪ್ರಕಟಣೆ ಹೊರಡಿಸಿದ್ದು, ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ.

ಮೇಲೆ ಓದಲಾದ (2) ರಲ್ಲಿ ಸದರಿ ಜಮೀನನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ(5) ರಡಿ ದಿನಾಂಕ: 23.08.2012ರ ರಾಜ್ಯಪತ್ರದಲ್ಲಿ ಪ್ರಕಟಣೆ ಹೊರಡಿಸಲಾಗಿರುತ್ತದೆ. ಶ್ರೀ ಕೆ.ಎಂ. ನವೀನ್ ಬಿನ್ ಕೆ.ಎನ್. ಮಂಜುನಾಥ್ ರವರು ಮನವಿ ಸಲ್ಲಿಸಿ, ಸದರಿ 0.15 ಗುಂಟೆ ಖರಾಬು ಜಮೀನನ್ನು ಮಾರುಕಟ್ಟೆ ದರದಲ್ಲಿ ತಮಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ಜಮೀನು ಸ.ನಂ.88 ರಲ್ಲಿ ವಿಲೀನಗೊಂಡಿರುವುದರಿಂದ ಈ ಖರಾಬು ಜಮೀನನ್ನು ಹರಾಜು ಮಾಡಲು ಸಾಧ್ಯವಿಲ್ಲವೆಂದು, ಹಿಡುವಳಿದಾರರಿಗೆ ಸೂಕ್ತ ಮಾರುಕಟ್ಟೆ ದರ ವಿಧಿಸಿ ಮಂಜೂರು ಮಾಡಬಹುದಾಗಿರುತ್ತದೆಂದು ಹಾಗೂ ಸದರಿ ಜಮೀನಿನ ಮಾರ್ಗಸೂಚಿ ದರ ಎಕರೆಯೊಂದಕ್ಕೆ ರೂ. 80 ಲಕ್ಷಗಳಾಗಿದ್ದು, ಮಾರುಕಟ್ಟೆ ದರ ರೂ.1.00 ಕೋಟಿಗಳಾಗಿರುತ್ತದೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 458 ಎಲ್.ಜಿ.ಬಿ 2012, ಬೆಂಗಳೂರು, ದಿನಾಂಕ: 28–01–2013

ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ ಹೋಬಳಿ, ಕ್ಯಾಲಸನಹಳ್ಳಿ ಗ್ರಾಮದ ಸ.ನಂ.88 ರಲ್ಲಿನ ಒಟ್ಟು 0.15 ಗುಂಟೆ ಬಿ–ಖರಾಬು ಜಮೀನನ್ನು ಪ್ರಚಲಿತ ಮಾರುಕಟ್ಟೆ ದರವಾದ ಪ್ರತಿ ಎಕರೆಗೆ ರೂ. 1.00 ಕೋಟಿ (ರೂಪಾಯಿ ಒಂದು ಕೋಟಿ ಮಾತ್ರ) ದರವನ್ನು ವಿಧಿಸಿ ನಿಯಮಾನುಸಾರ ಇತರೆ ಶುಲ್ಕಗಳನ್ನು ಪಾವತಿಸುವ ಷರತ್ತಿಗೊಳಪಟ್ಟ ಶ್ರೀ ಕೆ.ಎಂ. ನವೀನ್ ಬಿನ್ ಕೆ.ಎನ್. ಮಂಜುನಾಥ್‌ರವರಿಗೆ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂ.ಮಂ)

P.R. 271

ಕಂದಾಯ ಸಚಿವಾಲಯ

ವಿಷಯ : ಮೈಸೂರು ನಗರದಲ್ಲಿ ಮಾಜಿ ಸೈನಿಕರ ಅಂಶದಾಯಿ ಆರೋಗ್ಯ ಯೋಜನೆ ಹಾಗೂ ಕ್ಯಾಂಟೀನ್ ಸ್ಟೋರ್ಸ್‌ಗೆ ಜಮೀನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
(1) ಜಿಲ್ಲಾಧಿಕಾರಿ, ಮೈಸೂರು ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ(1)ಸಿಆರ್: 167/ 2008-09 ದಿನಾಂಕ: 07-07-2009

(2) ಪತ್ರ ಸಂಖ್ಯೆ: ಎಲ್‌ಎನ್‌ಡಿ(1)ಸಿಆರ್:167/2008-09 ದಿನಾಂಕ: 16-01-2010

(3) ಪ್ರಾದೇಶಿಕ ಆಯುಕ್ತರು, ಮೈಸೂರು ಇವರ ಪತ್ರ ಸಂ: ಎಲ್‌ಎನ್‌ಡಿ/ಸಿಆರ್/ 119/09-10 ದಿನಾಂಕ: 15-04-2010

(4) ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 66 ಎಲ್‌ಜಿಎಂ 2009 ದಿನಾಂಕ: 23-12-2010.

ಪ್ರಸ್ತಾವನೆ :

ಜಿಲ್ಲಾಧಿಕಾರಿ, ಮೈಸೂರು ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಅವರ ಕಛೇರಿ ಆವರಣದ ಸಿಟಿ ಸರ್ವೆ ನಂ. 2048 ರಲ್ಲಿ 0.14 ಎಕರೆ ವಿಸ್ತೀರ್ಣದ ಸರ್ಕಾರಿ ಜಮೀನನ್ನು ಮೈಸೂರು ಪತ್ರಕರ್ತರ ಸಂಘ ಇವರಿಗೆ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿದ್ದರು.

2. ಈ ಕುರಿತಂತೆ ನಗರಾಭಿವೃದ್ಧಿ ಇಲಾಖೆಯೊಂದಿಗೆ ಸಮಾಲೋಚಿಸಿದ ನಂತರ ಪ್ರಸ್ತಾವನೆಯನ್ನು ಕೈಬಿಡಲಾಗಿತ್ತು.

3. ನಂತರ, ಜಿಲ್ಲಾಧಿಕಾರಿ, ಮೈಸೂರು ಇವರು ದಿನಾಂಕ: 16.01.2010ರ ಪತ್ರದಲ್ಲಿ ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಮಾಜಿ ಸೈನಿಕರ ಅಂಶದಾಯಿ ಆರೋಗ್ಯ ಯೋಜನೆ ಹಾಗೂ ಕ್ಯಾಂಟೀನ್ ಪ್ರಾರಂಭಿಸಲು ಜಮೀನನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

4. ಆ ಮೇರೆಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳ, 1969, ನಿಯಮ 21 ರನ್ವಯ, ಪ್ರಸಕ್ತ ಮಾರುಕಟ್ಟೆ ಬೆಲೆ ಹಾಗೂ ಇತರೆ ಶುಲ್ಕಗಳನ್ನು ವಿಧಿಸಿ 0.14 ಎಕರೆ ಜಮೀನನ್ನು ಮಾಜಿ ಸೈನಿಕರ ಅಂಶದಾಯಿ ಆರೋಗ್ಯ ಯೋಜನೆ ಹಾಗೂ ಕ್ಯಾಂಟೀನ್ ಸ್ಟೋರ್ಸ್ ಪ್ರಾರಂಭಿಸಲು ದಿನಾಂಕ: 23.12.2010ರ ಸರ್ಕಾರದ ಪತ್ರದಲ್ಲಿ ಮಂಜೂರಾತಿ ನೀಡಲಾಗಿತ್ತು.

5. ನಂತರ ಉಪಾಧ್ಯಕ್ಷರು, ಜಿಲ್ಲಾ ಸೈನಿಕ ಭವನ, ಮೈಸೂರು ಇವರು ದಿನಾಂಕ: 29.07.2011 ರಂದು ಮನವಿ ಸಲ್ಲಿಸಿ ಉಲ್ಲೇಖಿತ ಜಮೀನನ್ನು ಉಚಿತವಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿದೆ.

ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 82 ಎಲ್‌ಜಿಎಂ 2011 ಬೆಂಗಳೂರು, ದಿನಾಂಕ: 22.10.2012

ಜಿಲ್ಲಾಧಿಕಾರಿ, ಮೈಸೂರು ಇವರ ಕಛೇರಿಯ ಆವರಣದಲ್ಲಿರುವ ಸಿಟಿ ಸರ್ವೆ ನಂ. 2048 ರಲ್ಲಿ 0.14 ಗುಂಟೆ ವಿಸ್ತೀರ್ಣದ ಸರ್ಕಾರಿ ಭೂಮಿಯನ್ನು ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಮಾಜಿ ಸೈನಿಕರ ಅಂಶದಾಯಿ ಆರೋಗ್ಯ ಯೋಜನೆ ಹಾಗೂ ಕ್ಯಾಂಟೀನ್ ಸ್ಟೋರ್ಸ್ ಪ್ರಾರಂಭಿಸಲು ಉಚಿತವಾಗಿ ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಶಿವಲಿಂಗಯ್ಯ
ಪೀಠಾಧಿಕಾರಿ
ಕಂದಾಯ ಇಲಾಖೆ (ಭೂ.ಮಂ-2)

P.R. 272

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ, ಗ್ರಾಮದ ಸ.ನಂ.167/ಪಿ59ರಲ್ಲಿ 25 ಎಕರೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಜಮೀನನ್ನು ಶಿವಮೊಗ್ಗ ಜಿಲ್ಲಾ ಒಕ್ಕಲಿಗರ ಸಂಘಕ್ಕೆ ಖಾಯಂ ಆಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
(1) ಅಧ್ಯಕ್ಷರು, ಶಿವಮೊಗ್ಗ ಜಿಲ್ಲಾ ಒಕ್ಕಲಿಗರ ಸಂಘ ಶಿವಮೊಗ್ಗ, ಇವರ ಮನವಿ ದಿನಾಂಕ: 23/09/2012.

(2) ಜಿಲ್ಲಾಧಿಕಾರಿ ಶಿವಮೊಗ್ಗ ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ(1) ಸಿಆರ್-389/12-13 (6072) ದಿನಾಂಕ: 9/11/2012.

(3) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 42 ಎಲ್‌ಜಿಎಸ್ 2000, ದಿನಾಂಕ: 23/11/2001.

(4) ಜಿಲ್ಲಾಧಿಕಾರಿ ಶಿವಮೊಗ್ಗರವರ ಆದೇಶ ಸಂಖ್ಯೆ: ಎಲ್‌ಎನ್‌ಡಿ(1) ಸಿಆರ್ 255/99-2000 ದಿನಾಂಕ: 21/12/2001.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ: 23/09/2012 ರಂದು ಅಧ್ಯಕ್ಷರು, ಶಿವಮೊಗ್ಗ ಜಿಲ್ಲಾ ಒಕ್ಕಲಿಗರ ಸಂಘ, ಶಿವಮೊಗ್ಗ ಇವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ ಗ್ರಾಮದ ಸ.ನಂ.167/ಪಿ59ರಲ್ಲಿ 25 ಎಕರೆ ಜಮೀನನ್ನು ಬಡ ವಿದ್ಯಾರ್ಥಿಗಳಿಗೆ

ಹಾಸ್ಟೆಲ್‌ನ್ನು ನಿರ್ಮಿಸುವ ಹಾಗೂ ಇನ್ನಿತರ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುವುದರಿಂದ ಗುತ್ತಿಗೆ ಆಧಾರದ ಮೇಲೆ ಮಂಜೂರಾಗಿರುವುದನ್ನು ಖಾಯಂ ಆಗಿ ರಿಯಾಯಿತಿ ದರದಲ್ಲಿ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ: 09–11–2012ರ ಪತ್ರದಲ್ಲಿ ಜಿಲ್ಲಾಧಿಕಾರಿ, ಶಿವಮೊಗ್ಗ ಇವರು ಶಿವಮೊಗ್ಗ ಜಿಲ್ಲಾ ಒಕ್ಕಲಿಗರ ಸಂಘ, ಶಿವಮೊಗ್ಗ ಕರ್ನಾಟಕ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ 1960ರ ಅಡಿಯಲ್ಲಿ ನೋಂದಣಿ ಆಗಿದ್ದು, ಸಂಘವು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುವುದರ ಜೊತೆಗೆ ಒಕ್ಕಲಿಗರ ಸಮುದಾಯದ ಅಭಿವೃದ್ಧಿಗಾಗಿ ಪ್ರಯತ್ನಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ. ಸದರಿ ಸಂಘಕ್ಕೆ ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ ಗ್ರಾಮದ ಸರ್ವೆ ನಂ. 167ರಲ್ಲಿ 25 ಎಕರೆ ಜಮೀನನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಸಾಗುವಳಿ ಮಾಡುವ ಉದ್ದೇಶಕ್ಕಾಗಿ 1963 ರಲ್ಲಿಯೇ ಮಂಜೂರು ಮಾಡಲಾಗಿರುತ್ತದೆ. ಸದರಿ ಸಂಘಕ್ಕೆ ಮೇಲೆ ಓದಲಾದ (3)ರ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 42 ಎಲ್‌ಜಿಎಸ್ 2000 ದಿನಾಂಕ: 23/11/2001ರ ನಿರ್ದೇಶನದಂತೆ ಮೇಲೆ ಓದಲಾದ (4)ರ ಆದೇಶ ಸಂಖ್ಯೆ: ಎಲ್‌ಎನ್‌ಡಿ(1)ಸಿಆರ್255/99–2000 ದಿನಾಂಕ: 21/12/2001ರಲ್ಲಿ 01/08/1993 ರಿಂದ ಪೂರ್ವಾನ್ವಯವಾಗುವಂತೆ 30 ವರ್ಷಕ್ಕೆ ಪ್ರಸ್ತಾಪಿತ 25 ಎಕರೆ ಜಮೀನನ್ನು ಎಕರೆ ಒಂದಕ್ಕೆ ಒಂದು ವರ್ಷಕ್ಕೆ 1000/– ದಂತೆ ನೆಲ ಬಾಡಿಗೆ ವಿಧಿಸಿ ಮಂಜೂರು ಮಾಡಲಾಗಿರುತ್ತದೆ. ಎಂಬುದಾಗಿ ವರದಿ ಮಾಡಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 86 ಎಲ್‌ಜಿಎಸ್ 2012, ಬೆಂಗಳೂರು ದಿನಾಂಕ: 24/01/2013.

ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ, ಗ್ರಾಮದ ಸ.ನಂ.167/ಪಿ59ರಲ್ಲಿ 25 ಎಕರೆ ಜಮೀನನ್ನು ಶಿವಮೊಗ್ಗ ಜಿಲ್ಲಾ ಒಕ್ಕಲಿಗರ ಸಂಘಕ್ಕೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿರುವುದನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಬೇಕೆಂಬ ಹಾಗೂ ಸದರಿ ಜಮೀನನ್ನು 25 ವರ್ಷಗಳ ಕಾಲ ಪರಭಾರೆ ಮಾಡುವುದಾಗಲಿ ಅಥವಾ ಉಪ ಗುತ್ತಿಗೆಗೆ ನೀಡುವುದಾಗಲಿ ಮಾಡಬಾರದೆಂಬ ಷರತ್ತಿಗೊಳಪಟ್ಟು, ಮಾರ್ಗಸೂಚಿ ದರದ ಶೇಕಡ 25 ರಷ್ಟನ್ನು ಹಾಗೂ ನಿಯಮಾನುಸಾರ ಇತರೆ ವೆಚ್ಚಗಳನ್ನು ವಿಧಿಸಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ–1)

P.R. 273

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆರ್‌ಡಿ17:ಎಲ್‌ಜಿಆರ್:2012, ಬೆಂಗಳೂರು, ದಿನಾಂಕ: 29.01.2013

ಆದೇಶ ಸಂಖ್ಯೆ: ಆರ್‌ಡಿ 17 ಎಲ್‌ಜಿಆರ್ 2012 ಭಾಗ–1 ದಿನಾಂಕ: 22.12.2012ರ ಆದೇಶ ಭಾಗದಲ್ಲಿ 8ನೇ ಸಾಲಿನಲ್ಲಿರುವ "(Apex Creativity Centre) ಸ್ಥಾಪಿಸಲು" ನಂತರ ಈ ಕೆಳಕಂಡಂತೆ ಓದಿಕೊಳ್ಳುವುದು.

"ಪ್ರಸ್ತಾಪಿತ ಜಮೀನನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಉಚಿತವಾಗಿ ವರ್ಗಾಯಿಸಲಾಗಿದೆ. ತದನಂತರ ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಷನ್, ರಾಯಚೂರು ಇವರೊಂದಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಒಡಂಬಡಿಕೆ ಮಾಡಿಕೊಂಡು ಸದರಿ ಜಮೀನನ್ನು ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಷನ್, ರಾಯಚೂರು ಇವರಿಗೆ ವರ್ಗಾಯಿಸಲು ಅನುಮತಿಸಿದೆ."

ಹೆಚ್.ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ–3)

P.R. 274

ಕಂದಾಯ ಸಚಿವಾಲಯ

ವಿಷಯ : ಶ್ರೀ ಕನಕದಾಸ ಸೇವಾ ಟ್ರಸ್ಟ್ ಶಿವಮೊಗ್ಗ ಇವರಿಗೆ ಶಿವಮೊಗ್ಗ ತಾಲ್ಲೂಕು ಸೋಮಿನಕೊಪ್ಪ ಗ್ರಾಮ ಕಸಬಾ ಹೋಬಳಿ, ಸರ್ವೆ ನಂ. 123 ರಲ್ಲಿ 2.00 ಎಕರೆ ಜಮೀನನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
(1) ಕಾರ್ಯದರ್ಶಿ, ಶ್ರೀ ಕನಕದಾಸ ಸೇವಾ ಟ್ರಸ್ಟ್ ಶಿವಮೊಗ್ಗ ಇವರ ಮನವಿ ದಿನಾಂಕ: 10–04–2012.
(2) ಜಿಲ್ಲಾಧಿಕಾರಿ ಶಿವಮೊಗ್ಗ ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ(1)ಸಿಆರ್–156/12–13 (2944) ದಿನಾಂಕ: 13/09/2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಕಾರ್ಯದರ್ಶಿ, ಶ್ರೀ ಕನಕದಾಸ ಸೇವಾ ಟ್ರಸ್ಟ್ ಶಿವಮೊಗ್ಗ ಇವರು ದಿನಾಂಕ: 10/04/2012ರಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಶಿವಮೊಗ್ಗ ತಾಲ್ಲೂಕು ಕಸಬಾ ಹೋಬಳಿ, ಸೋಮಿನಕೊಪ್ಪ ಗ್ರಾಮದ ಸರ್ವೆ ನಂ.123 ರಲ್ಲಿ 2.00 ಎಕರೆ ಸರ್ಕಾರಿ ಜಮೀನನ್ನು ಅತ್ಯಂತ ಕನಿಷ್ಠ ದರದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರುವ ವರ್ಗದ ಜನರ ವಿದ್ಯಾರ್ಥಿ ಸಮುದಾಯಕ್ಕೆ ಅನುಕೂಲವಾಗುವಂತೆ ಹಾಗೂ ಅವರ ಅಭಿವೃದ್ಧಿಗಾಗಿ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳಲು ಕಟ್ಟಡ ನಿರ್ಮಾಣ ಸಲುವಾಗಿ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಜಿಲ್ಲಾಧಿಕಾರಿ,.....ಶಿವಮೊಗ್ಗ ಇವರ ಪತ್ರ ದಿನಾಂಕ: 13–09–2012ರಲ್ಲಿ ಶ್ರೀ ಕನಕದಾಸ ಸೇವಾ ಟ್ರಸ್ಟ್ ಶಿವಮೊಗ್ಗ, ನೋಂದಾಯಿತ ಸಂಸ್ಥೆಯಾಗಿದ್ದು, ದಿನಾಂಕ: 23–04–2012 ರಂದು ಸ್ಥಾಪನೆಯಾಗಿದೆ. ಸದರಿ ಟ್ರಸ್ಟ್ ಶಿಕ್ಷಣ ಸಂಸ್ಥೆಯಾಗಿ ಮತ್ತು ಸಾಂಸ್ಕೃತಿಕ

ಚಟುವಟಿಕೆಗಳನ್ನು ನಡೆಸುವ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸುವ ಗುರಿಯನ್ನು ಹೊಂದಿರುತ್ತದೆ. ಮತ್ತು ಸದರಿ ಟ್ರಸ್ಟ್‌ನವರು ಕೋರಿರುವ ಜಮೀನಿನ ಮಾರ್ಗಸೂಚಿ ಬೆಲೆಯು ಒಂದು ಎಕರೆಗೆ ರೂ.9,68,500/– ಹಾಗೂ ಮಾರುಕಟ್ಟೆ ದರವು ರೂ. 11,00,000/– ಆಗಿರುತ್ತದೆ. ಎಂಬುದಾಗಿ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 82 ಎಲ್‌ಜಿಎಸ್ 2012, ಬೆಂಗಳೂರು ದಿನಾಂಕ: 24/01/2013.

ಶಿವಮೊಗ್ಗ ತಾಲ್ಲೂಕು, ಕಸಬಾ ಹೋಬಳಿ, ಸೋಮಿನಕೊಪ್ಪ ಗ್ರಾಮದ ಸರ್ವೆ ನಂ. 123ರಲ್ಲಿ 2.00 ಎಕರೆ ಜಮೀನನ್ನು ಶ್ರೀ ಕನಕದಾಸ ಸೇವಾ ಟ್ರಸ್ಟ್ ಶಿವಮೊಗ್ಗ ಇವರಿಗೆ ಶೈಕ್ಷಣಿಕ ಸಂಸ್ಥೆಯನ್ನು ನಿರ್ಮಾಣ ಮಾಡುವ ಸಲುವಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳ (1969) ನಿಯಮ 19(1) ಮತ್ತು 19(3) ರನ್ವಯ ಪ್ರಚಲಿತ ಮಾರುಕಟ್ಟೆ ದರದ ಶೇ.10 ರಷ್ಟು ವಿಧಿಸಿ ಸದರಿ ಗುತ್ತಿಗೆ ದರವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಶೇ. 10 ರಂತೆ ಹೆಚ್ಚಿಸುವ ಷರತ್ತಿನೊಂದಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

P.R. 275 ಕಂದಾಯ ಇಲಾಖೆ (ಭೂಮಂಜೂರಾತಿ–1)

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ, ಗ್ರಾಮದ ಸ.ನಂ.167/ಪಿ2ರಲ್ಲಿ 25 ಎಕರೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಜಮೀನನ್ನು ಶಿವಮೊಗ್ಗ ಜಿಲ್ಲಾ ಕುರುಬರ ಸಂಘಕ್ಕೆ ಖಾಯಂ ಆಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
(1) ಅಧ್ಯಕ್ಷರು ಶಿವಮೊಗ್ಗ ಜಿಲ್ಲಾ ಕುರುಬರ ಸಂಘ ಶಿವಮೊಗ್ಗ ಇವರ ಮನವಿ ದಿನಾಂಕ: 12/09/2012.
(2) ಜಿಲ್ಲಾಧಿಕಾರಿ ಶಿವಮೊಗ್ಗ ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ (1) ಸಿಆರ್–283/12–13(5004)12/13 ದಿನಾಂಕ: 9/11/2012.
(3) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಜಿಎಸ್ 2003 ದಿನಾಂಕ: 29–08–2003.
(4) ಜಿಲ್ಲಾಧಿಕಾರಿ ಜಿಲ್ಲಾಧಿಕಾರಿ ಶಿವಮೊಗ್ಗ ರವರ ಆದೇಶ ಸಂಖ್ಯೆ: ಎಲ್‌ಎನ್‌ಡಿ (1)ಸಿಆರ್1103/01–02, ದಿನಾಂಕ: 30/1/2004.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಅಧ್ಯಕ್ಷರು ಶಿವಮೊಗ್ಗ ಜಿಲ್ಲಾ ಕುರುಬರ ಸಂಘ (ರಿ) ಶಿವಮೊಗ್ಗ ಇವರು ಸರ್ಕಾರಕ್ಕೆ ದಿನಾಂಕ: 12/09/2012ರಲ್ಲಿ ಮನವಿಯನ್ನು ಸಲ್ಲಿಸಿ, ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ ಗ್ರಾಮದ ಸ.ನಂ.167/ಪಿ2ರಲ್ಲಿ 25 ಎಕರೆ ಜಮೀನನ್ನು ಬಡ ವಿದ್ಯಾರ್ಥಿಗಳಿಗೆ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶಾಶ್ವತವಾಗಿ ಹಾಸ್ಟೆಲ್ ಕಟ್ಟಡವನ್ನು ನಿರ್ಮಿಸಿ, ಹಾಗೂ ಕುರುಬರ ಜನಾಂಗಕ್ಕೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುವುದರಿಂದ ಗುತ್ತಿಗೆ ಆಧಾರದ ಮೇಲೆ ಮಂಜೂರಾಗಿರುವುದನ್ನು ಖಾಯಂ ಆಗಿ ರಿಯಾಯತಿ ದರದಲ್ಲಿ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ: 09–11–2012ರ ಪತ್ರದಲ್ಲಿ ಜಿಲ್ಲಾಧಿಕಾರಿ, ಶಿವಮೊಗ್ಗ ಇವರು ಶಿವಮೊಗ್ಗ ಜಿಲ್ಲಾ ಕುರುಬರ ಸಂಘ (ರಿ), ಶಿವಮೊಗ್ಗ ಇವರು ಕರ್ನಾಟಕ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ 1960ರ ಅಡಿಯಲ್ಲಿ ನೋಂದಾಯಿತವಾದ ಧಾರ್ಮಿಕ ಸಂಸ್ಥೆಯಾಗಿದ್ದು, ಸಂಘವು ಬಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುವುದರ ಜೊತೆಗೆ ಕುರುಬರ ಸಮುದಾಯದ ಅಭಿವೃದ್ಧಿಗಾಗಿ ಪ್ರಯತ್ನಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ. ಸದರಿ ಸಂಘಕ್ಕೆ ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ ಗ್ರಾಮದ ಸ.ನಂ. 167/ಪಿ2 ರಲ್ಲಿ 25 ಎಕರೆ ಜಮೀನನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಸಾಗುವಳಿ ಮಾಡುವ ಉದ್ದೇಶಕ್ಕಾಗಿ 1963 ರಲ್ಲಿಯೇ ಮಂಜೂರು ಮಾಡಲಾಗಿರುತ್ತದೆ. ಸದರಿ ಸಂಘಕ್ಕೆ ಮೇಲೆ ಓದಲಾದ (3)ರ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 32 ಎಲ್‌ಜಿಎಸ್ 2003 ದಿನಾಂಕ: 29–08–2003ರ ನಿರ್ದೇಶನದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶ ಸಂಖ್ಯೆ: ಎಲ್‌ಎನ್‌ಡಿ(1) ಸಿಆರ್ 1103/01–02, ದಿನಾಂಕ: 30/01/2004ರಲ್ಲಿ 1992–93 ರಿಂದ ಪೂರ್ವಾನ್ವಯವಾಗುವಂತೆ 30 ವರ್ಷಕ್ಕೆ ಪ್ರಸ್ತಾಪಿತ 25 ಎಕರೆ ಜಮೀನನ್ನು ಎಕರೆ ಒಂದಕ್ಕೆ ಒಂದು ವರ್ಷಕ್ಕೆ ರೂ. 1000/– ದಂತೆ ನೆಲ ಬಾಡಿಗೆ ವಿಧಿಸಿ ಮಂಜೂರು ಮಾಡಲಾಗಿರುತ್ತದೆ ಎಂಬುದಾಗಿ ವರದಿ ಮಾಡಿರುತ್ತಾರೆ. ಸಂಸ್ಥೆಯ ಕೋರಿಕೆಯಂತೆ ಗುತ್ತಿಗೆಗೆ ಮಂಜೂರಾಗಿರುವ ಜಮೀನನ್ನು ಖಾಯಂ ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 85 ಎಲ್‌ಜಿಎಸ್ 2012, ಬೆಂಗಳೂರು ದಿನಾಂಕ: 24/01/2013.

ಶಿವಮೊಗ್ಗ ತಾಲ್ಲೂಕು, ಅಗಸವಳ್ಳಿ, ಗ್ರಾಮದ ಸ.ನಂ.167/ಪಿ2 ರಲ್ಲಿ 25–00 ಎಕರೆ ಜಮೀನನ್ನು ಶಿವಮೊಗ್ಗ ಜಿಲ್ಲಾ ಕುರುಬರ ಸಂಘಕ್ಕೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿರುವುದನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಬೇಕೆಂಬ ಹಾಗೂ ಸದರಿ ಜಮೀನನ್ನು 25 ವರ್ಷಗಳ ಪರಭಾರೆ ಮಾಡುವುದಾಗಲಿ ಅಥವಾ ಉಪ ಗುತ್ತಿಗೆಗೆ ನೀಡುವುದಾಗಲಿ ಮಾಡಬಾರದೆಂಬ ಷರತ್ತಿಗೊಳಪಟ್ಟು, ಮಾರ್ಗಸೂಚಿ ದರದ ಶೇಕಡ 25 ರಷ್ಟನ್ನು ಹಾಗೂ ನಿಯಮಾನುಸಾರ ಇತರೆ ವೆಚ್ಚಗಳನ್ನು ವಿಧಿಸಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

P.R. 276 ಕಂದಾಯ ಇಲಾಖೆ (ಭೂಮಂಜೂರಾತಿ–1)

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ಸೋಗಾನೆ ಗ್ರಾಮದ ಸ.ನಂ.120 ರಲ್ಲಿ 100-00 ಎಕರೆ ಜಮೀನನ್ನು ರಾಜೀವ್ ಆವಾಸ್ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಹಾಗೂ ಆಶ್ರಯ ಯೋಜನೆ ಅಡಿ ಮನೆಗಳನ್ನು ನಿರ್ಮಿಸಲು ವಸತಿ ಇಲಾಖೆಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : (1) ಜಿಲ್ಲಾಧಿಕಾರಿ ಶಿವಮೊಗ್ಗ ರವರ ಪತ್ರ ಸಂಖ್ಯೆ: ಎಲ್ಎನ್‌ಡಿ(1)ಎಸ್ಆರ್-005/12-13 (8698/12) ದಿನಾಂಕ: 11/1/2013.

(2) ಜಿಲ್ಲಾಧಿಕಾರಿ ಶಿವಮೊಗ್ಗ ರವರ ಪತ್ರ ಸಂಖ್ಯೆ: ಎಲ್ಎನ್‌ಡಿ(1)ಎಸ್ಆರ್-005/12-13 (8698/12-13) ದಿನಾಂಕ: 24/01/2013.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಜಿಲ್ಲಾಧಿಕಾರಿ, ಶಿವಮೊಗ್ಗ ಇವರ ಆದೇಶದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೇಂದ್ರ ಪುರಸ್ಕೃತ ರಾಜೀವ್ ಆವಾಸ್ ಯೋಜನೆಯಡಿ (ಪೈಲೆಟ್) ನಗರ ಸಭೆ ಶಿವಮೊಗ್ಗವನ್ನು ಆಯ್ಕೆ ಮಾಡಿದ್ದು ಈ ಯೋಜನೆಯಡಿ ನಗರದ ಕೊಳಚೆ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸಲು ಅಗತ್ಯವಾದ ಜಮೀನು ಗುರುತಿಸಿ ಮಂಜೂರಾತಿಗೆ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳು ಪ್ರಸ್ತಾವನೆ ತಯಾರಿಸಿ ಸಲ್ಲಿಸಿರುವಂತೆ ಸೋಗಾನೆ ಗ್ರಾಮದ ಸ.ನಂ.120 ರಲ್ಲಿ 100-00 ಎಕರೆ ಜಮೀನನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಳಚೆ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರದ ಘಟನೋತ್ತರ ಮಂಜೂರಾತಿಗೆ ಒಳಪಟ್ಟು ಕರ್ನಾಟಕ ಭೂ ಕಂದಾಯ ಕಾಯ್ದೆ 1974 ಕಲಂ 71 ರಡಿ ಕಾಯ್ದಿರಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಜಿಲ್ಲಾಧಿಕಾರಿ, ಶಿವಮೊಗ್ಗ ರವರ ಪತ್ರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ, ಕೊಳಚೆ ಪ್ರದೇಶದ ಜನರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರದ ಘಟನೋತ್ತರ ಮಂಜೂರಾತಿಗೆ ಒಳಪಟ್ಟು ಕರ್ನಾಟಕ ಭೂ ಕಂದಾಯ ಕಾಯ್ದೆ 1974 ಕಲಂ 71 ರಡಿ ಕಾಯ್ದಿರಿಸಿ ಅದೇಶಿಸಿದ್ದು, ಸದರಿ ಆದೇಶಕ್ಕೆ ಸರ್ಕಾರದ ಘಟನೋತ್ತರ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ. ಹಾಗೂ ಸದರಿ ಜಮೀನಿನ ಮಾರುಕಟ್ಟೆ ದರ ಎಕರೆಯೊಂದಕ್ಕೆ ರೂ.617500-00 ಗಳೆಂದು ವರದಿ ಮಾಡಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 05 ಎಲ್‌ಜಿಎಸ್ 2013, ಬೆಂಗಳೂರು ದಿನಾಂಕ: 02/02/2013.

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ಸೋಗಾನೆ ಗ್ರಾಮದ ಸ.ನಂ.120ರಲ್ಲಿ 100-00 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 50-00 ಎಕರೆ ಜಮೀನನ್ನು ರಾಜೀವ್ ಆವಾಸ್ ಯೋಜನೆಯಡಿ (ಪೈಲೆಟ್) ಮನೆಗಳನ್ನು ನಿರ್ಮಿಸಲು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಮತ್ತು 50-00 ಎಕರೆ ಜಮೀನನ್ನು ಆಶ್ರಯ ಯೋಜನೆಯಡಿಯಲ್ಲಿ ವಸತಿ ಗೃಹಗಳನ್ನು ನಿರ್ಮಿಸಲು ವಸತಿ ಇಲಾಖೆಗೆ ಹಸ್ತಾಂತರಿಸಲು ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1969 ಕಲಂ 20(1)(ಎ) ಅನ್ವಯ ಮಾರುಕಟ್ಟೆ ದರದ ಶೇ.50 ರಷ್ಟು ದರ ಹಾಗೂ ನಿಯಮಾನುಸಾರ ಇತರೆ ಶುಲ್ಕಗಳನ್ನು ವಿಧಿಸಿ ಉದ್ದೇಶಿತ ಯೋಜನೆಗೆ ಮಾತ್ರ ಉಪಯೋಗಿಸಬೇಕೆಂಬ ಷರತ್ತನ್ನು ವಿಧಿಸಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಮಂಜೂರಾತಿ-1)

P.R. 277

ಕಂದಾಯ ಸಚಿವಾಲಯ

ವಿಷಯ : ಉಡುಪಿ ತಾಲ್ಲೂಕು ಕೋಟಾ ಹೋಬಳಿಯ ಕೋಡಿ ಗ್ರಾಮದ ಕೋಡಿ ಹೊಸಬೆಂಗ್ರೆ ಮತ್ತು ಬೆಂಗ್ರೆ ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯಲ್ಲಿ ಅತಿಕ್ರಮಣ ಮಾಡಿ ವಾಸ್ತವ್ಯ ಹೊಂದಿರುವವರಿಗೆ ಸಕ್ರಮೀಕರಣ ಮಾಡುವ ಬಗ್ಗೆ.

ಓದಲಾಗಿದೆ : (1) ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ಇವರ ಪತ್ರ ಸಂಖ್ಯೆ: ಎನ್‌ಸಿಆರ್/ಸಿಆರ್/ 126/2012-13/58423 ದಿನಾಂಕ: 16-10-2012

(2) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 12 ಎಲ್‌ಜಿಎ 91 ದಿನಾಂಕ:29-09-1994

ಪ್ರಸ್ತಾವನೆ :

ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ಇವರು ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನುಸಾರ ಉಡುಪಿ ತಾಲ್ಲೂಕು ಕೋಟಾ ಹೋಬಳಿಯ ಕೋಡಿ ಗ್ರಾಮದ ಕೋಡಿ ಹೊಸಬೆಂಗ್ರೆ ಮತ್ತು ಬೆಂಗ್ರೆ ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯಲ್ಲಿ ಅತಿಕ್ರಮಣ ಮಾಡಿ 381 ಜನರು ಮನೆಗಳನ್ನು ನಿರ್ಮಿಸಿರುತ್ತಾರೆ ಹಾಗೂ 110 ಜನರು ಕೃಷಿಗಾಗಿ ಜಮೀನು ಅತಿಕ್ರಮಣ ಮಾಡಿರುತ್ತಾರೆ. ಜಿಲ್ಲಾಧಿಕಾರಿಯವರ ವರದಿಯ ಪ್ರಕಾರ ಅತಿಕ್ರಮಣ ಮಾಡಿರುವ ವಿವರಗಳು ಈ ಕೆಳಕಂಡಂತಿವೆ:

1.	ಸರ್ಕಾರಿ ಅನಾಧೀನ ಭೂಮಿ	– 45.19 ಎಕರೆ
2.	ಪೊರಂಬೋಕು	– 38.54 ಎಕರೆ
3.	ಸಮುದ್ರ ಒತ್ತುವರಿ	– 41.15 ಎಕರೆ
	ಒಟ್ಟು	**– 124.88 ಎಕರೆ**

2. ಉಡುಪಿ ಜಿಲ್ಲಾಧಿಕಾರಿಯವರು ಮೇಲೆ ಓದಲಾದ ಕ್ರಮಸಂಖ್ಯೆ (1)ರ ದಿನಾಂಕ: 16.10.2012ರ ಪತ್ರದಲ್ಲಿ 38.54 ಎಕರೆ ಪೊರಂಬೋಕು ಜಮೀನು, 45.19 ಎಕರೆ ಸರ್ಕಾರಿ ಅನಾಧೀನ ಮತ್ತು ಸಿ.ಆರ್.ಝಡ್ ಪ್ರದೇಶದಲ್ಲಿ ಒತ್ತುವರಿಯಾದ 41.15 ಎಕರೆ ಒತ್ತುವರಿ ಜಾಗವನ್ನು ಸಕ್ರಮೀಕರಣಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಹಲವಾರು ಮಂದಿ ಮನೆಗಳನ್ನು ನಿರ್ಮಿಸಿರುತ್ತಾರೆ ಮತ್ತೆ ಕೆಲವರು ಕೃಷಿಗಾಗಿ ಬಳಸುತ್ತಿದ್ದಾರೆ. ಇವರಲ್ಲಿ ಬಹುತೇಕರು ಮೀನುಗಾರ ಸಮುದಾಯದವರು ಹಾಗೂ ಸಣ್ಣ ರೈತರಾಗಿರುತ್ತಾರೆ.

3. ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿನ ಸರ್ಕಾರಿ ಆದೇಶದಲ್ಲಿ, 1994ರಲ್ಲಿ ಇಂಥಹದೇ ಸಂದರ್ಭದಲ್ಲಿ ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರಿ ಭೂಮಿ ಅತಿಕ್ರಮಣ ಮಾಡಿಕೊಂಡಿರುವವರನ್ನು ಸಕ್ರಮೀಕರಣಗೊಳಿಸಲಾಗಿರುತ್ತದೆ:

1. ಪ್ರಯೋಜನಾರ್ಥಿಗಳು ಮೋಜಣಿ ಶುಲ್ಕ, ಪರಿವರ್ತನಾ ದಂಡ ಮತ್ತು ರಾಜಿ ಶುಲ್ಕವನ್ನು ನಿಯಮಗಳ ರೀತ್ಯಾ ಪಾವತಿಸತಕ್ಕದ್ದು;
2. ಜಮೀನು ಮಂಜೂರು ಮಾಡುವ ವಿಸ್ತೀರ್ಣವು ಉಪ ವಿಭಾಗ ತಯಾರಿಸುವ ಸಮಯದಲ್ಲಿನ ವಾಸ್ತವ ಅಳತೆಯಂತೆ ಇರತಕ್ಕದ್ದು;
3. ಮಂಜೂರು ಮಾಡುವ ನಿವೇಶನವನ್ನು ಸ್ವಾಧೀನ ಪತ್ರವನ್ನು ನೀಡಿದ ದಿನದಿಂದ 15 ವರ್ಷಗಳ ಅವಧಿಯವರೆಗೆ ಪರಭಾರೆ ಮಾಡಕೂಡದು;
4. ನಿವೇಶನದ ಪ್ರಸ್ತುತ ಉಪಯೋಗವನ್ನು ಯಾವುದೇ ಕಾರಣಕ್ಕೂ ಬದಲಾಯಿಸಕೂಡದು. ನಿವೇಶನವನ್ನು ವಾಸ್ತವ್ಯದ ಉದ್ದೇಶಕ್ಕಾಗಿ ಮಂಜೂರು ಮಾಡಿದ್ದಲ್ಲಿ ಮನೆ ನಿರ್ಮಿಸುವುದಕ್ಕಾಗಿಯೇ ಹಾಗೂ ಕೃಷಿಗಾಗಿ ಮಂಜೂರು ಮಾಡಿದ್ದಲ್ಲಿ ಕೃಷಿಗಾಗಿಯೇ ಬಳಸತಕ್ಕದ್ದು;
5. ಮಂಜೂರಾತಿಯ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ ಅಥವಾ ತಪ್ಪು ಮಾಹಿತಿ ನೀಡಿ ಮಂಜೂರಾತಿ ಪಡೆದಿದ್ದರೆ ಅಂತಹ ಮಂಜೂರಾತಿಯನ್ನು ರದ್ದುಗೊಳಿಸತಕ್ಕದ್ದು.

4. ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಗಳಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಅಳವಡಿಸಿ ಮತ್ತು 1994ರಲ್ಲಿ ನಿಗದಿ ಪಡಿಸಿದ ಷರತ್ತುಗಳನ್ನು ವಿಧಿಸಿ ಸರ್ಕಾರಿ ಅನಾಧೀನ ಭೂಮಿಯನ್ನು ಮತ್ತು ಪೊರಂಬೋಕು ಜಮೀನನ್ನು ಸಕ್ರಮೀಕರಣಗೊಳಿಸಬೇಕಾಗುತ್ತದೆ. ಸಿ.ಆರ್.ಝಡ್. ಪ್ರದೇಶದಲ್ಲಿ ಅತಿಕ್ರಮಣ ಮಾಡಿರುವವರು 1991 ರಿಂದ ಸ್ವಾಧೀನದಲ್ಲಿರುತ್ತಾರೆಂದು ಜಿಲ್ಲಾಧಿಕಾರಿಯವರು ವರದಿ ಮಾಡಿದ್ದರೂ ಸಹ ಸಮುದ್ರ ಒತ್ತುವರಿದಾರರನ್ನು ರಾಜ್ಯ ಕೋಸ್ಟಲ್ ಝೋನ್ ಮೇಲ್ವಿಚಾರಣ ಪ್ರಾಧಿಕಾರವು ಅಂತಿಮ ಅನುಮೋದನೆ ಕೊಟ್ಟ ನಂತರವೇ ಸಕ್ರಮೀಕರಣಗೊಳಿಸಬೇಕಾಗುತ್ತದೆ.

5. ಸರ್ಕಾರಿ ಅನಾಧೀನ ಜಮೀನನ್ನು ಸಕ್ರಮೀಕರಣಗೊಳಿಸಬಹುದಾಗಿದ್ದರೂ, ಪೊರಂಬೋಕು ಜಮೀನನ್ನು (ಸರ್ವೆ ನಂ.52/6, 52/7, 53/7, 53/13, 55/9, 55/10, 55/14, 72, 80 ಮತ್ತು 112/1ಎ1ಎ) ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 68(1) ಮತ್ತು 68(5)ರಲ್ಲಿ ನಿಗದಿ ಪಡಿಸಿದ ಷರತ್ತುಗಳನ್ನು ಪೂರೈಸಿದ ನಂತರವೇ ಸಕ್ರಮೀಕರಣಗೊಳಿಸಬೇಕಾಗುತ್ತದೆ.

6. ಜಿಲ್ಲಾಧಿಕಾರಿಯವರ ಪ್ರಸ್ತಾವನೆಯಂತೆ ಕೆಲವು ಒತ್ತುವರಿದಾರರು 5 ಸೆಂಟ್‌ನಿಂದ 50 ಸೆಂಟ್ ಮಾತ್ರವೇ ಅತಿಕ್ರಮಣ ಮಾಡಿರುತ್ತಾರೆ. ಆದಾಗ್ಯೂ, ಕೆಲವೊಂದು ಅತಿಕ್ರಮಣದಾರರು ಒಂದು ಎಕರೆ ತನಕ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದು ಮನೆಯನ್ನು ನಿರ್ಮಾಣ ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ, ಅದರಂತೆ ಈ ಆದೇಶ:–

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 150 ಎಲ್‌ಜಿಎ 2012, ಬೆಂಗಳೂರು ದಿನಾಂಕ: 22–12–2012

7. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ಕೋಟಾ ಹೋಬಳಿಯ ಕೋಡಿ ಹೊಸಬೆಂಗ್ರೆ ಮತ್ತು ಬೆಂಗ್ರೆ ಭಾಗದ ಕೋಡಿ ಗ್ರಾಮದಲ್ಲಿ 128.88 ಎಕರೆ ಜಮೀನನ್ನು **ಅತಿಕ್ರಮಣ ಮಾಡಿರುವ 491 ಜನರ ಭೂಮಿಯನ್ನು ಅನುಬಂಧದಲ್ಲಿರುವಂತೆ** ಈ ಕೆಳಕಂಡ ಷರತ್ತುಗಳನ್ವಯ ಸಕ್ರಮೀಕರಣಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ಪ್ರಯೋಜನಾರ್ಥಿಗಳು ಮೋಜಣಿ ಶುಲ್ಕ, ಪರಿವರ್ತನಾ ದಂಡ ಮತ್ತು ರಾಜಿ ಶುಲ್ಕವನ್ನು ನಿಯಮಗಳ ರೀತ್ಯಾ ಪಾವತಿಸತಕ್ಕದ್ದು;
2. ಜಮೀನು ಮಂಜೂರು ಮಾಡುವ ವಿಸ್ತೀರ್ಣವು ಉಪ ವಿಭಾಗ ತಯಾರಿಸುವ ಸಮಯದಲ್ಲಿನ ವಾಸ್ತವ ಅಳತೆಯಂತೆ ಇರತಕ್ಕದ್ದು;
3. ಮಂಜೂರು ಮಾಡುವ ನಿವೇಶನವನ್ನು ಸ್ವಾಧೀನ ಪತ್ರವನ್ನು ನೀಡಿದ ದಿನದಿಂದ 15 ವರ್ಷಗಳ ಅವಧಿಯವರೆಗೆ ಪರಭಾರೆ ಮಾಡಕೂಡದು;
4. ನಿವೇಶನದ ಪ್ರಸ್ತುತ ಉಪಯೋಗವನ್ನು ಯಾವುದೇ ಕಾರಣಕ್ಕೂ ಬದಲಾಯಿಸಕೂಡದು. ನಿವೇಶನವನ್ನು ವಾಸ್ತವ್ಯದ ಉದ್ದೇಶಕ್ಕಾಗಿ ಮಂಜೂರು ಮಾಡಿದ್ದಲ್ಲಿ ಮನೆ ನಿರ್ಮಿಸುವುದಕ್ಕಾಗಿಯೇ ಹಾಗೂ ಕೃಷಿಗಾಗಿ ಮಂಜೂರು ಮಾಡಿದ್ದಲ್ಲಿ ಕೃಷಿಗಾಗಿಯೇ ಬಳಸತಕ್ಕದ್ದು;
5. ಮಂಜೂರಾತಿಯ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ ಅಥವಾ ತಪ್ಪು ಮಾಹಿತಿ ನೀಡಿ ಮಂಜೂರಾತಿ ಪಡೆದಿದ್ದರೆ ಅಂತಹ ಮಂಜೂರಾತಿಯನ್ನು ರದ್ದುಗೊಳಿಸತಕ್ಕದ್ದು.
6. ಪ್ರತಿಯೊಬ್ಬ ಮಂಜೂರಾತಿ ಪಡೆದವರು ಮಾರುಕಟ್ಟೆ ಮೌಲ್ಯ ಮತ್ತು ಸ್ಟಾಂಪ್ ಶುಲ್ಕವನ್ನು ಪಾವತಿಸತಕ್ಕದ್ದು; ನಿವೇಶನ ಸಕ್ರಮಾತಿ ಮಿತಿಯ ಆಶ್ರಯ ಯೋಜನೆಯಲ್ಲಿ ಅನುಮತಿಸಿರುವಂತೆ ಇರತಕ್ಕದ್ದು;
7. ಭೂ ಕಂದಾಯ ಕಾಯ್ದೆ ಮತ್ತು ನಿಯಮಾವಳಿಗಳಂತೆ ಪ್ರಕ್ರಿಯೆಗಳನ್ನು ಅಳವಡಿಸಿ ಸಕ್ರಮೀಕರಣ ಗೊಳಿಸತಕ್ಕದ್ದು;

8. ಸಿ.ಆರ್. ಝಡ್ ಪ್ರದೇಶದಲ್ಲಿನ ಈ ಭೂಮಿಯನ್ನು ಮಂಜೂರು ಮಾಡಲು ತಾತ್ವಿಕ ಒಪ್ಪಿಗೆ ನೀಡುತ್ತಾ ರಾಜ್ಯ ಕೋಸ್ಟಲ್ ಜೋನ್ ಮೇಲ್ವಿಚಾರಣ ಪ್ರಾಧಿಕಾರವು ಅಂತಿಮ ಅನುಮೋದನೆ ಕೊಟ್ಟ ನಂತರವೇ ಸಕ್ರಮೀಕರಣಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಶಿವಲಿಂಗಯ್ಯ

ಪೀಠಾಧಿಕಾರಿ

P.R. 278 ಕಂದಾಯ ಇಲಾಖೆ (ಭೂ.ಮಂ–2)

ಕಂದಾಯ ಸಚಿವಾಲಯ

ವಿಷಯ : ಕಾರವಾರ ತಾಲ್ಲೂಕು ಕೇಂದ್ರದಲ್ಲಿ ನೂತನ ಬಸ್ ಸ್ಟ್ಯಾಂಡ್ ನಿರ್ಮಿಸಲು ಹಾಲಿ ಬಸ್ ನಿಲ್ದಾಣದ ಪಕ್ಕದಲ್ಲಿರುವ ತಹಶೀಲ್ದಾರ ಕಛೇರಿಯ ಕ್ಷೇತ್ರ 0–17–6 1/2 ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ವರ್ಗಾಹಿಸುವ ಕುರಿತು.

ಓದಲಾಗಿದೆ :

1) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 6 ಎಲ್‌ಜಿಎನ್ 2010 ದಿನಾಂಕ:19–3–2012.
2) ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ ಇವರ ಪತ್ರ ಸಂ. ಕಂಶಾ/ಭೂಮಿ/ 1/ಡಿಎಸ್‌ಆರ್–29/2008–09 ದಿನಾಂಕ: 26–4–2012.
3) ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ಇವರ ಪತ್ರ ಸಂ. ವಾಕರಸಾ:ಕೇಕ:ಹು:ಮುಕಾಅ:ಕಾಇ: 891/12–13 ದಿನಾಂಕ: 13–12–2012
4) ಕಾರ್ಯನಿರ್ವಾಹಕ ಇಂಜಿನೀಯರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಕಾರವಾರ ಇವರ ಪತ್ರ ಸಂ. ಕಾವಿಕಾ:ಸಿ–4ಕಟ್ಟಡ:ಮೌಮಾ:2012–13 ಸಂ.03151 ದಿನಾಂಕ: 7–12–2012.
5) ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ಇವರ ಪತ್ರ ಸಂ. ವಾಕರಸಾ:ಕೇಕ:ಹು:ಮುಕಾಅ:ಕಾಇ: 891/12–13 ದಿನಾಂಕ: 14–12–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ.(1)ರ ಸರ್ಕಾರದ ಆದೇಶ ದಿನಾಂಕ: 19–3–2012ರಲ್ಲಿ ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕು ಬಾಡ ಗ್ರಾಮದ ಸ.ನಂ. 1367/ಅ ರಲ್ಲಿ ತಾಲ್ಲೂಕು ಕಛೇರಿ ಸೇರಿದ 0–17–6 1/2 ಎಕರೆ ಜಮೀನನ್ನು ಮಾರ್ಗಸೂಚಿ ದರ ಪ್ರತಿ ಚದರ ಅಡಿಗೆ ರೂ.420.00 ರಲ್ಲಿ ಶೇಕಡ 50 ರಷ್ಟನ್ನು ಹಾಗೂ ನಿಯಮಾನುಸಾರ ಇತರ ಶುಲ್ಕಗಳನ್ನು ನಿಗದಿಪಡಿಸಿ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಮಂಜೂರು ಮಾಡಲು ಆದೇಶಿಸಲಾಗಿತ್ತು.

ಜಿಲ್ಲಾಧಿಕಾರಿ, ಉತ್ತರ ಕನ್ನಡ ಕಾರವಾರ ಇವರು ಮೇಲೆ ಓದಲಾದ ಕ್ರ.ಸಂ.(2) ರಲ್ಲಿನ ಆದೇಶದಲ್ಲಿ ಪ್ರಸ್ತಾಪಿತ 18,955.40 ಚದರ ಅಡಿ ಜಮೀನಿಗೆ ಈ ಕೆಳಕಂಡಂತೆ ಕಿಮ್ಮತ್ತು ಮತ್ತು ಕಟ್ಟಡ ಬಾವಿ ಕಿಮ್ಮತ್ತು ಭೂ ಪರಿವರ್ತನ ಶುಲ್ಕ ಹಾಗೂ ಪೋಡಿ ಶುಲ್ಕ ಸೇರಿ ಒಟ್ಟು 89,99,625.00 ಗಳನ್ನು ಪಾವತಿಸಿಕೊಂಡು ಸದರಿ ಜಮೀನನ್ನು ಹಸ್ತಾಂತರಿಸಲು ಆದೇಶಿಸಿರುತ್ತಾರೆ.

1.	ಜಮೀನು ಮೌಲ್ಯ (ಮಾರುಕಟ್ಟೆ ಬೆಲೆ ರೂ. 420ರ ಶೇ.50 ಅಂದರೆ ರೂ. 210 ಪ್ರತಿ ಚ.ಅ.ಗೆ)	ರೂ. 39,80,635–00
2.	ತಹಶೀಲ್ದಾರ ಕಾರ್ಯಾಲಯದ ಕಟ್ಟಡದ ಮತ್ತು ಬಾವಿಯ ಮೌಲ್ಯ	ರೂ. 50,00,000–00
3.	ಭೂ ಪರಿವರ್ತನಾ ಶುಲ್ಕ (ಭೂ ಮಂಜೂರಾತಿ ನಿಯಮ 20ರಂತೆ)	ರೂ. 18,955–00
4.	ಪೋಡಿ ಶುಲ್ಕ	ರೂ. 35–00
	ಒಟ್ಟು	**ರೂ. 89,99,625.00**

ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ಇವರು ಮೇಲೆ ಓದಲಾದ ಕ್ರ.ಸಂ. (3) ರಲ್ಲಿನ ದಿನಾಂಕ: 13–12–2012ರ ಪತ್ರದಲ್ಲಿ ದಿನಾಂಕ: 28–11–2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಕಟ್ಟಡದ ಮೌಲ್ಯ ರೂ.50 ಲಕ್ಷಗಳನ್ನು ಹೊರತುಪಡಿಸಿ ರೂ. 39,80,625–00 ಗಳನ್ನು ಪಾವತಿಸಿಕೊಂಡು, ನಿವೇಶನಗಳನ್ನು ಹಸ್ತಾಂತರಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಹಸ್ತಾಂತರಿಸಲ್ಪಡುವ ಪ್ರದೇಶದಲ್ಲಿನ ಕಟ್ಟಡದ ವಾಸ್ತವಿಕ ಮೌಲ್ಯವನ್ನು ಮೌಲ್ಯಮಾಪನ ಸಕ್ಷಮ ಪ್ರಾಧಿಕಾರ ಕಾರ್ಯನಿರ್ವಾಹಕ ಇಂಜಿನೀಯರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ, ಕಾರವಾರ ಇವರು ಮೇಲೆ ಓದಲಾದ ಕ್ರ.ಸಂ. (4) ರಲ್ಲಿನ ತಹಶೀಲ್ದಾರ್ ಕಛೇರಿ ಕಟ್ಟಡ, ಬಾವಿ ಹಾಗೂ ಗ್ಯಾರೇಜ್ ಕಟ್ಟಡಗಳ ಸಾಮಗ್ರಿಗಳ ಮೌಲ್ಯಮಾಪನ ರೂ. 7,94,455–00 ಎಂದು ತಿಳಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ಇವರು ಮೇಲೆ ಓದಲಾದ ಕ್ರ.ಸಂ. (5) ರಲ್ಲಿನ ದಿನಾಂಕ: 14–12–2012ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆ ನಿಗದಿಪಡಿಸಿರುವ ಕಟ್ಟಡದ ಮೌಲ್ಯ ರೂ. 7,94,455–00 ಮತ್ತು ಪಾರಂಪರಿಕ ಶುಲ್ಕ ರೂ. 7,05,545–00 (ಹೆರಿಟೇಜ್ ವ್ಯಾಲ್ಯೂ) ಸೇರಿಸಿಕೊಂಡು ಒಟ್ಟು ರೂ. 15,00,000–00 ಲಕ್ಷಗಳನ್ನು ಕಟ್ಟಡದ ಮೌಲ್ಯವಾಗಿ ಪಾವತಿಸಲಾಗುವುದೆಂದು ತಿಳಿಸಿ, ಸದರಿ ನಿವೇಶನವನ್ನು ಶೀಘ್ರವಾಗಿ ಹಸ್ತಾಂತರಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 61 ಎಲ್‌ಜಿಎನ್ 2012 ಬೆಂಗಳೂರು, ದಿನಾಂಕ: 18–12–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕು ಬಾಡ ಗ್ರಾಮದ ಸ.ನಂ. 1367/ಅ ರಲ್ಲಿ 0–17–6 1/2 ಜಮೀನಿನ ಮೌಲ್ಯ ರೂ.39,80,635–00, ಭೂ ಪರಿವರ್ತನ ಶುಲ್ಕ ರೂ. 18,955–00, ಪೋಡಿ ಶುಲ್ಕ ರೂ. 35–00 ಹಾಗೂ ಕಟ್ಟಡ ಮೌಲ್ಯ ರೂ. 15,00,000–00 ಗಳನ್ನು ಪಾವತಿಸಿಕೊಂಡು, ಸದರಿ ನಿವೇಶನವನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ಇವರಿಗೆ ಹಸ್ತಾಂತರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಶಿವಲಿಂಗಯ್ಯ
ಪೀಠಾಧಿಕಾರಿ
ಕಂದಾಯ ಇಲಾಖೆ (ಭೂ.ಮಂ–2)

P.R. 279

ಕಂದಾಯ ಸಚಿವಾಲಯ

ವಿಷಯ : ಹಾಸನ ಜಿಲ್ಲೆಯಲ್ಲಿ ಪೋಲೀಸ್ ತರಬೇತಿ ಶಾಲೆ ನಿರ್ಮಾಣಕ್ಕಾಗಿ ಶಾಂತಿ ಗ್ರಾಮದ ಸ.ನಂ.510 ರಲ್ಲಿ 100–00 ಎಕರೆ ಜಮೀನು ಮಂಜೂರಾತಿ ಮಾಡುವ ಬಗ್ಗೆ.

ಓದಲಾಗಿದೆ :
(1) ಪೋಲೀಸ್ ಮಹಾ ನಿರ್ದೇಶಕರು (ತರಬೇತಿ) ಕಾರ್ಲಟನ್ ಭವನ, ಅರಮನೆ ರಸ್ತೆ, ಬೆಂಗಳೂರು ಇವರ ಮನವಿ ಪತ್ರ ಸಂಖ್ಯೆ: ಅ.ಸ.ಪ.ಸಂ. ತ–1/ಸಿಬ್ಬಂದಿ–68/2010 ದಿನಾಂಕ: 4–2–2012.
(2) ಜಿಲ್ಲಾಧಿಕಾರಿಗಳು, ಹಾಸನ ರವರ ಪತ್ರ ಸಂಖ್ಯೆ:ಎಲ್‌ಎನ್‌ಡಿ (1)/129/2011–12 ದಿನಾಂಕ: 28–05–2012.
(3) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರ ಪತ್ರ ಸಂಖ್ಯೆ: ಎಲ್.ಎನ್.ಡಿ(2)/ ಸಿ.ಆರ್/24/2011–12 ದಿನಾಂಕ: 24–07–2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಪೋಲೀಸ್ ಮಹಾ ನಿರ್ದೇಶಕರು (ತರಬೇತಿ) ಬೆಂಗಳೂರು ಇವರು 13ನೇ ಆರ್ಥಿಕ ಆಯೋಗದಡಿಯಲ್ಲಿ ಪೋಲೀಸ್ ಇಲಾಖೆಯ ತರಬೇತಿ ಸಾಮರ್ಥ್ಯವನ್ನು ವೃದ್ಧಿಪಡಿಸಲು ರೂ. 150 ಕೋಟಿ ಹಣವನ್ನು ಮೀಸಲಿರಿಸಿದ್ದು, ಅದಕ್ಕೆ ಸಂಬಂಧಿಸಿದಂತೆ, ಸುಮಾರು 500 ಪ್ರಶಿಕ್ಷಣಾರ್ಥಿಗಳ ಸಾಮರ್ಥ್ಯವುಳ್ಳ ಒಂದು ಸುಸಜ್ಜಿತವಾದ ತರಬೇತಿ ಶಾಲೆಯನ್ನು ಹಾಸನ ಜಿಲ್ಲೆಯಲ್ಲಿ ಪ್ರಾರಂಭಿಸಲು, ತರಬೇತಿ ಶಾಲೆಗಾಗಿ ಹಾಸನ ತಾಲ್ಲೂಕಿನ ಶಾಂತಿ ಗ್ರಾಮ ಹೋಬಳಿ, ಶಾಂತಿ ಗ್ರಾಮದ ಸ.ನಂ.510 ರಲ್ಲಿ 110.29 ಎಕರೆ ಜಾಗವನ್ನು ಗುರುತಿಸಿದ್ದು, ಹೊಸದಾಗಿ ತರಬೇತಿ ಶಾಲೆಯನ್ನು ಪ್ರಾರಂಭಿಸಲು ಯೋಗ್ಯವಾಗಿರುವುದರಿಂದ ಸದರಿ ಜಾಗವನ್ನು ಪೋಲೀಸ್ ಇಲಾಖೆಗೆ ಮಂಜೂರು ಮಾಡಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಜಿಲ್ಲಾಧಿಕಾರಿ, ಹಾಸನರವರು ಹಾಸನ ತಾಲ್ಲೂಕು, ಶಾಂತಿ ಗ್ರಾಮ ಹೋಬಳಿ, ಶಾಂತಿ ಗ್ರಾಮದ ಸ.ನಂ.510 ರ 100–00 ಎಕರೆ ಪ್ರದೇಶವನ್ನು ಪೋಲೀಸ್ ತರಬೇತಿ ಶಾಲೆ ನಿರ್ಮಾಣ ಉದ್ದೇಶಕ್ಕಾಗಿ, ತಹಶೀಲ್ದಾರ್, ಹಾಸನ ತಾಲ್ಲೂಕು ರವರು ನೀಡಿದ ವರದಿಯನ್ವಯ–ಪರಿಶೀಲಿಸಿ, ಸದರಿ ಸರ್ವೆ ನಂ.510 ರಲ್ಲಿ ಆರ್.ಟಿ.ಸಿ.ಯಂತೆ 110–29 ಎಕರೆ ಲಭ್ಯವಿದ್ದು ನಕ್ಷೆ ತಯಾರಿಸಲಾಗಿದ್ದು, ನಕ್ಷೆಯಲ್ಲಿ ಗುರುತಿಸಿರುವಂತೆ ಅರಣ್ಯ ಇಲಾಖೆಯವರು ನೆಡುತೋಪನ್ನು 86.26 ಎಕರೆ ಪ್ರದೇಶದಲ್ಲಿ ಬೆಳೆಸಿದ್ದು, ಹಾಗೂ ಅನಧಿಕೃತ ಸಾಗುವಳಿಯಲ್ಲಿದ್ದು, ಮಂಜೂರು ಕೋರಿ ಯಾವುದೇ ಅರ್ಜಿ ದಾಖಲಾಗದೆ ಇರುವ 21–09 ಎಕರೆ ಪ್ರದೇಶವನ್ನು ಒತ್ತುವರಿದಾರರಿಂದ ಖುಲ್ಲಾ ಪಡಿಸುವ ಷರತ್ತುಗಳಿಗೊಳಪಡಿಸಿ ಪ್ರಸ್ತಾಪಿತ ಉದ್ದೇಶಕ್ಕೆ ಕಾಯ್ದಿರಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳ ಶಿಫಾರಸ್ಸಿನನ್ವಯ ಹಾಸನ ತಾಲ್ಲೂಕು, ಶಾಂತಿ ಗ್ರಾಮದಲ್ಲಿ ಪೋಲೀಸ್ ತರಬೇತಿ ಶಾಲೆಗೆ ಸರ್ವೆ ನಂ.510 ರಲ್ಲಿ 100.00 ಎಕರೆ ಜಮೀನು ಹೊರತುಪಡಿಸಿ 646.30 ಎಕರೆ ಗೋಮಾಳ ಜಮೀನು ಲಭ್ಯವಿದ್ದು, ಸದರಿ ಗ್ರಾಮದಲ್ಲಿ ಒಟ್ಟು 1501 ಜಾನುವಾರುಗಳಿದ್ದು, ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 97(1) ರಂತೆ ಜಾನುವಾರುಗಳ ಸಂಖ್ಯೆಗನುಗುಣವಾಗಿ 450–00 ಎಕರೆ ಗೋಮಾಳ ಜಮೀನು ಅವಶ್ಯವಿರುವುದರಿಂದ ನಿಯಮ 97(4) ರಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 71 ರನ್ವಯ ಪೋಲೀಸ್ ತರಬೇತಿ ಶಾಲೆ ನಿರ್ಮಾಣಕ್ಕಾಗಿ 50–00 ಎಕರೆ ಪ್ರದೇಶವನ್ನು ಕಾಯ್ದಿರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 05 ಎಲ್‌ಜಿಹೆಚ್ 2013, ಬೆಂಗಳೂರು, ದಿನಾಂಕ: 30–01–2013.

ಹಾಸನ ತಾಲ್ಲೂಕು, ಶಾಂತಿ ಗ್ರಾಮ ಹೋಬಳಿ, ಶಾಂತಿ ಗ್ರಾಮದಲ್ಲಿ ಸರ್ವೆ ನಂ.510 ರಲ್ಲಿನ 646.30 ಎಕರೆ ಜಮೀನಿನ ಪೈಕಿ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 97(1) ರಂತೆ ಜಾನುವಾರುಗಳ ಸಂಖ್ಯೆಗನುಗುಣವಾಗಿ 450–00 ಎಕರೆ ಗೋಮಾಳ ಜಮೀನು

ಅವಶ್ಯವಿರುವುದರಿಂದ ಉಳಿಕೆ ಜಮೀನಿನಲ್ಲಿ 50–00 ಎಕರೆ ಜಮೀನನ್ನು ನಿಯಮ 97(4) ರಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 71 ರನ್ವಯ ಪೊಲೀಸ್ ತರಬೇತಿ ಶಾಲೆ ನಿರ್ಮಾಣಕ್ಕಾಗಿ ಮಂಜೂರು ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉಮಾದೇವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ–1)

P.R. 280

ಕಂದಾಯ ಸಚಿವಾಲಯ

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನ ತ್ಯಾಜ್ಯಗಳ ವಿಲೇವಾರಿ ಮತ್ತು ಸಂಸ್ಕರಣಾ ಘಟಕ ಸ್ಥಾಪನೆಯ ಉದ್ದೇಶಕ್ಕಾಗಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಜಮೀನನ್ನು ಬಿ.ಬಿ.ಎಂ.ಪಿ. ಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪತ್ರ ಸಂಖ್ಯೆ: ಆ/ಮು.ಅ–3/ಪಿಎಸ್ಆರ್/103/2012–13 ದಿನಾಂಕ: 24–12–2012.

ಪ್ರಸ್ತಾವನೆ :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಘನ ತ್ಯಾಜ್ಯ ವಿಲೇವಾರಿ ಬಗ್ಗೆ ಈಗಾಗಲೇ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 34739–40/2012 ದಿನಾಂಕ: 22–11–2012ರ ತೀರ್ಪಿನಲ್ಲಿ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿರುತ್ತದೆ. ಈ ನಿಟ್ಟಿನಲ್ಲಿ ಉಚ್ಚ ನ್ಯಾಯಾಲಯವು ರಾಜ್ಯ ಸರ್ಕಾರವು ಘನ ತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ನೀಗಿಸಲು ತೆಗೆದುಕೊಂಡ ಕ್ರಮದ ಬಗ್ಗೆ ಕೂಡ ಮಾಹಿತಿ ಕೋರುತ್ತಿದ್ದು, ಈ ನಿಟ್ಟಿನಲ್ಲಿ ದಿನಾಂಕ: 28–01–2013 ರಂದು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ಉಚ್ಚ ನ್ಯಾಯಾಲಯದ ನಿರ್ದೇಶನವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಂದಾಯ ಇಲಾಖೆಯಲ್ಲಿ ಲಭ್ಯವಿರುವ ಈ ಕೆಳಕಂಡ ಸರ್ಕಾರಿ ಭೂಮಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನ ತ್ಯಾಜ್ಯ ನಿರ್ವಹಣೆಗಾಗಿ ಉಚಿತವಾಗಿ ನೀಡಲು ನಿರ್ಣಯಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ಪ್ರದೇಶ	ಸರ್ವೆ ನಂ.	ಮಂಜೂರು ಮಾಡಬೇಕಾದ ಭೂಮಿಯ ವಿಸ್ತೀರ್ಣ
1	ಸರ್ವಜ್ಞ ನಗರ, ಹೆಣ್ಣೂರು ಬಂಡೆ	30	3.00 ಎಕರೆ
2	ಪುಲಕೇಶಿ ನಗರ, ಕುಶಾಲ ನಗರ	60/1	1.5 ಎಕರೆ
3	ಶಿವಾಜಿನಗರ, ಮಿಲ್ಲರ್ ಟ್ಯಾಕ್ ಬೆಡ್	18	2.00 ಎಕರೆ
4	ಯಲಹಂಕ, ವೆಂಕಟಾಲ	9	2.00 ಎಕರೆ
5	ಬ್ಯಾಟರಾಯನಪುರ, ಸಿಂಗಾಪುರ	109	2.00 ಎಕರೆ
6	ದಾಸರಹಳ್ಳಿ, ಅಬ್ಬಿಗೆರೆ	13	1.00 ಎಕರೆ
7	ಕೆ.ಆರ್.ಪುರಂ ಚಳ್ಳಕೆರೆ	59	1.05 ಎಕರೆ
8	ಕೆ.ಆರ್.ಪುರಂ ಹಗದೂರು	18	1.2 ಎಕರೆ
9	ವರ್ತೂರು ಕೊಡತಿ	184	1.12 ಎಕರೆ
10	ಬಿದರಹಳ್ಳಿ ಕೊಡಿಗೆಹಳ್ಳಿ	1	1.27 ಎಕರೆ
11	ಬೊಮ್ಮನಹಳ್ಳಿ, ನ್ಯಾನಪ್ಪನಹಳ್ಳಿ	22	3.00 ಎಕರೆ
12	ಬೊಮ್ಮನಹಳ್ಳಿ, ಬೇಗೂರು	302	3.03 ಎಕರೆ
13	ಹಳೆ ಸಂಪಿಗೆಹಳ್ಳಿ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ	8	2.8 ಎಕರೆ
14	ಲಕ್ಷ್ಮಿಪುರ ಗ್ರಾಮ	83	4.12 ಎಕರೆ
		89	7.23 ಎಕರೆ
		93	2.00 ಎಕರೆ

ಕ್ರಮ ಸಂಖ್ಯೆ	ಪ್ರದೇಶ	ಸರ್ವೆ ನಂ.	ಮಂಜೂರು ಮಾಡಬೇಕಾದ ಭೂಮಿಯ ವಿಸ್ತೀರ್ಣ
15	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಆಲಹಳ್ಳಿ ಗ್ರಾಮ	81	1.20 ಎಕರೆ
16	ಗೊಟ್ಟಿಗೆರೆ ಗ್ರಾಮ	40	0.32 ಎಕರೆ
17	ಎಲಚೇನಹಳ್ಳಿ	45	1.07 ಎಕರೆ
18	ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಾಗಮಂಗಳ ಗ್ರಾಮ	31	31.21 ಎಕರೆ
	ಒಟ್ಟು		**74.22 ಎಕರೆ**

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 729 ಎಲ್‌ಜಿಬಿ 2012, ಬೆಂಗಳೂರು ದಿನಾಂಕ: 29/01/2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನ ತ್ಯಾಜ್ಯ ನಿರ್ವಹಣೆಗಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71 ರಡಿ ಈ ಕೆಳಕಂಡ ಭೂಮಿಯನ್ನು

ಕ್ರಮ ಸಂಖ್ಯೆ	ಪ್ರದೇಶ	ಸರ್ವೆ ನಂ.	ಮಂಜೂರು ಮಾಡಬೇಕಾದ ಭೂಮಿಯ ವಿಸ್ತೀರ್ಣ
1	ಸರ್ವಜ್ಞ ನಗರ, ಹೆಣ್ಣೂರು ಬಂಡೆ	30	3.00 ಎಕರೆ
2	ಪುಲಕೇಶಿ ನಗರ, ಕುಶಾಲ ನಗರ	60/1	1.5 ಎಕರೆ
3	ಶಿವಾಜಿನಗರ, ಮಿಲ್ಲರ್ ಟ್ಯಾಕ್ ಬೆಡ್	18	2.00 ಎಕರೆ
4	ಯಲಹಂಕ, ವೆಂಕಟಾಲ	9	2.00 ಎಕರೆ
5	ಬ್ಯಾಟರಾಯನಪುರ, ಸಿಂಗಾಪುರ	109	2.00 ಎಕರೆ
6	ದಾಸರಹಳ್ಳಿ, ಅಬ್ಬಿಗೆರೆ	13	1.00 ಎಕರೆ
7	ಕೆ.ಆರ್.ಪುರಂ ಚಳ್ಳಕೆರೆ	59	1.05 ಎಕರೆ
8	ಕೆ.ಆರ್.ಪುರಂ ಹಗದೂರು	18	1.2 ಎಕರೆ
9	ವರ್ತೂರು ಕೊಡತಿ	184	1.12 ಎಕರೆ
10	ಬಿದರಹಳ್ಳಿ ಕೊಡಿಗೆಹಳ್ಳಿ	1	1.27 ಎಕರೆ
11	ಬೊಮ್ಮನಹಳ್ಳಿ, ನ್ಯಾನಪ್ಪನಹಳ್ಳಿ	22	3.00 ಎಕರೆ
12	ಬೊಮ್ಮನಹಳ್ಳಿ, ಬೇಗೂರು	302	3.03 ಎಕರೆ
13	ಹಳೆ ಸಂಪಿಗೆಹಳ್ಳಿ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ	8	2.8 ಎಕರೆ
14	ಲಕ್ಷ್ಮಿಪುರ ಗ್ರಾಮ	83	4.12 ಎಕರೆ
		89	7.23 ಎಕರೆ
		93	2.00 ಎಕರೆ
15	ಬೆಂಗಳೂರು ದಕ್ಷಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಆಲಹಳ್ಳಿ ಗ್ರಾಮ	81	1.20 ಎಕರೆ
16	ಗೊಟ್ಟಿಗೆರೆ ಗ್ರಾಮ	40	0.32 ಎಕರೆ
17	ಎಲಚೇನಹಳ್ಳಿ	45	1.07 ಎಕರೆ
18	ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕನಾಗಮಂಗಳ ಗ್ರಾಮ	31	31.21 ಎಕರೆ
	ಒಟ್ಟು		**74.22 ಎಕರೆ**

ಉಚಿತವಾಗಿ ಕೆಳಕಂಡ ಷರತ್ತಿನೊಂದಿಗೆ ಈ ಕೂಡಲೇ ಜಾರಿಗೆ ಬರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ಆದೇಶಿಸಿದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರಸ್ತಾಪಿತ ಜಮೀನನ್ನು ಘನ ತ್ಯಾಜ್ಯ ನಿರ್ವಹಣೆಗಾಗಿ ಒಂದು ವರ್ಷದೊಳಗೆ ಬಳಸಿಕೊಳ್ಳತಕ್ಕದ್ದು.
2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಭೂಮಿಗಳಿಗೆ ಕೂಡಲೇ ಸರಹದ್ದು ಬೇಲಿಗಳನ್ನು ಅಳವಡಿಸಿ ಭೂಮಿಯನ್ನು ಸಂರಕ್ಷಿಸತಕ್ಕದ್ದು.
3. ಪ್ರಸ್ತಾಪಿತ ಜಮೀನುಗಳನ್ನು ನಗರ ಪಾಲಿಕೆಯು ಘನ ತ್ಯಾಜ್ಯ ನಿರ್ವಹಣೆಗಾಗಿ ಮಾತ್ರ ಬಳಸತಕ್ಕದ್ದು.
4. ಪ್ರಸ್ತಾಪಿತ ಜಮೀನುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಘನ ತ್ಯಾಜ್ಯ ನಿರ್ವಹಣೆಯ ಉದ್ದೇಶವನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕೆ ಉಪ ಗುತ್ತಿಗೆ ನೀಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಉಮಾದೇವಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ–1)

P.R. 281

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸಿ. ನಾಗಯ್ಯ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಆಯುಕ್ತರು, ಗುಲ್ಬರ್ಗಾ ಮಹಾನಗರ ಪಾಲಿಕೆ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ :
1. ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ಇವರ ಪತ್ರ ಸಂಖ್ಯೆ: ಕಂ/ಪ್ರಾಆಗು/ಪುರಸಭೆ/ 164/ 2012–13; ದಿನಾಂಕ: 11–2–2013.
2. ನಗರಾಭಿವೃದ್ಧಿ ಇಲಾಖೆಯ ಕಡತ ಸಂಖ್ಯೆ: ನಅಇ 100 ಎಸಿಜಿ 2012 ರಲ್ಲಿನ ಪ್ರಸ್ತಾವನೆ.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ಇವರು ದಿನಾಂಕ: 11–2–2013 ರಂದು ನೀಡಿರುವ ವರದಿಯಂತೆ ಶ್ರೀ ಸಿ. ನಾಗಯ್ಯ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಆಯುಕ್ತರು, ಗುಲ್ಬರ್ಗಾ ಮಹಾನಗರ ಪಾಲಿಕೆ, ಶ್ರೀ ರವಿ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಶ್ರೀ ತುಖಾರಾಮ್ ಜಿಲ್ಲಾ ಸಂಯೋಜಕರು ಡಾ॥ ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರುಗಳು ಸೇರಿ ಶೇ. 22.75 ರಷ್ಟು ಅನುದಾನದಲ್ಲಿ 34.00 ಲಕ್ಷಗಳ ಮೊತ್ತವನ್ನು ನಕಲಿ ಹೆಸರಿನಲ್ಲಿ ಖಾತೆ ಸಂಖ್ಯೆ: 7107/58 ರ ಮುಖಾಂತರ ಡ್ರಾ ಮಾಡಿ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆಂದು ತಿಳಿಸಿರುವ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಕಡತದಲ್ಲಿ ಶ್ರೀ ಸಿ. ನಾಗಯ್ಯ, ಕೆ.ಎ.ಎಸ್.(ಹಿರಿಯ ಶ್ರೇಣಿ) ಅಧಿಕಾರಿ, ಆಯುಕ್ತರು, ಗುಲ್ಬರ್ಗಾ ಮಹಾನಗರ ಪಾಲಿಕೆ, ಇವರನ್ನು ಇವರ ವಿರುದ್ಧ ಶಿಸ್ತು ಕ್ರಮದ ಪ್ರಸ್ತಾವನೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿಡಲು ಶಿಫಾರಸ್ಸು ಮಾಡಿರುತ್ತದೆ.

ಶ್ರೀ ಸಿ. ನಾಗಯ್ಯ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಆಯುಕ್ತರು, ಗುಲ್ಬರ್ಗಾ ಮಹಾನಗರ ಪಾಲಿಕೆ, ಇವರು ಒಬ್ಬ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ತವ್ಯ ಚ್ಯುತಿ ಎಸಗಿ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸರ್ಕಾರವು ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಆಪಾದಿತ ಅಧಿಕಾರಿಯು ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ತಿದ್ದುವ ಸಾಧ್ಯತೆಯನ್ನು ತಪ್ಪಿಸಲು ಮತ್ತು ಪ್ರಕರಣದ ಸುಗಮ ವಿಚಾರಣೆಗೆ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಅವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 119 ಕೆಇವಿ 2012, ಬೆಂಗಳೂರು, ದಿನಾಂಕ: 21–2–2013.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಿ. ನಾಗಯ್ಯ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಆಯುಕ್ತರು, ಗುಲ್ಬರ್ಗಾ ಮಹಾನಗರ ಪಾಲಿಕೆ, ಗುಲ್ಬರ್ಗಾ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಇವರನ್ನು ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಸಿ. ನಾಗಯ್ಯ, ಕೆ.ಎ.ಎಸ್.(ಹಿರಿಯ ಶ್ರೇಣಿ) ಅಧಿಕಾರಿ, ಇವರು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 98 ರಂತೆ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿಶ್ವನಾಥ ಪಿ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು.ಇ. (ಸೇವೆಗಳು–2)

P.R. 282

PERSONNEL AND ADMINISTRATIVE REFORMS SECRETARIAT

ADDENDUM

No.DPAR 59 Se VuNya 2012. Bangalore, Dated: 16-11-2012

Sub : Extention of Medical expenses reimbursement to the retired Chief Justices and Judges of the High Court of Karnataka.

For the words appearing in condition No. (b) & (c), appearing in Order portion of the Government Order No. DPAR 31 SeVuNya 2011, dated: 21-03-2012, the following words may be substituted and it shall be deemed to have been substituted always.

"**b) The retired Chief Justice and Judges who are not practicing as Senior Advocates,**

In case of a retired Chief Justice or judge who has registered as a Senior Advocate, but not practicing as such, is also entitled for the benefits of this Government Order, if he submits an undertaking/ declaration stating that he is not practicing as a Senior Advocate before any Court of Law/Authority.

c) Who are not engaged or re-employed in any Government Assignments.

Provided that the Medical reimbursement granted on such re-employment or assignment, shall not be less than what is provided under this Government Order."

By Order and in the name of the Governor of Karnataka,

H.K. LAKSHMINARAYANA RAO

Under Secretary to Government

Department of Personnel and Administrative Reforms (Services-3)

P.R. 283

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಆಕುಕ 129 ಎಂಎಂಸಿ 2012, ಬೆಂಗಳೂರು, ದಿನಾಂಕ: 12.02.2013

ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ದಿನಾಂಕ: 16.12.2011ರ 2ನೇ ಷರತ್ತು ಮತ್ತು ನಿಬಂಧನೆಯಾದ ii) ಕಾಲಬದ್ಧ ಪದೋನ್ನತಿ (TBP) ಯ (ಇ) ಅಂಶದ ನಂತರ ಕೆಳಕಂಡ ಅಂಶಗಳನ್ನು ಸೇರ್ಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಈ) ಕಾಲಬದ್ಧ ಪದೋನ್ನತಿ ಉದ್ದೇಶಕ್ಕಾಗಿ ಸಹಾಯಕ ಪ್ರಾಧ್ಯಾಪಕರಿಗೆ ನಿಗದಿಪಡಿಸಲಾದ 05 ವರ್ಷಗಳ ಸೇವೆಯನ್ನು ಪರಿಗಣಿಸುವಾಗ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆಯೊಂದಿಗೆ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆಯನ್ನು ಅಥವಾ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆಯೊಂದಿಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಬಹುದು. ಅಂದರೆ, ಕಾಲಬದ್ಧ ಪದೋನ್ನತಿ ಉದ್ದೇಶಕ್ಕಾಗಿ ಸರ್ಕಾರಿ ಮತ್ತು ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಮಾತ್ರ ಪರಿಗಣಿಸತಕ್ಕದ್ದು. ಖಾಸಗಿ ಸಂಸ್ಥೆಗಳಲ್ಲಿನ ಬೋಧನಾನುಭವವನ್ನು ಪರಿಗಣಿಸತಕ್ಕದ್ದಲ್ಲ.

ಉ) ಕಾಲಬದ್ಧ ಪದೋನ್ನತಿ ಉದ್ದೇಶಕ್ಕಾಗಿ ಸಹಾಯಕ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿ ಸಲ್ಲಿಸಿದ ಸೇವೆಯನ್ನು ಮಾತ್ರ ಪರಿಗಣಿಸತಕ್ಕದ್ದು.

ಊ) ಸೂಪರ್ ಸ್ಪೆಷಾಲಿಟಿ ವಿಭಾಗದಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೂ ಸಹ ಮೇಲ್ಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಕಾಲಬದ್ಧ ಪದೋನ್ನತಿಯನ್ನು ನೀಡತಕ್ಕದ್ದು.

ಮುಂದುವರಿದು, ಸದರಿ ಆದೇಶದ 3ನೇ ಷರತ್ತು ಮತ್ತು ನಿಬಂಧನೆಯಲ್ಲಿನ iii) ವಾರ್ಷಿಕ ವೇತನ ಬಡ್ತಿಯಲ್ಲಿ ಕೆಳಕಂಡ ಅಂಶವನ್ನು ಸೇರ್ಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಸಾಮಾನ್ಯವಾಗಿ ವಾರ್ಷಿಕ ವೇತನ ಬಡ್ತಿಯು ಯಾವ ದಿನಾಂಕದಂದು ಲಭ್ಯವಾಗುವುದೋ, ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳ ಅನುಷ್ಠಾನದ ನಂತರವೂ ಅದೇ ದಿನಾಂಕದಂದು ಮುಂದಿನ ವಾರ್ಷಿಕ ವೇತನ ಬಡ್ತಿಯು ಪ್ರಾಪ್ತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಮೆಹಬೂಬ್ ಖಾನ್

ಸರ್ಕಾರದ ಅಧೀನ ಕಾರ್ಯದರ್ಶಿ–2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

P.R. 296

ಕಂದಾಯ ಸಚಿವಾಲಯ

ವಿಷಯ : ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಹಾಂತಲಿಂಗಾಪುರ ಗ್ರಾಮದ ಸ.ನಂ.47 ರಲ್ಲಿ 110–00 ಎಕರೆ ಬದಲಿ ಜಮೀನನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಇವರಿಗೆ ಮಂಜೂರು ಮಾಡುವ ಕುರಿತು.

ಓದಲಾಗಿದೆ :
(1) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ(ಎಸ್):ಸಿ.ಆರ್31/2010–11 ದಿನಾಂಕ: 27.08.2010
(2) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 538 ಎಲ್‌ಜಿಬಿ 2010, ದಿನಾಂಕ: 11.05.2011.
(3) ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ(ಎ): ಸಿ.ಆರ್31/2010–11. ದಿನಾಂಕ: 24.09.2012
(4) ನಿರ್ದೇಶಕರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ರವರ ಮನವಿ ದಿನಾಂಕ: 27.11.2012

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಪತ್ರದಲ್ಲಿನ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಪ್ರಸ್ತಾವನೆಯನ್ವಯ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಹಾಂತಲಿಂಗಾಪುರ ಗ್ರಾಮದ ಸ.ನಂ.47 ರಲ್ಲಿ 110 ಎಕರೆ ಜಮೀನನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ರವರು ಪ್ರಶ್ನಿತ ಜಮೀನಿನಲ್ಲಿ ಸುಮಾರು 50–60 ವರ್ಷಗಳಿಂದ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಹಲವಾರು ರೈತರು ಸಾಗುವಳಿ ಮಾಡಿಕೊಂಡು ಬಂದಿದ್ದು, ಅವರಿಗೆ ಆರ್‌ಟಿಸಿ ಸಹ ನೀಡಲಾಗಿರುತ್ತದೆ ಹಾಗೂ ಜೆಲ್ಲಿ ಕಲ್ಲು ಕ್ರಷರ್‌ಗಳಿಗೂ ಸಹ ಪರವಾನಗಿ ನೀಡಲಾಗಿರುವುದರಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗೆ ಮಂಜೂರಾಗಿರುವ ಜಮೀನನ್ನು ಸ್ಥಳಾಂತರಿಸಿ, ಇದಕ್ಕೆ ಬದಲಾಗಿ ಇದೇ ಸ.ನಂ.ನಲ್ಲಿ ಎರಡು ಕಡೆ ಇರುವ ಅಂದರೆ ಹಾರೋಹಳ್ಳಿ– ಜಿಗಣಿ ರಸ್ತೆಯ ಅಕ್ಕಪಕ್ಕದಲ್ಲಿ ಬರುವ 80 ಎಕರೆ ಮತ್ತು 30 ಎಕರೆ ಬದಲಿ ಜಮೀನನ್ನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ರವರು ಈಗಾಗಲೇ ಮಂಜೂರಾದ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದ ಕಾರಣ ಕಂದಾಯ ಅಧಿಕಾರಿಗಳು ಗುರುತಿಸಿರುವ ಬದಲಿ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 757 ಎಲ್‌ಜಿಬಿ 2012, ಬೆಂಗಳೂರು ದಿನಾಂಕ: 15–02–2013.

ಈ ಹಿಂದೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗೆ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಹಾಂತಲಿಂಗಾಪುರ ಗ್ರಾಮದ ಸ.ನಂ. 47 ರಲ್ಲಿ 110–00 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿರುವುದನ್ನು ರದ್ದುಗೊಳಿಸಿ, ಇದಕ್ಕೆ ಬದಲಾಗಿ ಇದೇ ಸರ್ವೆ ನಂಬರ್‌ನಲ್ಲಿ ಅಂದರೆ ಹಾರೋಹಳ್ಳಿ–ಜಿಗಣಿ ರಸ್ತೆಯ ಅಕ್ಕಪಕ್ಕದಲ್ಲಿ ಬರುವ 80–00 ಎಕರೆ ಹಾಗೂ 30–00 ಎಕರೆ, ಒಟ್ಟು 110–00 ಎಕರೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಈ ಹಿಂದೆ ವಿಧಿಸಲಾಗಿದ್ದ ಷರತ್ತು ಮತ್ತು ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ನಿಯಮ 19(1) ರನ್ವಯ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಿದೆ.

1. ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು.
2. ಮಂಜೂರಾದ ಭೂಮಿಯನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ.
3. ಮಂಜೂರಾದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.
4. ಮಂಜೂರು ಮಾಡಲ್ಪಡುವ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆಗಳು ದಾಖಲಾಗಿದ್ದಲ್ಲಿ, ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
5. ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ ಉಪಗುತ್ತಿಗೆಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು.
6. ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ, ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.
7. ಮಂಜೂರಾದ ಜಮೀನು ಸಂಸ್ಥೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
8. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

9. ಮಂಜೂರಾದ ಜಮೀನು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.

10. ಜಿಲ್ಲಾಧಿಕಾರಿಗಳು ಮಂಜೂರಾದ ಜಮೀನನ್ನು ಫಲಾನುಭವಿಗಳಿಗೆ ಹಸ್ತಾಂತರಿಸುವಾಗ ಮಂಜೂರಾದ ಪ್ರದೇಶದ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಉಮಾದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ

P.R. 297

ಕಂದಾಯ ಇಲಾಖೆ (ಭೂಮಂಜೂರಾತಿ–1)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : 6 ಖಾಯಂ ಜನತಾ ನ್ಯಾಯಾಲಯಗಳ ಸ್ಥಾಪನೆಯನ್ವಯ 2012–13ನೇ ಸಾಲಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಲಾ 54 ಎಲ್ಎಎಂ 2012 ದಿನಾಂಕ:17–04–2012.
2) ಸರ್ಕಾರದ ಆದೇಶ ಸಂಖ್ಯೆ: ಲಾ 11 ಎಲ್ಎಡಿ 2012 ದಿನಾಂಕ: 24–05–2012.
3) ಸರ್ಕಾರದ ಆದೇಶ ಸಂಖ್ಯೆ: ಲಾ 11 ಎಲ್ಎಡಿ 2012 ದಿನಾಂಕ: 09–10–2012.
4) ಕರಾಕಾಸೇ ಪ್ರಾಧಿಕಾರದ ಪತ್ರ ಸಂಖ್ಯೆ: ಪಿಎಲ್ಎ ಗ್ರಾಂಟ್ಸ್–5 2012–13 ದಿನಾಂಕ: 28–11–2012.
5) ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್ಡಿ 152 ಬಿಆರ್ಎಸ್ 2012 ದಿನಾಂಕ: 04–01–2013.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 17–04–2012ರ ಆದೇಶದಲ್ಲಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಕ್ರಿಯಾಯೋಜನೆಗಳನ್ನು 2012–13ನೇ ಸಾಲಿನಲ್ಲಿ ಮುಂದುವರಿಸಲು ಮಂಜೂರಾತಿ ನೀಡಲಾಗಿದೆ. 2012–13ನೇ ಸಾಲಿಗೆ ರೂ.170/– ಲಕ್ಷಗಳ ಅನುದಾನವನ್ನು ಆಯವ್ಯಯದಲ್ಲಿ (ಯೋಜನೆಗಳಡಿ) ಒದಗಿಸಲಾಗಿದ್ದು, ಮೇಲೆ (2) ಮತ್ತು (3) ರಲ್ಲಿ ಓದಲಾದ ದಿನಾಂಕ: 24–05–2012ರ ಮತ್ತು 09–10–2012ರ ಸರ್ಕಾರದ ಆದೇಶಗಳಲ್ಲಿ 6 ಖಾಯಂ ಲೋಕ್ ಅದಾಲತ್‌ಗಳ ನಿರ್ವಹಣೆ, ಸಿಬ್ಬಂದಿ ವೆಚ್ಚ ಇತ್ಯಾದಿಗಾಗಿ ಎರಡು ಕಂತುಗಳಲ್ಲಿ ತಲಾ ರೂ.85 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ (4)ರಲ್ಲಿ ಓದಲಾದ ಪ್ರಾಧಿಕಾರದ ದಿನಾಂಕ: 28–11–2012ರ ಪತ್ರದಲ್ಲಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು 2012–13ನೇ ಸಾಲಿಗೆ ಬಿಡುಗಡೆ ಮಾಡಿದ ರೂ.170/–ಲಕ್ಷಗಳ ಅನುದಾನವನ್ನು ಡಿಸೆಂಬರ್ 2012ರವರೆಗಿನ ಖಾಯಂ ಜನತಾ ನ್ಯಾಯಾಲಯಗಳ ಸಿಬ್ಬಂದಿ ವೇತನ ಹಾಗೂ ನಿರ್ವಹಣಾ ಖರ್ಚುಗಳಿಗೆ ಭರಿಸಬಹುದಾಗಿರುತ್ತದೆಂದೂ, ಜನವರಿ 2013 ರಿಂದ ಮಾರ್ಚ್ ಅಂತ್ಯದವರೆಗಿನ ಸದರಿ ವೆಚ್ಚಗಳಿಗೆ ಹೆಚ್ಚುವರಿಯಾಗಿ ರೂ.60/– ಲಕ್ಷಗಳ ಅನುದಾನ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಆರ್ಥಿಕ ಇಲಾಖೆಯು ಮೇಲೆ (3) ರಲ್ಲಿ ಓದಲಾದ ದಿನಾಂಕ: 04–01–2013ರ ಆದೇಶದನ್ವಯ 6 ಖಾಯಂ ಜನತಾ ನ್ಯಾಯಾಲಯಗಳ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ 2014–00–105–0–11–059(ಯೋಜನೆ) ಅಡಿಯಲ್ಲಿ 2012–13ನೇ ಸಾಲಿಗೆ ಹೆಚ್ಚುವರಿಯಾಗಿ ರೂ.60/– ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂ.ಲಾ 11 ಎಲ್ಎಡಿ 2012, ಬೆಂಗಳೂರು, ದಿನಾಂಕ: 10–01–2013.

2012–13ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ 6 ಜಿಲ್ಲೆಗಳ ಖಾಯಂ ಲೋಕ್ ಅದಾಲತ್ ಕಛೇರಿಗಳಲ್ಲಿನ ಖರ್ಚು ವೆಚ್ಚಗಳ ನಿರ್ವಹಣೆಗೆ ರೂ.60/– ಲಕ್ಷಗಳ (ರೂಪಾಯಿ ಅರವತ್ತು ಲಕ್ಷಗಳು ಮಾತ್ರ) ಹೆಚ್ಚುವರಿ ಅನುದಾನವಾಗಿ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2014–00–105–0–11–059 (ಯೋಜನೆ) ಅಡಿ ಭರಿಸುವುದು.

ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ನಿಯಮಾನುಸಾರ ಬಳಸತಕ್ಕದ್ದು.

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪೇಯಿಸ್ ರಶೀದಿ ತಯಾರಿಸಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು ಇವರ ಮೇಲು ರುಜು ಪಡೆದು, ರಾಜ್ಯ ಹುಜೂರ್ ಖಜಾನೆಯಿಂದ ಚೆಕ್‌ನ್ನು ಡ್ರಾ ಮಾಡಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 441 ವೆಚ್ಚ–10/2012 ದಿನಾಂಕ: 05–01–2013ರ ಸಹಮತಿ ಹಾಗೂ ಆದೇಶ ಸಂಖ್ಯೆ ಎಫ್ಡಿ 152 ಬಿಆರ್ಎಸ್ 2012 ದಿನಾಂಕ: 04–01–2013ರ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಎಲ್.ಮಡಿವಾಳ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2)

P.R. 298

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಬಸ್ಸುಗಳಿಗೆ 7 ವಾಹನ ಚಾಲಕರ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಪತ್ರ ಸಂಖ್ಯೆ: ಕರಾಕಾಸೇಪ್ರಾ: 21 ಎಡಿಎಂ 2009 ದಿನಾಂಕ: 25/10/2012, 02-01-2013 ಹಾಗೂ 05-01-2013.

2. ಸರ್ಕಾರದ ಪತ್ರ ಸಂಖ್ಯೆ: ಲಾ 61 ಎಲ್‌ಎಡಿ 2012 ದಿನಾಂಕ: 05/01/2013,

3. ಪ್ರಾಧಿಕಾರದ ಪತ್ರ ಸಂಖ್ಯೆ: ಕರಾಕಾಸೇಪ್ರಾ 21 ಎಡಿಎಂ 2009 ದಿನಾಂಕ: 09-01-2013.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 25-10-2012ರ ಪತ್ರದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ದಿನಾಂಕ: 01-10-2012ರಂದು ನಡೆದ ಪ್ರಾಧಿಕಾರದ 28ನೇ ಸಾಮಾನ್ಯ ಸದಸ್ಯರ ಸಭೆಯ ನಡವಳಿಗಳನ್ನು ಉಲ್ಲೇಖಿಸುತ್ತಾ ಪ್ರಾಧಿಕಾರದ 4 ಬಸ್ಸುಗಳಿಗೆ 7 ವಾಹನ ಚಾಲಕರ ಹುದ್ದೆಗಳನ್ನು ಸೃಜಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಪ್ರಾಧಿಕಾರದ 4 ಬಸ್ಸುಗಳಿಗೆ 7 ಚಾಲಕರ ಅವಶ್ಯಕತೆ ಏಕಿದೆ ಎಂಬ ಬಗ್ಗೆ ಸಮರ್ಥನೆ ನೀಡುವಂತೆ ಪ್ರಾಧಿಕಾರವನ್ನು ಕೋರಲಾಗಿದ್ದು, ಅದಕ್ಕೆ ಮೇಲೆ (3) ರಲ್ಲಿ ಓದಲಾದ ಪ್ರಾಧಿಕಾರದ ಪತ್ರದಲ್ಲಿ ಆ ಕುರಿತು ಸಮರ್ಥನೆಯನ್ನು ಪಡೆಯಲಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ರಾಜ್ಯಾದ್ಯಂತ ದುರ್ಬಲವರ್ಗದವರಿಗೆ ಉಚಿತವಾಗಿ ಕಾನೂನು ನೆರವು ನೀಡುವ ಹಾಗೂ ಕಾನೂನು ಹಾಗೂ ರಾಜ್ಯದ ಜನರಲ್ಲಿ ಕಾನೂನಿನ ಅರಿವು ಮೂಡಿಸುವ ಸರ್ಕಾರದ ಅಧೀನ ಸಂಸ್ಥೆಯಾಗಿರುತ್ತದೆ. ಸದರಿ ಕಾರ್ಯಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಪ್ರಾಧಿಕಾರಗಳನ್ನು ಹಾಗೂ ಲೋಕ್ –ಅದಾಲತ್‌ಗಳನ್ನು ಸ್ಥಾಪಿಸಲಾಗಿರುತ್ತದೆ. ಮೇಲ್ಕಂಡ ಅತ್ಯವಶ್ಯ ಕಾರ್ಯಗಳಿಗಾಗಿ ಪ್ರಾಧಿಕಾರವು ಕಾನೂನು 'ಸಾಕ್ಷರತಾ ರಥ' ಹಾಗೂ ಸಂಚಾರಿ ಜನತಾ ನ್ಯಾಯಾಲಯ ಎಂಬ 3 ದೊಡ್ಡ ಬಸ್ಸುಗಳನ್ನು ಹಾಗೂ ಒಂದು ಮಿನಿ ಬಸ್ಸನ್ನು ಬಳಸುತ್ತಿರುತ್ತದೆ. ಸದ್ಯಕ್ಕೆ ಪ್ರಾಧಿಕಾರದ ಸದರಿ ಬಸ್ಸುಗಳ ಚಾಲನೆಗಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ನಿಯೋಜಿಸಲ್ಪಟ್ಟಿರುವ 7 ವಾಹನ ಚಾಲಕರು ನಿರ್ವಹಿಸುತ್ತಿರುತ್ತಾರೆ. ಇವರ ಎಲ್ಲಾ ವೆಚ್ಚಗಳನ್ನು ಪ್ರಾಧಿಕಾರವೇ ಭರಿಸುತ್ತಿರುತ್ತದೆ. ಒಂದು ಬಸ್ಸಿಗೆ ಒಬ್ಬ ಚಾಲಕನಂತೆ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಕರ್ತವ್ಯ ನಿರ್ವಹಿಸುವುದು ಕಷ್ಟ ಸಾಧ್ಯ. 4 ಬಸ್ಸುಗಳಲ್ಲಿ ಪ್ರತಿಯೊಂದು ಬಸ್ಸಿನ ಕೆಲಸದ ಅವಧಿಯು ಹೆಚ್ಚಾಗಿರುವುದರ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 4 ಬಸ್ಸುಗಳಿಗೆ 7 ವಾಹನ ಚಾಲಕರ ಹುದ್ದೆ ಮಂಜೂರು ಮಾಡುವುದು ನ್ಯಾಯಯುತ ಮತ್ತು ಸಮಂಜಸವಾಗಿದೆ ಎಂಬುದನ್ನು ಪರಿಗಣಿಸಿದೆ.

ಮೇಲೆ ವಿವರಿಸಲಾದ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಬಸ್ಸುಗಳಿಗೆ 7 ವಾಹನ ಚಾಲಕರ ಹುದ್ದೆಗಳನ್ನು ಸೃಜಿಸಬೇಕಾದ ಅವಶ್ಯಕತೆ ಇರುವುದನ್ನು ಪರಿಗಣಿಸಲಾಗಿದೆ.

ಆದ್ದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಲಾ 61 ಎಲ್‌ಎಡಿ 2012, ಬೆಂಗಳೂರು ದಿನಾಂಕ: 10/01/2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ವೇತನ ಶ್ರೇಣಿ ರೂ. 11600-21000ರ 7 ವಾಹನ ಚಾಲಕರ ಹುದ್ದೆಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಸೃಜಿಸಿ ಆದೇಶಿಸಲಾಗಿದೆ. ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಪ್ರಾಧಿಕಾರಕ್ಕೆ ಒದಗಿಸುವ ಯೋಜನೇತರ ಸಹಾಯಾನುದಾನದ ಲೆಕ್ಕಶೀರ್ಷಿಕೆಯಿಂದ ಭರಿಸಬಹುದಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ: ಆಇ 428 ವೆಚ್ಚ-10/2012 ದಿನಾಂಕ: 04-01-2013ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಎಲ್.ಮಡಿವಾಳ

ಸರ್ಕಾರದ ಅಧೀನ ಕಾರ್ಯದರ್ಶಿಗಳು (ಆಡಳಿತ-2)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 299

COMMERCE AND INDUSTRIES SECRETARIAT

Sub : Change of name of the project proposal of M/s Infotel Broadband Services Private Limited-reg.

Ref : 1) Government Order No. CI 274 SPI 2011, dated: 16.12.2011.

2) Government Order No. CI 46 SPI 2010, dated: 08.02.2012.

3) Government Order No. CI 128 SPI 2012, dated: 20.04.2012.

4) Request from M/s Reliance Jio Infocomm Limited dated: 29.01.2013.

Preamble:

In the Government Order read at (1) above, the Government approved the project proposal of M/s Infotel Broadband Services Private Limited to provide "Telcom Broadband Services" throughout State of Karnataka with and investment of Rs. 3.300 crores.

Later in the Government Order read at (2) above, name of the company was changed from M/s Infotel Broadband Services Private Limited to M/s Infotel Broadband Services Limited.

In the Government Order read at (3) above, the Government gave in principle approval to the project for establishment of "Internet Data Centre" project at IT/ITES Park, Devanahalli with an investment of Rs. 300.00 crores.

Now the company in its latter dated 29.01.2013 read at (4) above has stated that it has changed its name to M/s Reliance Jio Infocomm Limited and there is no change in management, constitution, control and share holding of the company except change of name.

The Government has examined the proposal and hence the following Order.

GOVERNMENT ORDER NO. CI 128 SPI 2012, BANGALORE DATED: 02.02.2013

Government is pleased to give approval for the change of name from M/s Infotel Broadband Services Limited to **"M/s Reliance Jio Infocomm Limited"** for implementation of the project approved vide Government Order No. CI 128 SPI 2012, dated: 20.04.2012.

The other terms and conditions remain unaltered.

By Order and in the name of the Governor of Karnataka,
SHIVASHANKAR NAIK .L
Desk Officer (Technical Cell)
Commerce & Industries Department

P.R. 300

COMMERCE AND INDUSTRIES SECRETARIAT

Sub : Extension of time for the approved project proposal of M/s Karnataka Power Corporation LTD., to establish a "3 X 500 MW Coal Based Thermal Power Station" at Kudatini Village, Bellary District – reg.

Read : (1) Government Order No. CI 128 SPI 2008, dated: 23.12.2008.

(2) Letter No. A1L 1H/BTPS/685, dated: 05.12.2012 from Managing Director, Karnataka Power Corporation Ltd., Bangalore.

PREAMBLE:

The project proposal of M/s Karnataka Power Corporation Ltd., to establish a "3 X 500 MW Coal Based Thermal Power Station" at Kudatini village, Bellary District was approved in 13th State High Level Clearance Committee (SHLCC) and Government Order was issued vide read at (1) above.

The Managing Director, Karnataka Power Corporation Ltd., Bangalore his letter read at (2) above has stated that as against the 2187 acres of land approved for the Karnataka Power Corporation Ltd., project, M/s Karnataka Power Corporation Ltd., has decided to acquire only 1250 acres and accordingly submitted application to KIADB, Bangalore to acquire and hand over the land. At present it is in the preliminary notification stage under Section 28(1). The submission of application for acquisition of 1250 acres was delayed because of the changes made in the design of project due to increase in the capacity of the plant and the ascertainment of the availability of water for 2 X 800 MW plant etc., Now the KIADB authorities are insisting for the extension of time given in Government order referred (1) above for taking up further steps to acquire the land. Therefore, requested to extend the time/validity of Government Order above for a further period of one year by issuing suitable Government orders.

Hence the following order.

GOVERNMENT ORDER NO: CI 128 SPI 2008(P), BANGALORE DATED: 14.02.2013

Government is pleased to extend the validity period of approval accorded to M/s Karnataka Power Corporation Ltd., to establish a "3 X 500 MW Coal Based Thermal Power Station" at Kudatini village, Bellary District vide Government Order No. CI 128 SPI 2008, dated: 23.12.2008 for further period of one year from the date of issue of this order.

The other terms and conditions of the Govt. Order read above at (1) remain the same.

By Order and in the name of the Governor of Karnataka,
SHIVASHANKAR NAIK .L
Desk Officer (Technical Cell)
Commerce & Industries Department

P.R. 301

COMMERCE AND INDUSTRIES SECRETARIAT

Sub : Extension of time for the approved project proposal of M/s Vishwanath Sugars Ltd., to establisher a "0.5 Million MTPA Integrated Steel Plant" at Bellad-Bagewadi Village, Hukkeri Taluk, Belgaum District – reg.

Read : (1) Government Order No. CI 143 SPI 2010, dated: 29.04.2010.

(2) Letter from Hon'ble Minister for Agriculture and Food Processing dated: 07.02.2013.

PREAMBLE:

Project Proposal of M/s Vishwanath Sugars Ltd., to establish a "0.5 Million MTPA Integrated Steel Plant" at Bellad-Bagewadi Village, Hukkeri Taluk, Belgaum District was approved in 21st State High Level Clearance Committee (SHLCC) and Government Order was issued vide read at (1) above.

The Hon'ble Minister for Agriculture and Food Processing in his letter read at (2) above has stated that as the matter of mining iron ore is before the Hon'ble Court, it is not possible to implement the project. Hence request for extension of time for the Government Order read at (1) above.

Hence the following order.

GOVERNMENT ORDER NO:CI 143 SPI 2010, BANGALORE DATED: 14.02.2013

Government is pleased to extend the validity period of approval accorded to M/s Vishwanath Sugars Ltd., to establish a "0.5 Million MTPA Integrated Steel Plant" at Bellad-Bagewadi Village, Hukkeri Taluk, Belgaum District vide Government Order No. CI 143 SPI 2010, dated: 29.04.2010 for further period of two years from the date of issue of this order.

The other terms and conditions of the Govt. Order read above at (1) remain the same.

By Order and in the name of the Governor of Karnataka,

SHIVASHANKAR NAIK .L

Desk Officer (Technical Cell)

Commerce & Industries Department

P.R. 302

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಅಧೀನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಇವರು ಸರ್ಕಾರಿ ಕೆಲಸದ ನಿಮಿತ್ತ ಬೆಳಗಾವಿ ವಿಧಾನ ಮಂಡಲದ ಅಧಿವೇಶನದಲ್ಲಿ ಭಾಗವಹಿಸಲು ಪ್ರವಾಸ ಕೈಗೊಳ್ಳುವ ಬಗ್ಗೆ.

ಓದಲಾಗಿದೆ : 1) ಕಾರ್ಯದರ್ಶಿ, ಸಿ.ಆ.ಸು.ಇ. (ಆಡಳಿತ ಸುಧಾರಣೆ) ಇವರ ಸಂಖ್ಯೆ: ಸಿಆಸುಇ 36 ಈಕಾಅ 2012 ದಿ: 26–11–2012ರ ಸುತ್ತೋಲೆ ಹಾಗೂ ದಿ: 29–11–2012ರ ಅಧಿಕೃತ ಜ್ಞಾಪನ.

2) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಪತ್ರ ಸಂಖ್ಯೆ: ಕವಿಪ:ಶಾರಶಾ:540: 120ನೇ.ಅ:.2012 ದಿ:17–11–2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (2) ರಲ್ಲಿನ ಪತ್ರ ದಿ: 17–11–2012 ಹಾಗೂ ಕ್ರಮಾಂಕ (1) ರಲ್ಲಿ ಓದಲಾದ ಸುತ್ತೋಲೆ ಹಾಗೂ ಅಧಿಕೃತ ಜ್ಞಾಪನಗಳಲ್ಲಿ ದಿ:05–12–2012 ರಿಂದ ಬೆಳಗಾಂನಲ್ಲಿ ಜರುಗುವ ಕರ್ನಾಟಕದ ವಿಧಾನ ಮಂಡಲದ ಉಭಯ ಸದನಗಳ ಅಧಿವೇಶನಗಳಿಗೆ ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ ಸೂಚನೆಗಳನ್ನು ಹೊರಡಿಸಲಾಗಿದೆ. ಇದರನ್ವಯ ಮಾತಂ, ಜೈತಂ ಹಾಗೂ ವಿತಂ ಇಲಾಖೆಯ ಪರವಾಗಿ ಹಾಜರಾಗಲು ಶ್ರೀ ಇ. ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿಗಳು, ಮಾತಂ, ಜೈತಂ ಹಾಗೂ ವಿತಂ ಇಲಾಖೆ, ಇವರನ್ನು ನಿಯೋಜಿಸಲು ತೀರ್ಮಾನಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 01 ಎಲ್‌ಸಿಎಂ 2012 ಬೆಂಗಳೂರು, ದಿ: 7/10–12–2012

ಶ್ರೀ ಇ.ರಾಮಕೃಷ್ಣಪ್ಪ, ಅಧೀನ ಕಾರ್ಯದರ್ಶಿಗಳು, ಮಾತಂ, ಜೈತಂ ಹಾಗೂ ವಿತಂ ಇಲಾಖೆ, ಇವರನ್ನು ದಿ: 10–12 ರ ಡಿಸೆಂಬರ್–2012 ರವರೆಗೆ ಬೆಳಗಾಂನಲ್ಲಿ ನಡೆಯಲಿರುವ ವಿಧಾನ ಮಂಡಲದ ಅಧಿವೇಶನದ ಸಂಬಂಧವಾಗಿ ನಿಯೋಜಿಸಲಾಗಿದೆ.

ಈ ಅಧಿಕಾರಿಯವರು ನಿಯಮಾನುಸಾರ ಪ್ರಯಾಣ ಭತ್ಯೆಯನ್ನು ಹಾಗೂ ದಿನ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ನಿಯೋಜನೆ ಅವಧಿಯನ್ನು ಅನ್ಯ ಸೇವಾ ಅವಧಿಯೆಂದು ಪರಿಗಣಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಸರ್ಕಾರಿ ಆದೇಶ ಸಂಖ್ಯೆ: FD 4 TFP 2012, ದಿ: 27–04–2012ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಪ್ರದತ್ತವಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಶ್ರೀನಿವಾಸ ಮೂರ್ತಿ

ಸರ್ಕಾರದ ಉಪ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

P.R. 303

ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಸಚಿವಾಲಯ

ವಿಷಯ : ಕರ್ನಾಟಕ ಅಂತರ್ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ : ಏಕ ಕಡತ ಟಿಪ್ಪಣಿ ಸಂಖ್ಯೆ:ವಾಇ/ಕ್ಷೇಪ್ರ/ಕೆಐಎಂಪಿಸಿಸಿ/2012-13/5130.

ಪ್ರಸ್ತಾವನೆ:

ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ಹೆಚ್ಚಿನ ಮಟ್ಟದ ಪ್ರಚಾರಕ್ಕಾಗಿ ಒತ್ತು ನೀಡಲು, ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಅಡಿಯಲ್ಲಿ ಅಂತರ್ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿಗಳನ್ನು ರಚಿಸಿದ್ದು, ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳಿಗೆ ವ್ಯಾಪಕ ಪ್ರಚಾರ ನೀಡುವ ದೃಷ್ಟಿಯಿಂದ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ರಾಜ್ಯ ಸರ್ಕಾರ ಸ್ವಾಮ್ಯದ ನಿಗಮ ಹಾಗೂ ಮಂಡಳಿಗಳಿಂದ ಕೂಡಿರುವ "ಕರ್ನಾಟಕ ಅಂತರ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿ" ಯನ್ನು ರಚಿಸುವ ಮುಖಾಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮೂಲಕ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ಕಾರ್ಯಕ್ರಮಗಳ ಅಭಿವೃದ್ಧಿಗೆ ಸಂಬಂಧಿಸಿದ ಕೆಲಸ ಕಾರ್ಯಗಳು, ಸಾಮಾಜಿಕ ಸಮಸ್ಯೆಗಳು ಇತ್ಯಾದಿಗಳ ಬಗ್ಗೆ ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರಕ್ಕಾಗಿ ಈ ಸಮಿತಿಯನ್ನು ರಚಿಸುವ ಅವಶ್ಯಕತೆ ಇರುವುದರಿಂದ ನಿರ್ದೇಶಕರು, ವಾರ್ತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆ, ನಿಗಮ, ಮಂಡಳಿಗಳಲ್ಲಿರುವ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ಅಥವಾ ಇಲಾಖೆಯಲ್ಲಿರುವ ಜಂಟಿ ನಿರ್ದೇಶಕರು/ಉಪನಿರ್ದೇಶಕರುಗಳ ಶ್ರೇಣಿಯ ಅಧಿಕಾರಿಗಳನ್ನು ಒಳಗೊಂಡಂತೆ ಕರ್ನಾಟಕ ಅಂತರ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿಯನ್ನು, ರಚಿಸುವಂತೆ ನಿರ್ದೇಶಕರು, ವಾರ್ತಾ ಇಲಾಖೆರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಕಸಂವಾಪ್ರ:45:ವಾಪ್ರಪ: 2012, ಬೆಂಗಳೂರು, ದಿನಾಂಕ: 03.10.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮೂಲಕ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ಕಾರ್ಯಕ್ರಮಗಳ ಅಭಿವೃದ್ಧಿಗೆ ಸಂಬಂಧಿಸಿದ ಕೆಲಸ ಕಾರ್ಯಗಳು, ಸಾಮಾಜಿಕ ಸಮಸ್ಯೆಗಳು ಇತ್ಯಾದಿಗಳ ಬಗ್ಗೆ ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರಕ್ಕಾಗಿ ನಿರ್ದೇಶಕರು, ವಾರ್ತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿವಿಧ ಇಲಾಖೆ, ನಿಗಮ, ಮಂಡಳಿಗಳಲ್ಲಿರುವ ಸಾರ್ವಜನಿಕ ಸಂಪರ್ಕ ಅಧಿಕಾರಿಗಳು ಅಥವಾ ಇಲಾಖೆಯಲ್ಲಿರುವ ಜಂಟಿ ನಿರ್ದೇಶಕರು/ಉಪನಿರ್ದೇಶಕರುಗಳ ಶ್ರೇಣಿಯ ಅಧಿಕಾರಿಗಳನ್ನು ಒಳಗೊಂಡಂತೆ "ಕರ್ನಾಟಕ ಅಂತರ ಮಾಧ್ಯಮ ಪ್ರಚಾರ ಸಂಯೋಜನಾ ಸಮಿತಿ"ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ.

1. ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು. ಅಧ್ಯಕ್ಷರು

2. ಸದಸ್ಯರು:

ಇಲಾಖೆಗಳು		ನಿಗಮ/ಮಂಡಳಿ	
1	ಕೃಷಿ	1	ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ (ಕೆಪಿಟಿಸಿಎಲ್)
2	ಆರೋಗ್ಯ	2	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ)
3	ಸಮಾಜ ಕಲ್ಯಾಣ	3	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ)
4	ಹಿಂದುಳಿದ ವರ್ಗಗಳ ಕಲ್ಯಾಣ	4	ಬೆಂಗಳೂರು ವಿದ್ಯುತ್ ಪ್ರಸರಣಾ ಸಂಸ್ಥೆ (ಬೆಸ್ಕಾಂ)
5	ಶಿಕ್ಷಣ ಇಲಾಖೆ	5	ಪರಿಶಿಷ್ಟ ಜಾತಿ, ಪಂಗಡ ವರ್ಗಗಳ ಅಭಿವೃದ್ಧಿ ನಿಗಮ
6	ಪೊಲೀಸು	6	ಮಹಿಳಾ ಅಭಿವೃದ್ಧಿ ನಿಗಮ
7	ಅರಣ್ಯ	7	ಇಂಧನ ನವೀಕರಣ ಅಭಿವೃದ್ಧಿ ನಿಗಮ
8	ಸಹಕಾರ	8	ರಾಜ್ಯ ಬೀಜ ನಿಗಮ
9	ಪಶುಸಂಗೋಪನೆ	9	ಮಾಂಸ ಮತ್ತು ಕೋಳಿ ಮಾರ್ಕೆಟಿಂಗ್ ಕಾರ್ಪೊರೇಷನ್
10	ಮಹಿಳಾ ಮತ್ತು ಮಕ್ಕಳ ಕಲ್ಯಾಣ	10	ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ
11	ರೇಷ್ಮೆ	11	ಮದ್ಯಪಾನ ಸಂಯಮ ಮಂಡಳಿ
12	ಉದ್ಯೋಗ ಮತ್ತು ತರಬೇತಿ ಇಲಾಖೆ	12	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)
13	ಕಾರ್ಮಿಕ ಇಲಾಖೆ	13	ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ)
14	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	14	ಹಟ್ಟಿ ಚಿನ್ನದ ಗಣಿ ನಿಗಮ
15	ಯುವಜನ ಸೇವೆಗಳು	15	ಮಾಧ್ಯಮ ಅಕಾಡೆಮಿ
16	ಹವಾಮಾನ ಇಲಾಖೆ	16	ಕುರಿ ಮತ್ತು ಉಣ್ಣೆ ಅಭಿವೃದ್ಧಿ
17	ಮೀನುಗಾರಿಕೆ ಇಲಾಖೆ	17	ಕೊಳಚೆ ನಿರ್ಮೂಲನೆ ಮಂಡಳಿ
18	ಆಹಾರ ಮತ್ತ ನಾಗರೀಕ ಸರಬರಾಜು	18	ಕರ್ನಾಟಕ ಗೃಹ ಮಂಡಳಿ
19	ಸಾರಿಗೆ	19	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ

ಇಲಾಖೆಗಳು		ನಿಗಮ/ಮಂಡಳಿ	
20	ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ	20	ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್ಎಸ್‌ಬಿ)
21	ತೋಟಗಾರಿಕಾ ಇಲಾಖೆ	21	ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್ಎಸ್‌ಬಿ)
22	ಕಾನೂನು ಮಾಪನ ಇಲಾಖೆ	22	ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ
23	ಪ್ರವಾಸೋದ್ಯಮ ಇಲಾಖೆ	23	ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ನಿಯಮಿತ
24	ನೀರಾವರಿ/ಜಲಸಂಪನ್ಮೂಲ	24	ಕರ್ನಾಟಕ ರಾಜ್ಯ ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್
25	ಗ್ರಾಮೀಣಾಭಿವೃದ್ಧಿ	25	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ
26	ಅಲ್ಪಸಂಖ್ಯಾತರ ಕಲ್ಯಾಣ	26	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
27	ಕೈಗಾರಿಕೆ	27	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣ ಮತ್ತು ರಫ್ತು ನಿಗಮ
28	ಸಣ್ಣ ಕೈಗಾರಿಕೆ	28	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ

ಸಮಿತಿಯ ಉದ್ದೇಶಗಳು ಹಾಗೂ ಇತರ ಚಟುವಟಿಕೆಗಳು ಈ ಕೆಳಕಂಡಂತಿವೆ:

1. ಬಹು ಮಾಧ್ಯಮಗಳ ಮೂಲಕ ಪ್ರಚಾರ ನೀಡಲು ಇರುವ ಅನುಕೂಲಕರ ಅಂಶಗಳನ್ನು ಗುರುತಿಸಲು ವಿವಿಧ ಇಲಾಖೆಗಳಿಗೆ ಸಹಕರಿಸುವುದು. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆ/ನಿಗಮ/ಮಂಡಳಿ ಹಾಗೂ ಪ್ರಚಾರಕ್ಕೆ ಆಯ್ದುಕೊಂಡ ಉದ್ದೇಶಿತ ಮಾಧ್ಯಮಗಳ ನಡುವೆ ಸಂಯೋಜನೆ ಸಾಧಿಸುವುದು.
2. ತುರ್ತು ಹಾಗೂ ಅತ್ಯಗತ್ಯ ಸಂದರ್ಭಗಳಲ್ಲಿ ಆಯಾ ಇಲಾಖೆ ಹಾಗೂ ಮಾಧ್ಯಮಗಳ ನಡುವೆ ಸಂಯೋಜನೆ ಸಾಧಿಸುವುದು.
3. ಸರ್ಕಾರದ ಪ್ರತಿಷ್ಠೆಗೆ ಧಕ್ಕೆ ಉಂಟಾಗದಂತೆ ಸರ್ಕಾರದ ಮುಖವಾಣಿಯಾಗಿ ಇತರೆ ಇಲಾಖೆಗಳನ್ನು ಅವರ ಪರವಾಗಿ ಪ್ರತಿನಿಧಿಸುವುದು, ಇಲ್ಲವೆ ಅವರ ಮೂಲಕ ಮಾಧ್ಯಮಗಳಲ್ಲಿ ಹೇಳಿಕೆ ನೀಡಿಸುವುದು.

   (ಉದಾ:ಪಲ್ಸ್ ಪೋಲಿಯೋ ಕುರಿತಂತೆ ಅಪಪ್ರಚಾರ ನಡೆದ ವೇಳೆ, ಸಾರ್ವಜನಿಕ ಹಿತದೃಷ್ಟಿಯಿಂದ ಸಂಬಂಧಿಸಿದ ಇಲಾಖೆಗಳಿಂದ ಮಾಹಿತಿ ಪಡೆದು ಅದನ್ನು ಮಾಧ್ಯಮಗಳಿಗೆ ತಲುಪಿಸುವ ಕೆಲಸ ನಿರ್ವಹಿಸುವುದು)
4. ತೀವ್ರ ಪ್ರಚಾರ ಆಂದೋಲನ ಮತ್ತು ವ್ಯಾಪಕ ಪ್ರಚಾರದ ಯಶಸ್ಸಿಗಾಗಿ ಒಗ್ಗೂಡಿ ಶ್ರಮಿಸುವುದು.
5. ಈ ಸಂಬಂಧವಾಗಿ ನಿಯಮಿತವಾಗಿ ತ್ರೈಮಾಸಿಕ ಸಭೆ ಸೇರಿ ಕಾರ್ಯ ಯೋಜನೆಗಳನ್ನು ನಿರೂಪಿಸುವುದು.
6. ವಿವಿಧ ಇಲಾಖೆಗಳು/ನಿಗಮ/ಮಂಡಳಿಗಳು ಹಾಗೂ ಸಂಬಂಧಿಸಿದ ಮಾಧ್ಯಮಗಳ ನಡುವಿನ ಲೋಪಗಳನ್ನು ಗುರುತಿಸುವುದು ಮತ್ತು ಅವುಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸುವುದು.
7. ಸರ್ಕಾರದ ಸಾಧನೆಗಳನ್ನು ಪ್ರತಿಬಿಂಬಿಸುವ ವಿಶೇಷ ಲೇಖನ/ಕಿರುಚಿತ್ರ/ಜಾಹೀರಾತು ನಿರ್ಮಿಸಲು ನೆರವಾಗುವುದು.
8. ರಾಷ್ಟ್ರ ಮಟ್ಟದ ಮಾಧ್ಯಮಗಳು ಮತ್ತು ಸರ್ಕಾರದ ಎಲ್ಲಾ ಇಲಾಖೆಗಳ ನಡುವಿನ ಸಮನ್ವಯತೆಗೆ ಶ್ರಮಿಸುವುದು.
9. ವಿವಿಧ ಇಲಾಖೆಗಳ ಪತ್ರಿಕಾಗೋಷ್ಠಿಗೆ ಕೇಂದ್ರಿಕೃತ 'ಮಾಧ್ಯಮ ಗೋಷ್ಠಿ'ಗೆ ಸಭಾಂಗಣವನ್ನು ರೂಪಿಸುವುದು ಮತ್ತು ಎಲ್ಲಾ ಇಲಾಖೆಗಳ ಪತ್ರಿಕಾ ಗೋಷ್ಠಿಗಳು ಒಂದೇ ಕಡೆಯಲ್ಲಿ ನಡೆಯುವಂತೆ ಮಾಡುವುದು.
10. ವಿವಿಧ ಇಲಾಖೆಗಳು ಮತ್ತು ಮಾಧ್ಯಮ ಸಂಸ್ಥೆಗಳು ನೀಡುವ ಸಲಹೆಗಳನ್ನು ಕ್ರೋಢೀಕರಿಸಿ ಅವುಗಳಿಗೆ ಒಂದು ನಿಶ್ಚಿತ ರೂಪ ನೀಡಿ ಅದರ ಯಶಸ್ವಿ ಅನುಷ್ಠಾನಕ್ಕೆ ಶ್ರಮಿಸುವುದು.
11. ವಿವಿಧ ಇಲಾಖೆಗಳು ಹೊರತರುವ ಪ್ರಕಟಣೆ ಮತ್ತು ಪ್ರಚಾರ ಸಾಮಗ್ರಿಗಳನ್ನು ಆಕರ್ಷಕವಾಗಿ ನಿರೂಪಿಸುವಲ್ಲಿ ನೆರವಾಗುವುದು.
12. ಅನಿವಾರ್ಯ ಸಂದರ್ಭಗಳಲ್ಲಿ ಸ್ವತಂತ್ರವಾಗಿ ಮಾಧ್ಯಮ ನಿರ್ವಹಣೆ ಮಾಡಲು ಅನುವಾಗುವಂತೆ ಆಯಾ ಇಲಾಖೆಯ ಸಿಬ್ಬಂದಿಯನ್ನು ಸಜ್ಜುಗೊಳಿಸುವುದು.
13. ಮಾಧ್ಯಮಗಳ ಅವಶ್ಯಕತೆಗೆ ಅನುಗುಣವಾಗಿ ಸಂಕ್ಷಿಪ್ತವಾಗಿ ಸುದ್ದಿ ಮತ್ತು ಮಾಹಿತಿ ನೀಡುವ ಬಗ್ಗೆ ತರಬೇತಿ ಶಿಬಿರಗಳನ್ನು ಆಯೋಜಿಸುವುದು.
14 ವಿವಿಧ ಮಾಧ್ಯಮಗಳಿಗೆ ಭೇಟಿ ಮತ್ತು ಅವುಗಳ ಕಾರ್ಯಚಟುವಟಿಕೆಯ ಬಗ್ಗೆ ಪ್ರತ್ಯಕ್ಷ ಭೇಟಿ ಆಯೋಜಿಸುವುದು.
15. ಜಾಹೀರಾತು ವಿನ್ಯಾಸ ಮತ್ತು ಟೆಂಡರ್‌ನ ಮೂಲ ಉದ್ದೇಶಕ್ಕೆ ಧಕ್ಕೆ ಆಗದಂತೆ ಸಂಕ್ಷಿಪ್ತಗೊಳಿಸುವ ಕುರಿತು ತರಬೇತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಮಂಜುಳ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ (ವಾರ್ತಾ ಶಾಖೆ)

P.R. 304

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕು ಖಾಜಕೋಟನೂರ ಕೆರೆಗಾಗಿ ಸ್ವಾಧೀನಪಡಿಸಿ ಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2012-13/6437 ದಿನಾಂಕ:28/11/2012.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕು ಖಾಜಕೋಟನೂರ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಶ್ರೀನಿವಾಸ ಸರಡಗಿ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೋರಿದ್ದಾರೆ. ಹೆಚ್ಚಿನ ಪರಿಹಾರ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 06/09/1990.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ: 05/04/1993.

ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಗುಲ್ಬರ್ಗಾ ಇಲ್ಲಿ ಎಲ್.ಎ.ಸಿ. ಪ್ರಕರಣ ಸಂಖ್ಯೆ:849/1995 ಮತ್ತು 850/1995ನ್ನು ದಾಖಲಿಸಿದ್ದು, ಸಿವಿಲ್ ನ್ಯಾಯಾಲಯವು ದಿನಾಂಕ: 15/09/1999 ರಂದು ನೀಡಿದ ಆದೇಶದಲ್ಲಿ ಪ್ರತಿ ಎಕರೆಗೆ ಕ್ರಮವಾಗಿ ರೂ.20,000/- ಮತ್ತು ರೂ.30,000/-ಗಳನ್ನು ನಿಗದಿಪಡಿಸಿ ಆದೇಶಿಸಿದೆ. ಸಿವಿಲ್ ನ್ಯಾಯಾಲಯದ ತೀರ್ಪಿಗೆ ತೃಪ್ತರಾಗದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಗುಲ್ಬರ್ಗಾ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಎಲ್.ಎ.ಸಿ.ಎ ಸಂಖ್ಯೆ:59//2011 ಮತ್ತು 60/2011ನ್ನು ದಾಖಲಿಸಿದ್ದು, ಉಚ್ಚ ನ್ಯಾಯಾಲಯವು ದಿನಾಂಕ: 11/11/2011ರಂದು ನೀಡಿದ ಆದೇಶದಲ್ಲಿ ಕ್ರಮವಾಗಿ ರೂ.50,000/- ಮತ್ತು ರೂ.65,000/-ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಅಧಿಕಾರಿ-3(ಎಲ್.ಎ.ಸಿ) ಇವರ ಪತ್ರ ಸಂಖ್ಯೆ: ಆರ್ ಡಿ 159 ಎಲ್ ಸಿಜಿ 2012, ದಿನಾಂಕ: 16/06/2012 ರಂದು ಮತ್ತು ಆರ್‌ಡಿ 160 ಎಲ್‌ಸಿಜಿ 2012, ದಿನಾಂಕ: 16/06/2012 ರಂದು ಅಭಿಪ್ರಾಯ ನೀಡಿದೆ. ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್.ಎ.ಸಿ. ಸಂಖ್ಯೆ	ಎಲ್‌ಎಸಿಎ ಸಂಖ್ಯೆ	ಕಾಜಕೋಟನೂರ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	849/95	59/11	189/2	6-11	7,48,227-00
2	850/95	60/11	189/1	16-10	22,60,579-00
ಒಟ್ಟು					**30,08,806-00**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 164 ಭೂಸ್ವಾಪ್ರ 2012, ಬೆಂಗಳೂರು, ದಿನಾಂಕ: 31ನೇ ಜನವರಿ 2013.

ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕು ಕಾಜಕೋಟನೂರ ಕೆರೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಶ್ರೀನಿವಾಸ ಸರಡಗಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ 189/1 ಮತ್ತು 189/2ರ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಮೊತ್ತ ರೂ.30,08,806-00/-ಗಳನ್ನು (ಮೂವತ್ತು ಲಕ್ಷದ ಎಂಟು ಸಾವಿರದ ಎಂಟುನೂರ ಆರು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರ ಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ.30,08,806-00/-ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20/10/10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ.ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

P.R. 305

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕು ಕಲಮೂಡ ಕೆರೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2012–13/6436 ದಿನಾಂಕ:28/11/2012.

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕು ಕಲಮೂಡ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಲಮೂಡ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೋರಿದ್ದಾರೆ. ಹೆಚ್ಚಿನ ಪರಿಹಾರ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 16/06/1994.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ: 17/06/1996.

ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ಗುಲ್ಬರ್ಗಾ ಇಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ನ್ಯಾಯಾಲಯವು ದಿನಾಂಕ: 13/10/2000ರಂದು ನೀಡಿದ ಆದೇಶದಲ್ಲಿ ಪ್ರತಿ ಎಕರೆ ರೂ.25,000/–ಗಳನ್ನು ನಿಗದಿಪಡಿಸಿ ಆದೇಶಿಸಿದೆ. ಸಿವಿಲ್ ನ್ಯಾಯಾಲಯದ ತೀರ್ಪಿಗೆ ತೃಪ್ತರಾಗದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರಕ್ಕಾಗಿ ಗುಲ್ಬರ್ಗಾ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಎಲ್.ಎ.ಸಿ.ಎ ಪ್ರಕರಣಗಳನ್ನು ದಾಖಲಿಸಿದ್ದು, ಜಿಲ್ಲಾ ನ್ಯಾಯಾಲಯವು ದಿನಾಂಕ: 27/11/2010 ರಂದು ನೀಡಿದ ಆದೇಶದಲ್ಲಿ ರೂ.48,200/–ಗಳಿಗೆ ಹೆಚ್ಚಿಸಿ ಆದೇಶಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಅಧಿಕಾರಿ–3(ಎಲ್.ಎ.ಸಿ) ಇವರ ಪತ್ರ ಸಂಖ್ಯೆ: ಆರ್‌ಡಿ 108 ಎಲ್‌ಸಿಜಿ 2011, ದಿನಾಂಕ: 04/06/2012 ರಂದು ಅಭಿಪ್ರಾಯ ನೀಡಿದೆ. ನ್ಯಾಯಾಲಯವು ಹೆಚ್ಚಿನ ಪರಿಹಾರಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್.ಎ.ಸಿ. ಸಂಖ್ಯೆ	ಎಲ್‌ಎಸಿಎ ಸಂಖ್ಯೆ	ಕಲಮೂಡ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	389/1998	124/2010	48/1,2	0–30	58372
2	390/1998	125/2010	50	0–14	27707
3	391/1998	126/2010	23/2	0–08	11873
4	393/1998	127/2010	80/3,4,5	0–32	63332
5	394/1998	128/2010	52/1	4–00	316656
6	395/1998	129/2010	44/1–5	3–30	59372
7	396/1998	130/2010	22/5	1–10	98995
8	397/1998	131/2010	27/5	0–25	49479
9	398/1998	132/2010	28	0–22	43540
				ಒಟ್ಟು	**730286**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 165 ಭೂಸ್ವಾಪ್ರ 2012, ಬೆಂಗಳೂರು, ದಿನಾಂಕ: 31ನೇ ಜನವರಿ 2013.

ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕು ಓಕಳಿ ಕೆರೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಲಮೂಡ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಮೊತ್ತ ರೂ.7,30,286 ಗಳನ್ನು (**ಏಳು ಲಕ್ಷದ ಮೂವತ್ತು ಸಾವಿರದ ಎರಡುನೂರ ಎಂಭತ್ತಾರು ರೂಪಾಯಿಗಳು ಮಾತ್ರ**) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆ ಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ರೂ.7,30,286/–ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20/10/10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ.ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

P.R. 306

ಆರ್ಥಿಕ ಸಚಿವಾಲಯ

ವಿಷಯ : ಬೆಂಗಳೂರಿನಿಂದ ಕಾರವಾರಕ್ಕೆ ಹಾಗೂ ಕಾರವಾರದಿಂದ ಬೆಂಗಳೂರಿಗೆ ಗೋವಾ ಮೂಲಕ ವಿಮಾನ ಪ್ರಯಾಣ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ನಾಗರೀಕ ಸೇವಾ ನಿಯಮಗಳ 462ನೇ ನಿಯಮದ ಟಿಪ್ಪಣಿ (14)ಕ್ಕೆ ತಿದ್ದುಪಡಿ ಮಾಡಿ, ವಿಮಾನದ ಮೂಲಕ ಪ್ರಯಾಣ ಮಾಡಲು ಹಕ್ಕು ಹೊಂದಿರುವ ಸರ್ಕಾರಿ ನೌಕರರು ಕರ್ತವ್ಯದ ಮೇಲೆ ಬೆಂಗಳೂರು ಮತ್ತು ಕಾರವಾರಗಳ ನಡುವೆ ಪ್ರಯಾಣ ಮಾಡುವಾಗ ವಿಮಾನದಲ್ಲಿ ಧಾರವಾಡದ ಮೂಲಕ ಪ್ರಯಾಣ ಮಾಡಬಹುದು ಮತ್ತು ರೈಲ್ವೆಯವರು ಬೆಂಗಳೂರು ಮತ್ತು ಹುಬ್ಬಳ್ಳಿ ಹಾಗೂ ಹುಬ್ಬಳ್ಳಿ ಮತ್ತು ಬೆಂಗಳೂರು ನಡುವೆ ಸಂಚರಿಸಲು ಕಲ್ಪಿಸಿರುವ "ಇಂಟರ್ ಸಿಟಿ ಎಕ್ಸ್‌ಪ್ರೆಸ್" ಸೇವೆಯನ್ನು ಸಹ ಸರ್ಕಾರಿ ನೌಕರರು ಉಪಯೋಗಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿತ್ತು.

ಆದರೆ, ಇತ್ತೀಚಿನ ದಿನಗಳಲ್ಲಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ಹಾಗೂ ಹುಬ್ಬಳ್ಳಿಯಿಂದ ಬೆಂಗಳೂರಿಗೆ ವಿಮಾನಯಾನವು ಸ್ಥಗಿತಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ, ಕ.ನಾ.ಸೇ.ನಿ.ನಿಯಮ 462ಕ್ಕೆ ತಿದ್ದುಪಡಿ ಮಾಡುವುದನ್ನು ಕಾಯ್ದಿರಿಸಿ, ವಿಮಾನದ ಮೂಲಕ ಪ್ರಯಾಣ ಮಾಡಲು ಹಕ್ಕು ಹೊಂದಿರುವ ಸರ್ಕಾರಿ ನೌಕರರು ಕರ್ತವ್ಯದ ಮೇಲೆ ಬೆಂಗಳೂರು ಮತ್ತು ಕಾರವಾರಗಳ ನಡುವೆ ಪ್ರಯಾಣ ಮಾಡುವಾಗ ವಿಮಾನದಲ್ಲಿ ಗೋವಾ ಮೂಲಕ ಪ್ರಯಾಣ ಮಾಡಲು ಅನುಮತಿ ನೀಡಲು ತೀರ್ಮಾನಿಸಲಾಗಿದೆ. ಅದರಂತೆ, ಈ ಕೆಳಗಿನ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂ: ಆಇ 10 ಸನಿತಿ 2012, ಬೆಂಗಳೂರು, ದಿನಾಂಕ: 06.12.2012.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 462ಕ್ಕೆ ತಿದ್ದುಪಡಿ ಮಾಡುವುದನ್ನು ಕಾಯ್ದಿರಿಸಿ, ವಿಮಾನದ ಮೂಲಕ ಪ್ರಯಾಣ ಮಾಡಲು ಹಕ್ಕು ಹೊಂದಿರುವ ಸರ್ಕಾರಿ ನೌಕರರು ಕರ್ತವ್ಯದ ಮೇಲೆ ಬೆಂಗಳೂರು ಮತ್ತು ಕಾರವಾರಗಳ ನಡುವೆ ಪ್ರಯಾಣ ಮಾಡುವಾಗ ವಿಮಾನದಲ್ಲಿ ಹುಬ್ಬಳ್ಳಿ–ಧಾರವಾಡ ಮೂಲಕ ಪ್ರಯಾಣ ಮಾಡುವುದಕ್ಕೆ ಬದಲಾಗಿ, ಗೋವಾ ಮೂಲಕ ಪ್ರಯಾಣ ಮಾಡಲು ಸರ್ಕಾರವು ಅನುಮತಿಸಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆಲಿಸ್ ಗೊನ್ಸಾಲ್ವಿಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು–1)

P.R. 309

INFORMATION TECHNOLOGY, BIOTECHNOLOGY AND SCIENCE AND TECHNOLOGY SECRETARIAT

Sub : Constitution of Advisory Committee on Kanaja Project.

Read : 1) GO No. ED 122 URC 2012, dt:09-10-2012.
2) Office Order No:16 dt: 9/12/2010

PREAMBLE:

In the Government Order read at (1) above, the Department of Information Technology, Bio Technology and Science and Technology has been appointed as the Nodal Department of the KANAJA Portal project.

1) ತಾಂತ್ರಿಕ ಮಂಜೂರಾತಿಯನ್ನು ಸೂಕ್ತವಾದ ಲೆಕ್ಕಶೀರ್ಷಿಕೆ/ಉಪ ಲೆಕ್ಕಶೀರ್ಷಿಕೆಯಡಿ ನೀಡುವುದು. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3) ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪ್ರಸ್ತಾವನೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.

4) ಕಾಮಗಾರಿಯ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ಸಣ್ಣ ನೀರಾವರಿ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಅಥವಾ ಮುಖ್ಯ ಇಂಜಿನಿಯರ್‌ಗಳ ನೇತೃತ್ವದಲ್ಲಿ ಇರುವ ತಾಂತ್ರಿಕ ಸಮಿತಿಯ ತೀರುವಳಿಯನ್ನು ನಿಯಮಾನುಸಾರ ಪಡೆಯುವುದು.

5) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.

6) ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.

7) ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್. ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.

8) ಇ.ಐ.ಆರ್.ಎಲ್/ವರ್ಕ್ ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.

9) ಕಾವೇರಿ ಕೊಳ್ಳದಲ್ಲಿ ಬರುವ ಯೋಜನೆಗಳ ಅನುಷ್ಠಾನವು ಕಾವೇರಿ ನ್ಯಾಯಾಧಿಕರಣದ ಆದೇಶಗಳಿಗೆ ವ್ಯತಿರಿಕ್ತವಾಗಬಾರದು.

10) ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.

11) ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸರ್ಕಾರದ ಆದೇಶ ಸಂಖ್ಯೆ: ಸನೀಇ 01 ನಯೋಕಾ 2013 (ತಾಂತ್ರಿಕ)

ದಿ: 23.01.2013 ಕ್ಕೆ ಅನುಬಂಧ.

ANNEXURE

Alternative Projects – Details of approved proposals **(Rs. In Lakh)**

Sl. No.	RO_CODE	TRAN CHE	DISTRICT	TALUK	Name of Project (Original sanction)	Project Cost	NB_LOAN	NB LOAN drawn	Alternate Proposal approved	Project Cost
1	1130797	XIII	BELGAUM	Athani	Const. of percolation tank nr Peera	70.00	66.50	1.96	Const. of Lift Irrigation at Karur Village of Chikkodi Taluk, Belgaum	70.00
2	1130799	XIII	BELGAUM	Chikodi	Const. of PT near Walki village	70.00	66.50	31.20	Providing irrigation Scheme to Re Sy.No. 216/2A, 216/B, 195 194/1, 194/2, 136/5A, 191/2, 130/3, 130/4, 136/6, 190/5, 191/3, 137 & 140 of Nanadi village, Chikkodi.	70.00
3	1140166	XIV	BAGALKOTE	Badami	Const. of PT near Khyad	27.00	25.65	1.02	Impts. to Katapur Barrage in Badami, Bagalkote.	27.00
4	1140292	XIV	TUMKUR	C.N. Halli	Constn. of PT at Bommenahally H. M Kaval	14.00	13.30	0.19	Construction of Percolation Tank near Dodda Malajana Katte in Handanakere Hobli, C.N. Halli, Tumkur.	14.00

Sl. No.	RO_CODE	TRAN CHE	DISTRICT	TALUK	Name of Project (Original sanction)	Project Cost	NB_LOAN	NB LOAN drawn	Alternate Proposal approved	Project Cost
5	1150099	XV	BELLARY	Bellary	Const. of check dam near Yerragudi village	35.00	33.25	0.35	Construction of checkdam near Honnehalli village in Bellary	35.00
6	1150216	XV	BELLARY	Bellary	Const. of checkdam near Sindhavala	33.00	31.35	0.48	Construction of checkdam near Ettinabadahalu village in Bellary	33.00
7	1150321	XV	BANGALORE EAST		Improvements to Gunjanuru	39.00	37.05		Impts. to Makanahalli tank in Hoskote Taluk.	39.00
8	1150338	XV	RAICHUR	Sindhanur	Const. of PT near Nanjaladinni village	35.00	33.25	5.00	Construction of Pickup near Ratnapur village in Sindanur, Raichur.	35.00
9	116310	XVI	DAVANAGERE	Davanagere	Const. of checkdam across halla in Sy No.41 of Kaidale village	20.00	19.00	0.95	Construction of checkdam across halla in Sy.No.63 of Kaidale village. Davanagere.	20.00
10	116034	XVI	BAGALKOTE	Bilagi	Janamatti & Sunag Tanda – const. of LIS	660.00	627.00		Construction of BCB across Malaprabha river near Mulur Haladur in Hunagund. Bagalkote	660.00
11	117351	XVII	KOPPAL		Construction of pickup to nala near, Malakanamaraddi village, Gangavathi Taluk	15.00	14.25		Construction of pickup across halla near hosahalli & Muddaballi village in Koppal.	15.00
12	117131	XVII	SHIMOGA		Construction of Pickup across Rangayyanahalla near Farm Land of Sri Rangappa Sy. No. 13 of Hathighatta village. Bhadravathi Taluk	25.00	23.75		Construction of pickup across halla near Belegere village in Shimoga	25.00
13	117143	XVII	SHIMOGA	Hosanagara	Construction of Barrage across Kumadavathi river at Kolavanka near Harohittalu village	40.00	38.00		Providing CC lining to Kesare Halla pickup channel in Maruthipura Gram Panchayath.	40.00
					TOTAL	**1083.00**	**1028.85**	**41.15**		**1083.00**

RUDRAMURTHY

Assistant Executive Engineer and
Ex Officio Under Secretary to Government
Water Resources Department (Minor Irrigation)

P.R. 308

INFRASTRUCTURE DEVELOPMENT SECRETARIAT

Sub: Construction of Kolar – Chickballapura Gauge Conversion railway line project – Release of funds – reg.

Read:
1. G.O. No. IDD 35 NSW 09 dated: 24-04-2009
2. G.O. No. IDD 80 NSW 09 dated: 03-09-2010
3. G.O. No. IDD 80 NSW 09 dated: 23-02-2011.
4. G.O. No. IDD 80 NSW 09 dated: 23-05-2011.
5. G.O. No. IDD 80 NSW 09 dated: 06-02-2012.
6. G.O. No. IDD 80 NSW 09 dated: 22-03-2012.
7. G.O. No. IDD 80 NSW 09 dated: 19-07-2012.
8. Letter No. W63/ CN/ CE/ Plng/ KC, dated: 10-10-2012, from the Chief Engineer/ Con/ East, South Western Railway, Bangalore.

Preamble:

Railways are one of the most convenient and widely used means of travel in India and also a very critical component in logistics. The use of rail network for freight and passenger transport has the potential to reduce road congestion, improve safety, improve economic efficiencies and reduce environmental impacts. To increase the rail density in the State, the State Govt had taken initiatives to take up rail projects on cost sharing basis (50:50, 2/3rd and 1/3rd etc.,) since 2002. Keeping in view the facts that the allocations for railways has to be increased for early commissioning of railway projects, the State Government has decided to undertake some of the ongoing railway projects in the state on cost sharing basis.

2. In G.O. read at (1) above, Government of Karnataka has taken up the balance work of Kolar-Chickballapura gauge conversion railway project on 50:50 cost sharing basis between GoK and Railway. This project was sanctioned during 2006-07 and the total length of the project is 90 kms & cost of the project is Rs. 287.99 crore. The expenditure incurred by SWR is Rs. 107.83 crore, the project has been taken up from 2010-11 onwards on cost sharing basis between Railways and GoK.

3. In G.O read at (2) to (5) & (7)above, Government of Karnataka has released Rs.110.00 crores towards guage conversion of Kolar –Chikkaballapur railway line.

4. In G.O read at (6) above, Government of Karnataka has constituted a Committee including railway officers under the Chairmanship of Principal Secretary to Government, Public Works Department to go into the details of reasons for the cost revision (escalation) of railway projects confined to projects on cost sharing basis and decided on the cost revision in the state.

5. The original cost of the project was estimated at Rs.98.82 crores during 2007. This estimate was revised to Rs.287.93 crores during 2010 and further revised to Rs.438.391 crores during the beginning of 2012. It was brought to the notice of the Committee that at the time of entering into cost sharing arrangement between MoR and GoK w.e.f. 1.4.2010, the Railways had already spent Rs.107.83 crores and the balance amount that was to be shared was Rs.180.10 crores as per the 2010 estimate of Rs.287.93 crores. (the GoK share worked out to Rs.90.05 crores).

6. In the letter read at Sl. No. (8) above, the Chief Engineer, (Planning) Con., South Western Railway, Bangalore, has reported that the latest status of the works of the project as below:

- Formation work including earthwork and blanketing: The entire length of the project is completed.
- Bridges: All the minor bridge are completed and almost all the major bridges except for br. #185 in CBP yard where extension work for accommodating 3 lines is in progress.
- Station buildings: All most all the works on all the station buildings are completed except for some finishing works and work on the station building at new Xing station at Mudavadi, where in the work is in progress.
- Track linking new track with service rails has been linked and the engine rolling has been done on the entire project during September 2012. Complete requirement of the Rails (20 rail panels) for renewing the track with new rails have been received and renewal work commenced.
- Miscellaneous works such as works on level xings, gate lodges, and indicator boards, signaling arrangements, electrification and other finishing works are in progress.

Further he has stated that during the current year as on 31.03.2012 an amount of Rs.72.00 crores has been spent for the project and he has requested to release an amount of Rs.48.00 crores as GoK share for the construction of Kolar – Chikkaballapur Railway Gauge Conversion.

The proposal of South Western Railways has been examined in detail and hence this order.

GOVERNMENT ORDER NO. IDD 80 NSW 2009, BANGALORE DATED: 19-12-2012.

Under the circumstances explained in the preamble, Government are pleased to release an amount of Rs.20.00 crores (Rupees Twenty Crores only) under the Head of Account “5465-01-190-3-05-211 (Plan) New Cost Sharing Project Investments" and

Rs.28.00 crores (Rupees Twenty Eight Crores only) under the Head of Account "5465-01-190-3-05-133 (Plan) Special Development Plan" out of the Budget during 2012-13 for the construction of Kolar – Chikkaballapur Gauge Conversion project

2. The Chief Executive Officer, K-RIDE, Bangalore is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

3. The State Government has released complete share for this project. Hence the South Western Railways is directed to complete the project as per time schedule and to furnish Utilisation Certificate and Physical progress of the project. State Government shall not consider any revised estimates/ cost escalation.

4. This order is issued in accordance with the financial powers delegated to Principal Secretaries/ Secretaries to Government vide G.O No FD/04/TFP/2012, dated 27-04-2012 & No.FD 8 TFP 2012 dated 04.10.2012.

By Order and in the name of the Governor of Karnataka
S. J. SAMPATH KUMAR
Under Secretary to Government,
Infrastructure Development Department

PR.394

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಬೀದರ್ ನಗರದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ. 42 ಮತ್ತು 43ರ (ಪೋಲೀಸ್ ಕಲ್ಯಾಣ ಮಂಟಪದ ಹತ್ತಿರ) ಬದಲಿಗೆ ರಸ್ತೆ ಕೆಳ ಸೇತುವೆಯ ಕೂಡು ರಸ್ತೆಯನ್ನು ನಿರ್ಮಾಣ ಮಾಡಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ.ಮೂಅಇ 51 ರಾರಾಹೆ 2011 ದಿನಾಂಕ 27.04.2012.

2. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರ ಪತ್ರ ಸಂಖ್ಯೆ. ಸಿಇಎನ್/ಲೆಪಶಾ–2/2011–12 ದಿನಾಂಕ 31.01.2013.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರದ ಆದೇಶದಲ್ಲಿ ಬೀದರ್ ನಗರದಲ್ಲಿನ ರೈಲು ಮಾರ್ಗದ ಮಧ್ಯದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 42 ಮತ್ತು 43ರ (ಪೋಲೀಸ್ ಕಲ್ಯಾಣ ಮಂಟಪದ ಹತ್ತಿರ) ಬದಲಿಗೆ ರಸ್ತೆ ಕೆಳಸೇತುವೆಯ ಕೂಡು ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲು ರೂ.260.00 (ರೂಪಾಯಿ ಇನ್ನೂರ ಅರವತ್ತು ಲಕ್ಷಗಳು ಮಾತ್ರ) ಲಕ್ಷಗಳ ಅಂದಾಜು ವೆಚ್ಚಕ್ಕೆ ಭೂಸ್ವಾಧೀನ ವೆಚ್ಚವನ್ನು ಹೊರತುಪಡಿಸಿ ರಾಜ್ಯ ಹಾಗೂ ರೈಲ್ವೆ ಮಂತ್ರಾಲಯ ಶೇಕಡ 50:50 ರಷ್ಟು ವೆಚ್ಚ ಭರಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಮೇಲೆ ಓದಲಾದ ಕ್ರ.ಸಂ.(2) ರ ಪತ್ರದಲ್ಲಿ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಧಾರವಾಡ ಇವರು ತಮ್ಮ ಪ್ರಸ್ತಾವನೆಯಲ್ಲಿ ಬೀದರ್ ನಗರದಲ್ಲಿ ರೈಲ್ವೆ ಎಲ್.ಸಿ.ಸಂಖ್ಯೆ. 42 & 43 ರ ಬದಲಿಗೆ ರಸ್ತೆ ಕೆಳ ಸೇತುವೆ ಕೂಡು ರಸ್ತೆ ನಿರ್ಮಾಣ ಹಾಗೂ ಯುಟಿಲಿಟಿ ಸ್ಥಳಾಂತರ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಪಾಲು ರೂ.144.735 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

3. ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ. 42 ಮತ್ತು 43ರ (ಪೋಲೀಸ್ ಕಲ್ಯಾಣ ಮಂಟಪದ ಹತ್ತಿರ) ಬದಲಿಗೆ ರಸ್ತೆ ಕೆಳಸೇತುವೆಯ ಕೂಡು ರಸ್ತೆಯ ನಿರ್ಮಾಣಕ್ಕೆ ಭೂಸ್ವಾಧೀನ ವೆಚ್ಚ ಹಾಗೂ ಯುಟಿಲಿಟಿ ಸ್ಥಳಾಂತರಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯುಟಿಲಿಟಿಗಳನ್ನು ಸ್ಥಳಾಂತರಗೊಳಿಸಿದ ನಂತರ ಉಳಿದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

Sl. No.	Name of the work	Amount	GoK share	MoR share
1.	Land acquisition	29,45,250.00	29,45,250.00	-
2.	GESCOM Poles	1,00,000.00	50,000.00	50,000.00
	Total	**30,45,250.00**	**29,95,250.00**	**50,000.00**

4. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಮೂಅಇ 14 ರಾರಾಹೆ 2013, ಬೆಂಗಳೂರು, ದಿನಾಂಕ 13.02.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೀದರ್ ನಗರದಲ್ಲಿನ ರೈಲು ಮಾರ್ಗದ ಮಧ್ಯದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 42 ಮತ್ತು 43ರ (ಪೋಲೀಸ್ ಕಲ್ಯಾಣ ಮಂಟಪದ ಹತ್ತಿರ) ಬದಲಿಗೆ ರಸ್ತೆ ಕೆಳಸೇತುವೆಯ ಕೂಡು ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಭೂಸ್ವಾಧೀನ ವೆಚ್ಚ ಮತ್ತು ಯುಟಿಲಿಟಿ ಸ್ಥಳಾಂತರಕ್ಕಾಗಿ ರೂ.29,95,250.00 (ಇಪ್ಪತ್ತೊಂಬತ್ತು ಲಕ್ಷ ತೊಂಬತ್ತೈದು ಸಾವಿರ ಇನ್ನೂರ ಐವತ್ತು ರೂಪಾಯಿಗಳು ಮಾತ್ರ) ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ, ಬೀದರ್ ಇವರಿಗೆ ಬಿಡುಗಡೆ ಮಾಡಲಾಗಿದೆ.

2. ಈ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04(ಯೋಜನೆ)–211–ಕೆ–ರೈಡ್–ಆರ್‌ಓಬಿ/ಆರ್‌ಯುಬಿ–ಬಂಡವಾಳ" ಇದರಡಿಯಲ್ಲಿ ರಸ್ತೆ ಮೇಲು ಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ, ಬೀದರ್ ಇವರು ಜಿಲ್ಲಾ ಖಜಾನೆ, ಬೀದರ್ ಇಲ್ಲಿ ಡ್ರಾ ಮಾಡಲು ಅಧೀಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ, ಬೆಂಗಳೂರು ಇವರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ ಇವರ ಖಾತೆಗೆ ಅಪ್‌ಲೋಡ್ ಮಾಡುವುದು. ಈ ಹಣವನ್ನು ಕಾಮಗಾರಿಗೆ ವೆಚ್ಚ ಮಾಡಿ ಉಪಯೋಗಿತಾ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಭೌತಿಕ ಪ್ರಗತಿಯ ವಿವರಗಳನ್ನು ಫೋಟೋದೊಂದಿಗೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ, ಬೀದರ್ ಇವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ಈ ಆದೇಶವನ್ನು ಸಂಖ್ಯೆ. ಆಇ 4 ಟಿಎಫ್‌ಪಿ 2012 ದಿನಾಂಕ 27.04.2012 ಮತ್ತು ಸಂಖ್ಯೆ. ಆಇ 8 ಟಿಎಫ್‌ಪಿ 2012 ದಿನಾಂಕ 04.10.2012ರಲ್ಲಿ ಸರ್ಕಾರದ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.416

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಭದ್ರಾವತಿ ನಗರದ ರೈಲು ನಿಲ್ದಾಣದ ಹತ್ತಿರ ಬರುವ ಎಲ್.ಸಿ.ಸಂಖ್ಯೆ 32ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಹಣ ಬಿಡುಗಡೆ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ: ಮೂಅಇ 27 ರಾರಾಹೆ 2008, ದಿ: 22.9.2009.
2. ಸರ್ಕಾರಿ ಆದೇಶ ಸಂ: ಮೂಅಇ 27 ರಾರಾಹೆ 2008, ದಿ: 08–02–2010
3. ಸರ್ಕಾರಿ ಆದೇಶ ಸಂ: ಮೂಅಇ 27 ರಾರಾಹೆ 2008, ದಿ: 18–05–2010
4. ಸರ್ಕಾರಿ ಆದೇಶ ಸಂ: ಮೂಅಇ 27 ರಾರಾಹೆ 2008, ದಿ: 20–07–2010
5. ಸರ್ಕಾರಿ ಆದೇಶ ಸಂ: ಮೂಅಇ 27 ರಾರಾಹೆ 2008, ದಿ: 05–03–2011
6. ಸರ್ಕಾರಿ ಆದೇಶ ಸಂ: ಮೂಅಇ 27 ರಾರಾಹೆ 2008, ದಿ: 06–06–2011
7. ಪತ್ರ ಸಂ: ಸಂಕದ: ಸೇಶಿವ್ಯ: ರೈಸುಕಾ: ಶಿವಿವಿ: ಅನುದಾನ: 2011–12, ದಿನಾಂಕ: 08–12–2011.
8. ದಿ: 27–06–2012ರಂದು ನಡೆದ ವೆಚ್ಚ ಹೆಚ್ಚಳ ಸಮಿತಿಯ ಸಭೆಯ ನಡವಳಿ.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರ. ಸಂ. (1) ರ ಸರ್ಕಾರಿ ಆದೇಶದಲ್ಲಿ ಭದ್ರಾವತಿ ರೈಲು ನಿಲ್ದಾಣದ ಬಳಿ ಇರುವ ಎಲ್.ಸಿ. ಸಂ.32ರ ಬದಲಿಗೆ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಾಣದ ಕಾಮಗಾರಿಯನ್ನು ರೂ.12.60ಕೋಟಿಗಳ ಪರಿಷ್ಕೃತ ಅಂದಾಜಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

2. ಮೇಲೆ ಓದಲಾದ ಕ್ರ. ಸಂ. (2)ರಿಂದ (6)ರ ಸರ್ಕಾರಿ ಆದೇಶಗಳಲ್ಲಿ ಕಾಮಗಾರಿಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.6.30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

3. ಮೇಲೆ ಓದಲಾದ ಕ್ರ. ಸಂ. (7) ರಲ್ಲಿ ಮುಖ್ಯ ಇಂಜಿನಿಯರ್ (ದಕ್ಷಿಣ), ಸಂಪರ್ಕ ಮತ್ತು ಕಟ್ಟಡ, ಬೆಂಗಳೂರು ಇವರು ತಮ್ಮ ಪತ್ರದಲ್ಲಿ ಕಾಮಗಾರಿಯು ಪ್ರಗತಿಯಲ್ಲಿದ್ದು ಕೆಲವೊಂದು ಉಪಕರಣಗಳ ಬೆಲೆಯಲ್ಲಿ ಹಾಗೂ ವಿನ್ಯಾಸದಲ್ಲಿ ಬದಲಾವಣೆಯಾಗಿರುವ ಹಿನ್ನೆಲೆಯಲ್ಲಿ ವೆಚ್ಚದಲ್ಲಿ ಹೆಚ್ಚಳವಾಗಿರುವುದರಿಂದ ಕಾಮಗಾರಿಯ ಮೊತ್ತ ರೂ.12.60 ಕೋಟಿಗಳಿಂದ ರೂ.18.30 ಕೋಟಿಗಳಿಗೆ ಅಂದಾಜನ್ನು ಪರಿಷ್ಕರಿಸಲಾಗಿದೆಯೆಂದು ಹಾಗೂ ಪರಿಷ್ಕರಣೆಯಿಂದ ಹೆಚ್ಚಳವಾಗಿರುವ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

4. ಮೇಲೆ ಓದಲಾದ ಕ್ರ.ಸಂ.(7) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್ (ದಕ್ಷಿಣ), ಸಂಪರ್ಕ ಮತ್ತು ಕಟ್ಟಡ, ಬೆಂಗಳೂರು ಇವರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ವೆಚ್ಚ ಹೆಚ್ಚಳದ ಸಮಿತಿಯ ಮುಂದೆ ದಿ: 27–06–2012ರಂದು ಮಂಡಿಸಲಾಗಿತ್ತು. ಸಮಿತಿಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿದೆ.

As agreed by the Railways	Rs. 1,400.00 lakhs
Cost of additional pier	Rs. 28.50 lakhs
Construction of Compound wall	Rs.51.00 lakhs
Retaining wall as protective work to Service Bridge	Rs.27.43 lakhs
Total	**Rs.1,506.93 lakhs**
GoK share	Rs.753.47 lakhs
MoR share	Rs.753.47 lakhs

It was recommended that the remaining amount of Rs.353.07 lakhs will be borne by GoK alone. It was also decided and agreed that the bridge and approaches should be completed in all aspects by 30th September 2012 and opened for traffic.

5. ವೆಚ್ಚ ಹೆಚ್ಚಳದ ಸಮಿತಿಯು ನಿರ್ಣಯಿಸಿದಂತೆ ಪರಿಷ್ಕೃತ ಅಂದಾಜಿನಲ್ಲಿ ರಾಜ್ಯ ಸರ್ಕಾರದ ಪಾಲಿನ ಹೆಚ್ಚುವರಿ ಮೊತ್ತ ರೂ.446.53 ಲಕ್ಷಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ.

6. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 58 ರಾರಾಹೆ 2011, ಬೆಂಗಳೂರು ದಿನಾಂಕ: 20–11–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭದ್ರಾವತಿ ನಗರದ ರೈಲು ನಿಲ್ದಾಣದ ಹತ್ತಿರ ಬರುವ ಎಲ್.ಸಿ.ಸಂಖ್ಯೆ 32 ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಯ ಮೊತ್ತ ರೂ.12.60 ಕೋಟಿಗಳಿಂದ (ರೂಪಾಯಿ ಹನ್ನೆರಡು ಕೋಟಿ ಅರವತ್ತು ಲಕ್ಷಗಳು ಮಾತ್ರ) ಪರಿಷ್ಕೃತ ಅಂದಾಜು ರೂ.18.30 ಕೋಟಿಗಳ (ರೂಪಾಯಿ ಹದಿನೆಂಟು ಕೋಟಿ ಮುವತ್ತು ಲಕ್ಷಗಳು ಮಾತ್ರ) ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ:–

- ಇನ್ನು ಮುಂದೆ ಈ ಕಾಮಗಾರಿಯಲ್ಲಿ ಆಗುವ ಯಾವುದೇ ಪರಿಷ್ಕೃತ ಅಂದಾಜನ್ನು ಸರ್ಕಾರವು ಪರಿಗಣಿಸುವುದಿಲ್ಲ.
- ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು .
- ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ.
- ಪ್ರಸ್ತುತ ಬಿಡುಗಡೆ ಮಾಡುವ ಮೊತ್ತವನ್ನು ಬೇರೆ ಕಾಮಗಾರಿಗೆ ಉಪಯೋಗಿಸತಕ್ಕದ್ದಲ್ಲ.

2. ಪರಿಷ್ಕೃತ ಅಂದಾಜಿನಿಂದ ರಾಜ್ಯ ಸರ್ಕಾರದ ಹೆಚ್ಚುವರಿ ಪಾಲಿನ ಮೊತ್ತ ರೂ.446.53 ಲಕ್ಷಗಳಲ್ಲಿ ರೂ.200.00 ಲಕ್ಷಗಳನ್ನು (ರೂಪಾಯಿ ಇನ್ನೂರು ಲಕ್ಷಗಳು ಮಾತ್ರ) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಇವರಿಗೆ ಬಿಡುಗಡೆ ಮಾಡಿದೆ.

3. ಈ ವೆಚ್ಚವನ್ನು 2012–13 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211–ಕೆ–ರೈಡ್ – ಆರ್‌ಓಬಿ / ಆರ್‌ಯುಬಿ – ಬಂಡವಾಳ" ಇದರಡಿಯಲ್ಲಿ ರಸ್ತೆ ಮೇಲುಸೇತುವೆ/ ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

4. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಇವರು ಜಿಲ್ಲಾ ಖಜಾನೆ ಶಿವಮೊಗ್ಗ ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ. ಬೆಂಗಳೂರು, ಇವರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಇವರ ಖಾತೆಗೆ ಅಪ್‌ಲೋಡ್ ಮಾಡುವುದು. ಈ ಹಣವನ್ನು ಕಾಮಗಾರಿಗೆ ವೆಚ್ಚ ಮಾಡಿ ಉಪಯೋಗಿತಾ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಭೌತಿಕ ಪ್ರಗತಿಯ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: FD 895 Exp–1 2012, ದಿನಾಂಕ 10.08.2012 ಮತ್ತು ಲೋಕೋಪಯೋಗಿ ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯ ಟಿಪ್ಪಣಿ ಸಂ: ಲೋಇ 32 ಸಿಬಿಆರ್ 2012 (ಭಾಗ), ದಿ: 10–09–2012ರ ಟಿಪ್ಪಣಿಯಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.424

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಮೈಸೂರು – ಚಾಮರಾಜನಗರ ಗೇಜ್ ಪರಿವರ್ತನೆ – ಮೈಸೂರಿನ ಮಾಂಡೋವಿ ಮೋಟರ್ಸ್ ಹತ್ತಿರ ಬರುವ ಎಲ್.ಸಿ. ಸಂ: 758 ರೈಲ್ವೆ ಕಿ.ಮೀ. 0/ 378ರಲ್ಲಿ ರಸ್ತೆ ಕೆಳಸೇತುವೆ ನಿರ್ಮಾಣದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ. ಮೂಅಇ 65 ರಾರಾಹೆ 2005, ದಿನಾಂಕ: 17–12–2008.
2. ಸರ್ಕಾರಿ ಆದೇಶ ಸಂ. ನಅಇ 135 ಎಸಿಎಂ 2009, ದಿನಾಂಕ: 23–10–2009.
3. ಸರ್ಕಾರಿ ಆದೇಶ ಸಂ. ಮೂಅಇ 40 ರಾರಾಹೆ 2009, ದಿನಾಂಕ: 23–05–2011.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಇವರ ಪತ್ರ ಸಂ: ಸಂಕದ: ಸೇಮೈ: ಮೈಚಾ: ಆರ್.ಯು.ಬಿ.: 758: 2012–13, ದಿನಾಂಕ 23–05–2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರ ಆದೇಶದಲ್ಲಿ ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡೋವಿ ಮೋಟರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758ಕ್ಕೆ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯನ್ನು ರೂ.12,03,94,955/– ಗಳ ಸಂಕ್ಷಿಪ್ತ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.3,34,80,979.00ಗಳನ್ನು ಬಿಡುಗಡೆ ಮಾಡಲಾಗಿತ್ತು.

2. ಮೇಲೆ ಓದಲಾದ ಕ್ರ.ಸಂ. (2)ರ ಆದೇಶದಲ್ಲಿ ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡೋವಿ ಮೋಟರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758 ರಲ್ಲಿ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಮಾರ್ಗಗಳನ್ನು ಸ್ಥಳಾಂತರಿಸುವ ಕಾಮಗಾರಿಯ ಟೆಂಡರ್ ಪ್ರಸ್ತಾವನೆಗೆ ನಗರಾಭಿವೃದ್ಧಿ ಇಲಾಖೆಯು ಅನುಮೋದನೆ ನೀಡಿರುತ್ತದೆ.

3. ಮೇಲೆ ಓದಲಾದ ಕ್ರ.ಸಂ. (3)ರ ಆದೇಶದಲ್ಲಿ ಮೈಸೂರು – ಚಾಮರಾಜನಗರ ರೈಲು ಮಾರ್ಗದ ಮಾಂಡೋವಿ ಮೋಟರ್ಸ್ ಬಳಿಯಿರುವ ಎಲ್.ಸಿ ಸಂಖ್ಯೆ 758 ರಲ್ಲಿ ರಸ್ತೆ ಕೆಳಸೇತುವೆ ಅಗಲೀಕರಣದ ಕಾಮಗಾರಿಯ ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆ ಮಾರ್ಗಗಳ ಸ್ಥಳಾಂತರ ಕಾಮಗಾರಿಗೆ ಹೆಚ್ಚುವರಿಯಾಗಿ ತಗಲಿರುವ ರೂ. 120.67 ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು, ಇವರಿಗೆ ಬಿಡುಗಡೆ ಮಾಡಲಾಗಿತ್ತು.

4. ಮೇಲೆ ಓದಲಾದ ಕ್ರ.ಸಂ. (4)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು, ಇವರು ಮೈಸೂರು – ಕೆ.ಆರ್. ಸಾಗರ ರಸ್ತೆಯಲ್ಲಿರುವ ರೈಲು ಮಾರ್ಗದಲ್ಲಿ ಬರುವ ಎಲ್/ಸಿ.ಸಂಖ್ಯೆ:758ರ ಬದಲಾಗಿ ರಸ್ತೆ ಕೆಳ ಸೇತುವೆ (ಮೊಂಡೊವಿ ಮೋಟರ್ಸ್ ಹತ್ತಿರ) ಪುನರ್ ನಿರ್ಮಾಣ ಮಾಡುವ ಸಂಬಂಧ, ಕಾಮಗಾರಿಯ ಅಂದಾಜು ಮೊತ್ತ ರೂ.12.03 ಕೋಟಿಗಳಲ್ಲಿ ರೂ.7.07 ಕೋಟಿಯ ಮೊತ್ತವನ್ನು ಸ.0.00 ರಿಂದ 0.54ಕಿ.ಮೀ. ವರೆಗೆ ಪ್ರಿನ್ಸ್ಸ್ ರಸ್ತೆಯನ್ನು ತಗ್ಗಿಸುವ ಹಾಗೂ ನಾಲ್ಕು ಪಥ ರಸ್ತೆಯಾಗಿ ನಿರ್ಮಿಸುವ ಕಾಮಗಾರಿಗೆ ಮೀಸಲಿರಿಸಲಾಗಿದ್ದು ಈ ಮೊತ್ತದಲ್ಲಿ ರಸ್ತೆ ನಿರ್ಮಾಣ ಮತ್ತು ವಿದ್ಯುತ್ ಕಾಮಗಾರಿಗೆ ರೂ.5.447 ಕೋಟಿಗಳಿಂದ ರಸ್ತೆ ನಿರ್ಮಾಣವನ್ನು ಲೋಕೋಪಯೋಗಿ ಇಲಾಖೆ ಕೈಗೆತ್ತಿಕೊಂಡಿದ್ದು, ರೂ.4.74 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು, ಟೆಂಡರ್‌ನಲ್ಲಿ ಗುತ್ತಿಗೆದಾರರಿಗೆ ರೂ.6.47 ಕೋಟಿಗೆ ಟೆಂಡರನ್ನು ವಹಿಸಿಕೊಡಲಾಗಿರುತ್ತದೆ. ಈಗ ಕಾಮಗಾರಿಯು ಪೂರ್ಣಗೊಂಡಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ಆದ ವೆಚ್ಚ ರೂ.7.75 ಕೋಟಿಗಳಾಗಿದೆಯೆಂದು ಇದರಿಂದಾಗಿ ಮೂಲ ಅಂದಾಜಿನ ಮೊತ್ತ ರೂ.5.447 ಕೋಟಿಗಳಿಂದ ಪರಿಷ್ಕೃತ ಮೊತ್ತವು ರೂ.7.75 ಕೋಟಿಗೆ ಹೆಚ್ಚಾಗಿರುತ್ತದೆ. ಅಂದರೆ ರೂ.2.319 ಕೋಟಿ ಹೆಚ್ಚಾಗಿದೆ. ಇದರಲ್ಲಿ ಟೆಂಡರ್ ಪ್ರಿಮಿಯಂನಿಂದಾಗಿ ರೂ.1.03 ಕೋಟಿ ಹಾಗೂ ಉಳಿದ ರೂ.1.27 ಕೋಟಿಗಳು ಈ ಕೆಳಗಿನ ಕಾರಣದಿಂದ ಹೆಚ್ಚುವರಿಯಾಗಿರುತ್ತದೆಂದು ತಿಳಿಸುತ್ತಾ, ಹೆಚ್ಚುವರಿಯ ಮೊತ್ತ ರೂ.230.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

- i. ದಾಸಪ್ಪ ವೃತ್ತದಿಂದ ಅಂಡರ್ ಬ್ರಿಡ್ಜ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ಅಗಲೀಕರಣಗೊಳಿಸಲು ಸಹಾಯಕ ಪೋಲೀಸ್ ಕಮೀಷನರ್ (ಸಂಚಾರಿ ವಿಭಾಗ), ಮೈಸೂರು, ಇವರ ಕೋರಿಕೆಯನ್ವಯ;
- ii. ಈ ರಸ್ತೆಯ ಸರಪಳಿ 0.00 ದಿಂದ 113 ಮೀ.ವರೆಗೆ ಮೆದು ಮಣ್ಣು ಇದ್ದು, 30 ಸೆಂಮೀ ಆಳದವರೆಗೆ ಮಣ್ಣನ್ನು ತೆಗೆದು ಉತ್ತಮ ಗುಣಮಟ್ಟದ ಗ್ರಾವೆಲ್‌ನ್ನು ಅಳವಡಿಸಿ ತದನಂತರ GSB & WMM ಮಾಡಿದ್ದು, ಈ ಗ್ರಾವೆಲ್‌ನ್ನು ಅಳವಡಿಸಿರುವುದು;
- iii. ದಿನಾಂಕ: 03.03.2011 ರಂದು ಮೈಸೂರು ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆಯಲ್ಲಿ ತಿಳಿಸಿದಂತೆ ಈ ರಸ್ತೆಯ ಮೊದಲಿನ ಮಟ್ಟಕ್ಕಿಂತ 2.5 ಮೀ ರಿಂದ 3.5 ಮೀ.ರವರೆಗೆ ತಗ್ಗಿಸಿರುವುದರಿಂದ, ಈ ರಸ್ತೆಯಿಂದ ಮೆಡಿಕಲ್ ಕಾಲೇಜು ಮಹಿಳಾ ಹಾಸ್ಟೆಲ್, ಕೆ.ಆರ್.ಆಸ್ಪತ್ರೆಯ ಡಾಕ್ಟರ್‌ಗಳ ವಸತಿ ನಿಲಯಗಳಿಗೆ ಸಂಪರ್ಕ ಕಲ್ಪಿಸಲು ಹೊಸದಾಗಿ ಸಂಪರ್ಕ ರಸ್ತೆ ನಿರ್ಮಿಸಿರುವುದು.
- iv. ಎಲ್ಐಸಿ ಕಛೇರಿ ಮತ್ತು ವಿದ್ಯಾರ್ಥಿಗಳ ಹಾಸ್ಟಲ್‌ಗಳಿಗೆ ರಸ್ತೆಯಿಂದ ಕಾಂಕ್ರಿಟ್ ಮೆಟ್ಟಿಲುಗಳನ್ನು ಮಾಡಿರುವುದು.
- v. ಸಿಎಫ್‌ಟಿಆರ್ಐ ಸಂಸ್ಥೆಗೆ ಹಾಲಿ ಇರುವ ರಸ್ತೆಯನ್ನು ತಗ್ಗಿಸಿ ಹೊಸದಾಗಿ ಇಳಿಜಾರು ರಸ್ತೆಯನ್ನು ನಿರ್ಮಿಸಿರುವುದು.

5. ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ/ ಲೋಕೋಪಯೋಗಿ ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯದೆ ಕಾಮಗಾರಿಯನ್ನು ಕೈಗೆತ್ತಿಕೊಂಡು ಹೆಚ್ಚುವರಿ ಮೊತ್ತಕ್ಕೆ ಕಾರಣರಾಗಿರುವವರನ್ನು ಗುರುತಿಸಿ ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿತ್ತು. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು, ಇವರಿಂದ ಕೂಲಂಕಷವಾದ ವರದಿಯನ್ನು ಪಡೆದು ಕಾಮಗಾರಿಯ ನಿರ್ವಹಣೆಯಲ್ಲಿ ಕರ್ತವ್ಯ ಲೋಪ ಎಸೆಗಿರುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮವನ್ನು ಲೋಕೋಪಯೋಗಿ ಇಲಾಖೆಯಿಂದ ಜರುಗಿಸಲಾಗುವುದೆಂದು ದಿನಾಂಕ 05.09.2012 ರ ಟಿಪ್ಪಣಿಯಲ್ಲಿ ಲೋಕೋಪಯೋಗಿ ಇಲಾಖೆಯು ಸ್ಪಷ್ಟಪಡಿಸಿರುತ್ತದೆ.

6. ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿದ್ದು ದಿ: 30–08–2011ರಂದು ವಾಹನ ಸಂಚಾರಕ್ಕೆ ಮುಕ್ತಗೊಳಿಸಿರುವುದರಿಂದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 58 ರಾರಾಹೆ 2012,ಬೆಂಗಳೂರು ದಿನಾಂಕ 18.01.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೈಸೂರು–ಚಾಮರಾಜನಗರ ರೈಲು ಮಾರ್ಗದ ಮಾಂಡೋವಿ ಮೋಟರ್ಸ್ ಬಳಿಯಿರುವ ಎಲ್.ಸಿ. ಸಂಖ್ಯೆ 758 ರ ರಸ್ತೆ ಕೆಳಸೇತುವೆ ಅಗಲೀಕರಣದ ಕೂಡು ರಸ್ತೆಯ ನಿರ್ಮಾಣದ ಅಂದಾಜು ಮೊತ್ತ ರೂ.7.23 ಕೋಟಿಗಳಿಂದ ಅಂದಾಜು ಮೊತ್ತ ರೂ.10.58 (ರೂಪಾಯಿ ಹತ್ತು ಕೋಟಿ ಐವತ್ತೆಂಟು ಲಕ್ಷಗಳು ಮಾತ್ರ) ಕೋಟಿಗಳ ಪರಿಷ್ಕೃತ ಅಂದಾಜಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

2. ರೂ.230.00 ಲಕ್ಷಗಳನ್ನು (ರೂಪಾಯಿ ಇನ್ನೂರ ಮುವತ್ತು ಲಕ್ಷಗಳು ಮಾತ್ರ) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಇವರಿಗೆ ಬಿಡುಗಡೆ ಮಾಡಿದೆ.

3. ಈ ವೆಚ್ಚವನ್ನು 2012–13 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211–ಕೆ–ರೈಡ್ – ಆರ್‌ಓಬಿ / ಆರ್‌ಯುಬಿ – ಬಂಡವಾಳ" ಇದರಡಿಯಲ್ಲಿ ಒದಗಿಸಿರುವ ರೂ.40.00 ಕೋಟಿಗಳ ಅನುದಾನದಿಂದ ಭರಿಸತಕ್ಕದ್ದು.

4. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ಜಿಲ್ಲಾ ಖಜಾನೆ ಮೈಸೂರು ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ. ಬೆಂಗಳೂರು, ಇವರು

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರ ಖಾತೆಗೆ ಅಪ್‌ಲೋಡ್ ಮಾಡುವುದು. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ಉಪಯೋಗಿತಾ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: FD 1107 Exp–1/ 12, ದಿನಾಂಕ: 03–11–2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.417

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಬೀದರ್ ನಗರದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ. 43A ರ ಬದಲಿಗೆ (ಅಶೋಕ ಹೋಟೆಲ್ ಹತ್ತಿರ) ರಸ್ತೆ ಕೆಳ ಸೇತುವೆಯ ಕೂಡು ರಸ್ತೆಯನ್ನು ನಿರ್ಮಾಣ ಮಾಡಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ.ಮೂಅಇ 51 ರಾರಾಹೆ 2011 ದಿನಾಂಕ 27.04.2012.

2. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರ ಪತ್ರ ಸಂಖ್ಯೆ. ಸಿಇಎನ್/ಲೆಪಶಾ–2/2011–12 ದಿನಾಂಕ 31.01.2013.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರದ ಆದೇಶದಲ್ಲಿ ಬೀದರ್ ನಗರದಲ್ಲಿನ ರೈಲು ಮಾರ್ಗದ ಮಧ್ಯದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 43 ಎ (ಅಶೋಕ ಹೋಟೆಲ್ ಹತ್ತಿರ) ರ ಬದಲಿಗೆ ರಸ್ತೆ ಕೆಳಸೇತುವೆಯ ಕೂಡು ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲು ರೂ.580.00 (ರೂಪಾಯಿ ಐನೂರ ಎಂಬತ್ತು ಲಕ್ಷಗಳು ಮಾತ್ರ) ಲಕ್ಷಗಳ ಅಂದಾಜು ವೆಚ್ಚಕ್ಕೆ ಭೂಸ್ವಾಧೀನ ವೆಚ್ಚವನ್ನು ಹೊರತುಪಡಿಸಿ ರಾಜ್ಯ ಹಾಗೂ ರೈಲ್ವೆ ಮಂತ್ರಾಲಯ ಶೇಕಡ 50:50 ರಷ್ಟು ವೆಚ್ಚ ಭರಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಮೇಲೆ ಓದಲಾದ ಕ್ರ.ಸಂ.(2) ರ ಪತ್ರದಲ್ಲಿ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಧಾರವಾಡ ಇವರು ತಮ್ಮ ಪ್ರಸ್ತಾವನೆಯಲ್ಲಿ ಬೀದರ್ ನಗರದಲ್ಲಿ ರೈಲ್ವೆ ಎಲ್.ಸಿ.ಸಂಖ್ಯೆ. 43 ಎ (ಅಶೋಕ ಹೋಟೆಲ್ ಹತ್ತಿರ) ರ ಬದಲಿಗೆ ರಸ್ತೆ ಕೆಳ ಸೇತುವೆ ಕೂಡು ರಸ್ತೆ ನಿರ್ಮಾಣ ಹಾಗೂ ಯುಟಿಲಿಟಿ ಸ್ಥಳಾಂತರ ಕಾಮಗಾರಿಗಳಿಗೆ ರಾಜ್ಯ ಸರ್ಕಾರದ ಪಾಲು ರೂ.391.185 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

3. ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ. 43 ಎ ರ ಬದಲಿಗೆ (ಅಶೋಕ ಹೋಟೆಲ್ ಹತ್ತಿರ) ರಸ್ತೆ ಕೆಳಸೇತುವೆಯ ಕೂಡು ರಸ್ತೆಯ ನಿರ್ಮಾಣಕ್ಕೆ ಭೂಸ್ವಾಧೀನ ವೆಚ್ಚ ಹಾಗೂ ಯುಟಿಲಿಟಿ ಸ್ಥಳಾಂತರಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯುಟಿಲಿಟಿಗಳನ್ನು ಸ್ಥಳಾಂತರಗೊಳಿಸಿದ ನಂತರ ಉಳಿದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

Sl. No.	Name of the work	Amount	GoK share	MoR share
1.	Land acquisition	2,02,36,800	2,02,36,800	-
2.	GESCOM Poles	1,20,000	60,000	60,000
3.	Water supply lines	30,00,000	15,00,000	15,00,000
4.	Telecom Optical Cable	5,00,000	2,50,000	2,50,000
	Total	**2,38,56,800**	**2,20,46,800**	**18,10,000**

4. ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಮೂಅಇ 15 ರಾರಾಹೆ 2013, ಬೆಂಗಳೂರು, ದಿನಾಂಕ 13.02.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೀದರ್ ನಗರದಲ್ಲಿನ ರೈಲು ಮಾರ್ಗದ ಮಧ್ಯದಲ್ಲಿ ಬರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ. 43A ರಲ್ಲಿ (ಅಶೋಕ ಹೋಟೆಲ್ ಹತ್ತಿರ) ರಸ್ತೆ ಕೆಳಸೇತುವೆಯ ಕೂಡು ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಭೂಸ್ವಾಧೀನ ವೆಚ್ಚ ಮತ್ತು ಯುಟಿಲಿಟಿ ಸ್ಥಳಾಂತರಕ್ಕಾಗಿ ರೂ.2,20,46,800.00 (ಎರಡು ಕೋಟಿ ಇಪ್ಪತ್ತು ಲಕ್ಷ ನಲವತ್ತಾರು ಸಾವಿರದ ಎಂಟು ನೂರು ರೂಪಾಯಿಗಳು ಮಾತ್ರ) ಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ, ಬೀದರ್ ಇವರಿಗೆ ಬಿಡುಗಡೆ ಮಾಡಲಾಗಿದೆ.

2. ಈ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04(ಯೋಜನೆ)–211–ಕೆ–ರೈಡ್–ಆರ್‌ಓಬಿ/ಆರ್‌ಯುಬಿ–ಬಂಡವಾಳ" ಇದರಡಿಯಲ್ಲಿ ರಸ್ತೆ ಮೇಲು ಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ, ಬೀದರ್ ಇವರು ಜಿಲ್ಲಾ ಖಜಾನೆ, ಬೀದರ್ ಇಲ್ಲಿ ಡ್ರಾ ಮಾಡಲು ಅಧೀಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ, ಬೆಂಗಳೂರು ಇವರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ ಇವರ ಖಾತೆಗೆ ಅಪ್‌ಲೋಡ್ ಮಾಡುವುದು. ಈ ಹಣವನ್ನು ಕಾಮಗಾರಿಗೆ ವೆಚ್ಚ ಮಾಡಿ ಉಪಯೋಗಿತಾ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಭೌತಿಕ ಪ್ರಗತಿಯ ವಿವರಗಳನ್ನು ಫೋಟೋದೊಂದಿಗೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೀದರ್ ವಿಭಾಗ, ಬೀದರ್ ಇವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ಈ ಆದೇಶವನ್ನು ಸಂಖ್ಯೆ. ಆಇ 4 ಟಿಎಫ್‌ಪಿ 2012 ದಿನಾಂಕ 27.04.2012 ಮತ್ತು ಸಂಖ್ಯೆ. ಆಇ 8 ಟಿಎಫ್‌ಪಿ 2012 ದಿನಾಂಕ 04.10.2012ರಲ್ಲಿ ಸರ್ಕಾರದ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.418

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ತುಮಕೂರು ನಗರದ ಶೆಟ್ಟಿಹಳ್ಳಿ ರೈಲು ನಿಲ್ದಾಣದ ಹತ್ತಿರ ಬರುವ ಎಲ್.ಸಿ ಸಂಖ್ಯೆ 40 ರಲ್ಲಿ ಕನಿಷ್ಠ ಮಟ್ಟದ ರಸ್ತೆ ಕೆಳ ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣದ ಕಾಮಗಾರಿಗೆ ರಾಜ್ಯ ಸರ್ಕಾರದ ಶೇಕಡ 50 ರಷ್ಟು ಹಣವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ದಿನಾಂಕ 6.1.2009 ರಂದು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ರಸ್ತೆ ಕೆಳ/ಮೇಲು ಸೇತುವೆಗಳ ಚಾಲನಾ ಸಮಿತಿ ಸಭೆ.
2. ಸರ್ಕಾರದ ಅ.ಸ.ಪ. ಸಂಖ್ಯೆ ಮೂಅಇ 34 ರಾರಾಹೆ 09, ದಿನಾಂಕ 31.12.2010.
3. ಪತ್ರ ಸಂಖ್ಯೆ ಡಬ್ಲೂ.352/ಸಿಎನ್/ಬಿಎನ್ ಸಿ/ಟಿಕೆ ಎಲ್.ಸಿ 40 ಆರ್.ಯುಬಿ. ದಿನಾಂಕ 7.1.2011, ಮುಖ್ಯ ಇಂಜಿನಿಯರ್, ನೈರುತ್ಯ ರೈಲ್ವೆ, ಬೆಂಗಳೂರು, ಇವರಿಂದ.
4. ಸರ್ಕಾರದ ಪತ್ರ ಸಂಖ್ಯೆ: ಮೂಅಇ 23 ರಾರಾಹೆ 2011ರ ದಿನಾಂಕ 1.6.2011.
5. ಪತ್ರ ಸಂ:ತುನಪ್ರಾ/ಸಕಾಅ/ಅಂಡರ್‌ಪಾಸ್:480/11–12, ದಿನಾಂಕ 10.6.2011, ಆಯುಕ್ತರು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.
6. ಪತ್ರ ಸಂ: ಟಿಯುಡಿಎ/ ಸಕಾಅ/ ಅಂಡರ್ ಪಾಸ್/ 2010–11/ 1700, ದಿನಾಂಕ: 18–12–2010, ಆಯುಕ್ತರು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.
7. ದಿನಾಂಕ 09.01.2012 ರ ಸಭೆಯ ನಡೆವಳಿ.
8. ಪತ್ರ ಸಂಖ್ಯೆ.ನಅಇ 360 ಬೆಂರೂಪ್ರಾ 2010 ದಿನಾಂಕ 21.03.2012.
9. ಸರ್ಕಾರಿ ಆದೇಶ ಸಂಖ್ಯೆ. ನಅಇ 360 ಬೆಂರೂಪ್ರಾ 2010 ದಿನಾಂಕ 16.07.2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ (1) ರ ಚಾಲನಾ ಸಮಿತಿ ಸಭೆಯಲ್ಲಿ ತುಮಕೂರು ನಗರದ ಶೆಟ್ಟಿಹಳ್ಳಿ ರೈಲು ನಿಲ್ದಾಣದ ಹತ್ತಿರ ಬರುವ ಎಲ್.ಸಿ ಸಂಖ್ಯೆ 40 ರಲ್ಲಿ ಕನಿಷ್ಠ ಮಟ್ಟದ ರಸ್ತೆ ಕೆಳ ಸೇತುವೆಯನ್ನು ನಿರ್ಮಿಸಲು ನಿರ್ಣಯಿಸಲಾಗಿತ್ತು.

2. ಮೇಲೆ ಓದಲಾದ ಕ್ರ.ಸಂ (2)ರ ಪತ್ರದಲ್ಲಿ ಚಾಲನಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾಮಗಾರಿಯನ್ನು ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳುವಂತೆ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ಬೆಂಗಳೂರು ಇವರಿಗೆ ತಿಳಿಸಲಾಗಿತ್ತು.

3. ಮೇಲೆ ಓದಲಾದ ಕ್ರ.ಸಂ (3) ರ ಪತ್ರದಲ್ಲಿ ಈ ಕಾಮಗಾರಿಯನ್ನು ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಬಹುದೆಂದು ಮುಖ್ಯ ಇಂಜಿನಿಯರ್, ನೈರುತ್ಯ ರೈಲ್ವೆ, ಬೆಂಗಳೂರು, ಇವರು ತಿಳಿಸಿರುತ್ತಾರೆ.

4. ಮೇಲೆ ಓದಲಾದ ಕ್ರ.ಸಂ (4) ರ ಸರ್ಕಾರಿ ಪತ್ರದಲ್ಲಿ ಎಲ್ ಸಿ ಸಂಖ್ಯೆ. 40ರ ಬದಲಿಗೆ ರಸ್ತೆ ಕೆಳಸೇತುವೆಯ ನಿರ್ಮಾಣಕ್ಕೆ ತಗಲುವ ಶೇ.50 ರಷ್ಟು ವೆಚ್ಚವನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಭರಿಸಲು ಸಾಧ್ಯವಿದೆಯೇ ಎಂಬ ಮಾಹಿತಿಯನ್ನು ಕಳುಹಿಸುವಂತೆ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನು ಕೋರಲಾಗಿತ್ತು.

5. ಮೇಲೆ ಓದಲಾದ ಕ್ರ.ಸಂ (5) ರ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು, ಇವರು ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆಗೆ ತಗಲುವ ವೆಚ್ಚದಲ್ಲಿ ಶೇ.50 ರಷ್ಟು ಮೊತ್ತವನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಭರಿಸಲು ದಿನಾಂಕ 03–06–2011ರಂದು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿತ್ತು, ನಗರಾಭಿವೃದ್ಧಿ ಪ್ರಾಧಿಕಾರವು ಅಂಡರ್ ಪಾಸ್ ಮತ್ತು ಅದಕ್ಕೆ ಕೂಡು ರಸ್ತೆ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಶೇ. 50ರಷ್ಟನ್ನು ಭರಿಸಲು ತಿರ್ಮಾನಿಸಿದೆ ಎಂದು ತಿಳಿಸಿದ್ದಾರೆ.

6. ಮೇಲೆ ಓದಲಾದ ಕ್ರ.ಸಂ (6) ರ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು, ಇವರು ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಬರೆದಿರುವ ಪತ್ರದಲ್ಲಿ ಶೆಟ್ಟಿಹಳ್ಳಿ ರೈಲ್ವೆ ಗೇಟ್ ಎಲ್‌ಸಿ 40 ರ ಸ್ಥಳದಲ್ಲಿ ಉದ್ದೇಶಿತ ಅಂಡರ್ ಪಾಸ್ ಅತ್ಯಗತ್ಯವಾಗಿದ್ದು ರೈಲ್ವೆಯಿಂದಲೇ ಸಮೀಕ್ಷೆ ಮಾಡಿರುವಂತೆ, 1,36,000 ಕ್ಕೂ ಹೆಚ್ಚು ವಾಹನಗಳ ಸಂಚಾರವಿರುತ್ತದೆ. ಇಲ್ಲಿ ಕಿರಿದಾದ ರೈಲ್ವೆ ಗೇಟ್ ಇದ್ದು, ವಾಹನಗಳು ಸುಲಭವಾಗಿ ಸಂಚರಿಸುವುದು ದುಸ್ಥರವಾಗಿದೆ. ಈ ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ರೈಲುಗಳು ಸಂಚರಿಸುತ್ತಿದ್ದು, ಪ್ರತಿ ಬಾರಿ ರೈಲ್ವೆ ಗೇಟ್ ಮುಚ್ಚಿದಾಗ ಕನಿಷ್ಠ 10–15 ನಿಮಿಷಗಳಿಂದ ಒಂದು ಗಂಟೆಯವರೆಗೆ ಕಾಲ ವ್ಯಯವಾಗುತ್ತದೆ. ಈ ಭಾಗದಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡಲು ಸಾರ್ವಜನಿಕರು ತೀವ್ರವಾಗಿ ಒತ್ತಾಯಿಸುತ್ತಿದ್ದಾರೆಂದು ತುಮಕೂರಿನ ಎಲ್.ಸಿ. ಸಂ.41 ಉಪ್ಪಾರಹಳ್ಳಿ ಜಾಗದಲ್ಲಿ ರೈಲ್ವೆ ಮೇಲು ಸೇತುವೆ ನಿರ್ಮಾಣವಾಗುತ್ತಿದ್ದು, ರೈಲ್ವೆಯು ತೆಗೆದುಕೊಂಡಿರುವ ನಿರ್ಧಾರದಂತೆ ಹಾಗೂ ಮೂಲ ಯೋಜನೆಯಿಂದ ಎಲ್‌ಸಿ – 40ನ್ನು ಮುಚ್ಚಬೇಕಿರುತ್ತದೆ. ಇದರಿಂದ ಸಾರ್ವಜನಿಕರು ಮತ್ತು ವಾಹನಗಳ ಸಂಚಾರ ಹೆಚ್ಚಾಗುವುದಲ್ಲದೇ ಜನರ ಅಮೂಲ್ಯವಾದ ಸಮಯ ಅಪವ್ಯಯವಾಗುತ್ತದೆಂದು ಈ ಅಂಡರ್ ಪಾಸ್‌ಗೆ ಅಪ್ರೋಚ್ ರಸ್ತೆ ನಿರ್ಮಾಣ ಮಾಡುವ ಸಂಬಂಧ ಯೋಜನಾ ವರದಿಯನ್ನು ಸಿದ್ದಪಡಿಸಲು ಖಾಸಗಿ ಕಂಪನಿಯವರಿಗೆ ವಹಿಸಿದ್ದು, ಖಾಸಗಿ ಕಂಪನಿಯವರು ತಡೆಗೋಡೆ ಮತ್ತು ಅಪ್ರೋಚ್ ರಸ್ತೆಗಳ ನಿರ್ಮಾದಣಕ್ಕೆ ರೂ.665.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಇವುಗಳಲ್ಲದೇ ಅಂಡರ್ ಪಾಸ್ ನಿರ್ಮಾಣಕ್ಕೆ ಕೆಲವು ಖಾಸಗಿ ಸ್ವತ್ತುಗಳ ಭೂಸ್ವಾಧೀನಕ್ಕಾಗಿ ಸುಮಾರು ರೂ.150.00 ಲಕ್ಷಗಳನ್ನು ಅಂದಾಜಿಸಲಾಗಿರುತ್ತದೆ. ಒಟ್ಟಾರೆ ಈ ಯೋಜನೆಯ ಅಂದಾಜು ವೆಚ್ಚ ರೂ.815.00 ಲಕ್ಷಗಳಾಗಿರುತ್ತದೆಂದು ತಿಳಿಸುತ್ತಾ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.500.00 ಲಕ್ಷಗಳ ಅನುದಾನವನ್ನು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಿಸಲು ಪ್ರಸ್ತಾಪಿಸಿರುತ್ತಾರೆ.

7. ಮೇಲೆ ಓದಲಾದ ಕ್ರ.ಸಂ.(7) ರ ಸರ್ಕಾರದ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ:–

- ಕಾಮಗಾರಿಗೆ ಸಂಬಂಧಿಸಿದ DPR (Detail Project Report) ನ್ನು ತುಮಕೂರು ನಗರಾಭಿವೃದ್ಧಿ ಆಯುಕ್ತರು ಪರಿಶೀಲಿಸಿ, ದೃಢೀಕರಿಸುವುದು;
- ಪ್ರಸ್ತಾವನೆಗೆ ನಗರಾಭಿವೃದ್ಧಿ ಇಲಾಖೆಯ ಅನುಮೋದನೆ / ಸಹಮತಿ ಪಡೆಯುವುದು;
- ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಂದಿರುವ ಪ್ರಸ್ತಾವನೆಯ ಅಂದಾಜು ವೆಚ್ಚ ರೂ.8.16 ಕೋಟಿ ಹಣದ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಸಹಮತಿ ಪಡೆಯುವುದು.
- ಕಾಮಗಾರಿಯು ವೆಚ್ಚ ಹಂಚಿಕೆ ಆಧಾರದ ಮೇಲೆ (50:50) ತೆಗೆದುಕೊಳ್ಳುವುದರಿಂದ DPR (Detail Project Report)ಗೆ ತಾಂತ್ರಿಕ ಅನುಮತಿಯನ್ನು ಸಹ ಪಡೆಯುವುದು.
- ಯಾವುದೇ ಕಾಮಗಾರಿಯ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕಾರ್ಯವಿಧಾನದಲ್ಲಿ ಲೋಪ (procedural lapse) ವಾಗದಂತೆ ಗಮನ ಹರಿಸುವುದು;
- ಈ ಇಲಾಖೆಯ ಪಾಲಿನ ಮೊತ್ತವನ್ನು ಕೆ–ರೈಡ್ ಮೂಲಕ ಬಿಡುಗಡೆ ಮಾಡುವುದು;

8. ಮೇಲೆ ಓದಲಾದ ಕ್ರ.ಸಂ.(8) ರ ನಗರಾಭಿವೃದ್ಧಿ ಇಲಾಖೆಯ ಪತ್ರದಲ್ಲಿ ತುಮಕೂರು ನಗರದ ಶೆಟ್ಟಿಹಳ್ಳಿ ರೈಲ್ವೆ ಗೇಟ್ ಬಳಿ ಎಲ್.ಸಿ ಸಂ.40 ರ ಜಾಗದಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡುವ ಕಾಮಗಾರಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 15 (1) (ಬಿ) ರನ್ವಯ ಸರ್ಕಾರದ ಅನುಮತಿಯನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದೆ.

9. ಮೇಲೆ ಓದಲಾದ ಕ್ರ.ಸಂ.(9) ರ ನಗರಾಭಿವೃದ್ಧಿ ಇಲಾಖೆಯ ಆದೇಶದಲ್ಲಿ ತುಮಕೂರು ನಗರದ ಶೆಟ್ಟಿಹಳ್ಳಿ ರೈಲ್ವೆ ಗೇಟ್ ಬಳಿ ಎಲ್.ಸಿ ಸಂ.40 ರ ಜಾಗದಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡುವ ಕಾಮಗಾರಿಗೆ ರೂ.816.00 ಲಕ್ಷಗಳ ಅಂದಾಜಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 18 (3) ರನ್ವಯ ಸರ್ಕಾರದ ಆಡಳಿತಾತ್ಮಕ ಅನುಮತಿಯನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದೆ.

10. ತುಮಕೂರು ನಗರದ ಶೆಟ್ಟಿಹಳ್ಳಿ ರೈಲ್ವೆ ಗೇಟ್ ಬಳಿ ಎಲ್.ಸಿ ಸಂ.40 ರ ಜಾಗದಲ್ಲಿ ಅಂಡರ್ ಪಾಸ್ ನಿರ್ಮಾಣ ಮಾಡುವ ಕಾಮಗಾರಿಗೆ ಯೋಜನೆಯ ಅಂದಾಜು ವೆಚ್ಚ ರೂ.816.00 ಲಕ್ಷಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇಕಡ 50 ರಷ್ಟು ಮೊತ್ತ ರೂ.408.00 ಲಕ್ಷಗಳನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. ಮೂಅಇ 23 ರಾರಾಹೆ 2011, ಬೆಂಗಳೂರು, ದಿನಾಂಕ 27–07–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ನಗರದ ಶೆಟ್ಟಿಹಳ್ಳಿ ರೈಲು ನಿಲ್ದಾಣದ ಹತ್ತಿರ ಬರುವ ಎಲ್.ಸಿ ಸಂಖ್ಯೆ 40 ರಲ್ಲಿ ಕನಿಷ್ಠ ಮಟ್ಟದ ರಸ್ತೆ ಕೆಳ ಸೇತುವೆ ಮತ್ತು ಅಪ್ರೋಚ್ ರಸ್ತೆಯನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೆತ್ತಿಕೊಳ್ಳಲು ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ.816.00 ಲಕ್ಷಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ.50 ರಷ್ಟು ಮೊತ್ತ ರೂ.408.00 ಲಕ್ಷಗಳನ್ನು (ನಾಲ್ಕುನೂರಾ ಎಂಟು ಲಕ್ಷ ರೂಪಾಯಿಗಳು ಮಾತ್ರ) 2012–2013 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211–ಕೆ–ರೈಡ್ ಬಂಡವಾಳ" ಇದರಡಿಯಲ್ಲಿ ರಸ್ತೆ ಮೇಲುಸೇತುವೆ/ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಿಸಿರುವ ರೂ.40.00 ಕೋಟಿಗಳ ಮೊತ್ತದಿಂದ ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಬಿಡುಗಡೆ ಮಾಡಿದೆ:

- ಯೋಜನೆಗೆ ಕಾಲಮಿತಿಯನ್ನು ನಿಗದಿಪಡಿಸಿ ಆ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು;
- ಕಾಮಗಾರಿಯಲ್ಲಿ ಹೆಚ್ಚಳ / ಪರಿಷ್ಕೃತ ಅಂದಾಜು ವೆಚ್ಚವನ್ನು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಪರಿಗಣಿಸುವುದಿಲ್ಲ.
- ಒಂದು ವೇಳೆ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಕಾಮಗಾರಿಗೆ ತಗಲುವ ವೆಚ್ಚ ಹೆಚ್ಚಳವನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವೇ ಮೊತ್ತವನ್ನು ಭರಿಸತಕ್ಕದ್ದು.
- ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಾಗ ಕೆಟಿಪಿಪಿ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

- ಆಯುಕ್ತರು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಪಾಲಿನ ಮೊತ್ತದ ಬಳಕೆ ಪ್ರಮಾಣ ಪತ್ರ ಮತ್ತು ಕಾಮಗಾರಿಯ ಭೌತಿಕ ಪ್ರಗತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

2. ಈ ಮೊತ್ತವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆ–ರೈಡ್, ಬೆಂಗಳೂರು ಇವರು ಪೇಯಿಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇವರಿಂದ ಪಡೆದು ಆಯುಕ್ತರು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಇವರಿಗೆ ನೀಡತಕ್ಕದ್ದು.

3. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 4 ಟಿಎಫ್‌ಪಿ 2012 ದಿನಾಂಕ 27.04.2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.421

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ.ಸಂಖ್ಯೆ 48 ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಪತ್ರ ಸಂ: ಮೂಅಇ 103 ರಾರಾಹೆ 06, ದಿ: 4–7–2008.
2. ಸರ್ಕಾರದ ಆದೇಶ ಸಂ: ಮೂಅಇ 17 ರಾರಾಹೆ 10, ದಿ: 12–03–2010.
3. ಸರ್ಕಾರದ ಆದೇಶ ಸಂ: ಮೂಅಇ 17 ರಾರಾಹೆ 10, ದಿ: 14–07–2010.
4. ಪತ್ರ ಸಂ: ಕಾಇಂ/ ಲೋಇ/ ವಿ.ವಿ.ಶಿ/ ಲೆ.ಶಾ/ ಆರ್.ಓ.ಬಿ./ 10–11 ದಿನಾಂಕ: ಇಲ್ಲ, ಕಾರ್ಯಪಾಲಕ ಅಭಿಯಂತರರು, ಲೋ.ಬಂ. ಮತ್ತು ಒ.ಜ.ಸಾ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ.
5. ಸರ್ಕಾರದ ಆದೇಶ ಸಂ: ಮೂಅಇ 17 ರಾರಾಹೆ 10, ದಿ: 30–10–2010.
6. ಸರ್ಕಾರದ ಆದೇಶ ಸಂ: ಮೂಅಇ 17 ರಾರಾಹೆ 10, ದಿ: 26–12–2011.
7. ಪತ್ರ ಸಂ: ಸಂಕದ: ಸೇಶಿವ್ಯ: ರೈಸುಕಾ: ಶಿವಿವಿ: ಅನುದಾನ: 2011–12, ದಿ: 08–12–2011ರ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ(ದ), ಲೋಕೋಪಯೋಗಿ ಇಲಾಖೆ, ಬೆಂಗಳೂರು.
8. ಪತ್ರ ಸಂ: W/ 352/ CN/ BNC ದಿನಾಂಕ: 27–06–2012, ನೈರುತ್ಯ ರೈಲ್ವೆ ವಲಯದ ಮುಖ್ಯ ಆಡಳಿತಾಧಿಕಾರಿಯವರ ಕಛೇರಿಯ ಪತ್ರ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂ. (1) ರ ಸರ್ಕಾರಿ ಪತ್ರದಲ್ಲಿ ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ.ಸಂಖ್ಯೆ 48 ರ ಬದಲಿಗೆ ರಸ್ತೆ ಮೇಲು ಸೇತುವೆ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ತಗಲುವ ಒಟ್ಟು ವೆಚ್ಚ ರೂ.18.19 ಕೋಟಿಗಳ ಪರಿಷ್ಕೃತ ಅಂದಾಜಿಗೆ ತಗಲುವ ಒಟ್ಟು ಮೊತ್ತದ ಶೇ.50ರಷ್ಟನ್ನು ರೈಲ್ವೆಯಿಂದ ಪಡೆಯುವ ಷರತ್ತಿಗೊಳಪಟ್ಟು ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

2) ಮೇಲೆ ಓದಲಾದ ಕ್ರಮ ಸಂ. (2)ರಿಂದ (6) ರ ಸರ್ಕಾರಿ ಆದೇಶಗಳಲ್ಲಿ ಎಲ್.ಸಿ ಸಂಖ್ಯೆ 48 ರಲ್ಲಿ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿಯ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ (ಈ ಮೊತ್ತದಲ್ಲಿ ರೂ.3.00 ಕೋಟಿಯನ್ನು ರಾಜ್ಯ ಸರ್ಕಾರವು ರೈಲ್ವೆಯವರಿಗೆ ಬಿಡುಗಡೆ ಮಾಡಬೇಕಾದ ಮೊತ್ತವನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ). ಲ್ಯಾಪ್ಸ್ ಆಗಿರುವ ಮೊತ್ತ ರೂ.1,46,23,079.00ಗಳು ಅಂದರೆ ರೂ.7,00,000.00 (–) ರೂ.1,46,23,079.00ಗಳನ್ನು ಕಳೆದಲ್ಲಿ ರೂ.5.54 ಕೋಟಿಯನ್ನು ಬಿಡುಗಡೆ ಮಾಡಿದಂತಾಗಿದೆ.

3) ಮೇಲೆ ಓದಲಾದ ಕ್ರ. ಸಂ. (7) ಮುಖ್ಯ ಇಂಜಿನಿಯರ್ (ದಕ್ಷಿಣ), ಸಂಪರ್ಕ ಮತ್ತು ಕಟ್ಟಡ, ಬೆಂಗಳೂರು ಇವರ ಪತ್ರದಲ್ಲಿ ಕಾಮಗಾರಿಯು ಪ್ರಗತಿಯಲ್ಲಿದ್ದು ಕೆಲವೊಂದು ಉಪಕರಣಗಳ ಬೆಲೆಯಲ್ಲಿ ಹಾಗೂ ವಿನ್ಯಾಸದಲ್ಲಿ ಬದಲಾವಣೆಯಾಗಿರುವ ಹಿನ್ನೆಲೆಯಲ್ಲಿ ವೆಚ್ಚದಲ್ಲಿ ಹೆಚ್ಚಳವಾಗಿರುವುದರಿಂದ ಕಾಮಗಾರಿಯ ಮೊತ್ತ ರೂ.10.88 ಕೋಟಿಗಳಿಂದ ರೂ.16.40 ಕೋಟಿಗಳಿಗೆ ಅಂದಾಜನ್ನು ಪರಿಷ್ಕರಿಸಲಾಗಿದೆಯೆಂದು ಹಾಗೂ ಪರಿಷ್ಕರಣೆಯಿಂದ ಹೆಚ್ಚಳವಾಗಿರುವ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

4. ಮೇಲೆ ಓದಲಾದ ಕ್ರ. ಸಂ. (8)ರ ಪತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್, (ದಕ್ಷಿಣ) ಇವರು ಸಲ್ಲಿಸಿದ ಪರಿಷ್ಕೃತ ಅಂದಾಜಿನಲ್ಲಿ ರೂ.14.94 ಕೋಟಿಗಳಿಗೆ ನೈರುತ್ಯ ರೈಲ್ವೆಯ ಮುಖ್ಯ ಇಂಜಿನಿಯರ್‌ರವರು ಒಪ್ಪಿಗೆಯನ್ನು ಸೂಚಿಸಿರುತ್ತಾರೆ.

5. ಮೇಲೆ ಓದಲಾದ ಕ್ರ.ಸಂ.(7) ರ ಮುಖ್ಯ ಇಂಜಿನಿಯರ್ (ದಕ್ಷಿಣ), ಸಂಪರ್ಕ ಮತ್ತು ಕಟ್ಟಡ, ಬೆಂಗಳೂರು ಇವರು ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ವೆಚ್ಚ ಹೆಚ್ಚಳದ ಸಮಿತಿಯ ಮುಂದೆ ದಿ: 27–06–2012ರಂದು ಮಂಡಿಸಲಾಗಿತ್ತು. ಸಮಿತಿಯಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿದೆ.

Cost as agreed to by MoR		Rs. 1,360.00 lakhs
50% of service road cost		Rs. 26.00 lakhs
Box Drain		Rs. 208.00 lakhs
Total		Rs.1,494 lakhs
	GoK share	Rs 747 lakhs
	MoR share	Rs 747 lakhs

It was recommended that the remaining amount of Rs.146 lakhs will be borne by GoK alone. It was also decided and agreed that the bridge and approaches should be completed in all aspects by 30th September 2012 and opened to traffic.

6. ವೆಚ್ಚ ಹೆಚ್ಚಳದ ಸಮಿತಿಯು ನಿರ್ಣಯಿಸಿದಂತೆ ಪರಿಷ್ಕೃತ ಅಂದಾಜಿನಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.747.00+ರೂ.146.00=ರೂ.893.00 ಲಕ್ಷಗಳು. ರಾಜ್ಯ ಸರ್ಕಾರವು ಈ ಕಾಮಗಾರಿಗೆ ಈಗಾಗಲೇ ರೂ.554.00 ಲಕ್ಷಗಳನ್ನು ಬಿಡುಗಡೆ ಮಾಡಿರುವ ಮೊತ್ತವನ್ನು ಕಳೆದು ರೂ.339.00 ಲಕ್ಷಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಬಿಡುಗಡೆ ಮಾಡಬೇಕಾಗಿರುತ್ತದೆ.

7. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶಿಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಮೂಅಇ 17 ರಾರಾಹೆ 2010, ಬೆಂಗಳೂರು ದಿನಾಂಕ: 20–11–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ನಗರದ ರೈಲು ನಿಲ್ದಾಣದ ಹತ್ತಿರ ಬರುವ ಎಲ್.ಸಿ.ಸಂಖ್ಯೆ 48ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಯ ಮೊತ್ತ ರೂ.10.88 ಕೋಟಿಗಳಿಂದ (ರೂಪಾಯಿ ಹತ್ತು ಕೋಟಿ ಎಂಬತ್ತೆಂಟು ಲಕ್ಷಗಳು ಮಾತ್ರ) ಪರಿಷ್ಕೃತ ಅಂದಾಜು ರೂ.16.40 ಕೋಟಿಗಳ (ರೂಪಾಯಿ ಹದಿನಾರು ಕೋಟಿ ನಲವತ್ತು ಲಕ್ಷಗಳು ಮಾತ್ರ) ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ:–

- ಇನ್ನು ಮುಂದೆ ಈ ಕಾಮಗಾರಿಯಲ್ಲಿ ಆಗುವ ಯಾವುದೇ ಪರಿಷ್ಕೃತ ಅಂದಾಜನ್ನು ಸರ್ಕಾರವು ಪರಿಗಣಿಸುವುದಿಲ್ಲ.
- ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.
- ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಜವಾಬ್ದಾರರಾಗುತ್ತಾರೆ.
- ಪ್ರಸ್ತುತ ಬಿಡುಗಡೆ ಮಾಡುವ ಮೊತ್ತವನ್ನು ಬೇರೆ ಕಾಮಗಾರಿಗೆ ಉಪಯೋಗಿಸತಕ್ಕದ್ದಲ್ಲ.

2. ಪರಿಷ್ಕೃತ ಅಂದಾಜಿನಿಂದ ರಾಜ್ಯ ಸರ್ಕಾರದ ಹೆಚ್ಚುವರಿ ಪಾಲಿನ ಮೊತ್ತ ರೂ.339.00 ಲಕ್ಷಗಳಲ್ಲಿ ರೂ.200.00 ಲಕ್ಷಗಳನ್ನು (ರೂಪಾಯಿ ಇನ್ನೂರು ಲಕ್ಷಗಳು ಮಾತ್ರ) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ ಇವರಿಗೆ ಬಿಡುಗಡೆ ಮಾಡಿದೆ.

3. ಈ ವೆಚ್ಚವನ್ನು 2012–13 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04–(ಯೋಜನೆ)–211–ಕೆ–ರೈಡ್ – ಆರ್‌ಓಬಿ / ಆರ್‌ಯುಬಿ – ಬಂಡವಾಳ" ಇದರಡಿಯಲ್ಲಿ ರಸ್ತೆ ಮೇಲುಸೇತುವೆ/ ಕೆಳಸೇತುವೆಗಳ ನಿರ್ಮಾಣಕ್ಕೆ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

4. ಈ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಇವರು ಜಿಲ್ಲಾ ಖಜಾನೆ ಶಿವಮೊಗ್ಗ ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ. ಬೆಂಗಳೂರು, ಇವರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಇವರ ಖಾತೆಗೆ ಅಪ್‌ಲೋಡ್ ಮಾಡುವುದು. ಈ ಹಣವನ್ನು ಕಾಮಗಾರಿಗೆ ವೆಚ್ಚ ಮಾಡಿ ಉಪಯೋಗಿತಾ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಭೌತಿಕ ಪ್ರಗತಿಯ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: FD 894 Exp–1 2012, ದಿನಾಂಕ: 10.08.2012 ಮತ್ತು ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯ ಟಿಪ್ಪಣಿ ಸಂ: ಲೋಇ 45 ಸಿಬಿಆರ್ 2012, ದಿ: 05–09–2012ರ ಟಿಪ್ಪಣಿಯಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.423

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಹಾವೇರಿ ತಾಲ್ಲೂಕು ಎಕ್ಕುಂಬಿ – ಮೊಳಕಾಲ್ಮೂರ ರೈಲು ಮಾರ್ಗದಲ್ಲಿನ ಎಲ್‌ಸಿ ಸಂಖ್ಯೆ – 237ರ ಬದಲಾಗಿ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ಲೋಇ 30 ಸಿಬಿಆರ್ 2010 ದಿನಾಂಕ 04–08–2010.
2. ಸರ್ಕಾರದ ಆದೇಶ ಸಂ. ಲೋಇ 222 ಸಿಎನ್‌ಹೆಚ್ 2010 ದಿನಾಂಕ 16–11–2010.
3. ಸರ್ಕಾರದ ಆದೇಶ ಸಂಖ್ಯೆ. ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ 16–07–2011

4. ಸರ್ಕಾರಿ ಆದೇಶ ಸಂಖ್ಯೆ. ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ 30–08–2011.
5. ಸರ್ಕಾರದ ಪತ್ರ ಸಂ: ಮೂಅಇ 112 ರಾರಾಹೆ 2009 ದಿನಾಂಕ: 23–09–2011.
6. ಸರ್ಕಾರಿ ಆದೇಶ ಸಂಖ್ಯೆ. ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ: 15–12–2011.
7. ಸರ್ಕಾರಿ ಆದೇಶ ಸಂಖ್ಯೆ. ಮೂಅಇ 122 ರಾರಾಹೆ 2009, ಬೆಂಗಳೂರು, ದಿನಾಂಕ: 23–02–2012.
8. ಪತ್ರ ಸಂ: ಕಾನಿಇಂ/ ಲೋಇಹಾ/ ಲೋಇ/ ಎಬಿ–4/ 2011–2012/1881, ದಿನಾಂಕ:04–08–2012 ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಹಾವೇರಿ ವಿಭಾಗ, ಹಾವೇರಿ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ (1)ರ ಆದೇಶದಲ್ಲಿ ಹಾವೇರಿ ತಾಲ್ಲೂಕು ಎಕ್ಕುಂಬಿ – ಮೊಳಕಾಲ್ಮೂರ ರೈಲು ಮಾರ್ಗದಲ್ಲಿ ಬರುವ ಎಲ್‌ಸಿ ಸಂಖ್ಯೆ – 237 ರ ಬದಲಾಗಿ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಮೆ. ರೈಟ್ಸ್ ಸಂಸ್ಥೆಯು ತಯಾರಿಸಿರುವ ರೂ.23.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ರೈಲ್ವೆ ಮಂತ್ರಾಲಯ ಶೇಕಡ 50:50ರಷ್ಟು ವೆಚ್ಚವನ್ನು ಭರಿಸುವ ಷರತ್ತಿಗೊಳಪಟ್ಟು ಲೋಕೋಪಯೋಗಿ ಇಲಾಖೆಯು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

2. ಮೇಲೆ ಓದಲಾದ ಕ್ರ.ಸಂ (2)ರ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಯು ಕಾಮಗಾರಿಯನ್ನು ರೂ.22.01 ಕೋಟಿಗಳಿಗೆ ಗುತ್ತಿಗೆಯನ್ನು ಗುತ್ತಿಗೆದಾರರಾದ ಶ್ರೀ ರಾಜಣ್ಣ ಶಿವಕುಮಾರ್, ಇವರಿಗೆ ವಹಿಸಿದೆ.

3. ಮೇಲೆ ಓದಲಾದ ಕ್ರ.ಸಂ 3, 4, 6 ಮತ್ತು 7 ರ ಸರ್ಕಾರಿ ಆದೇಶಗಳಲ್ಲಿ ಕ್ರಮವಾಗಿ ರೂ.500.00, ರೂ.300.00, ರೂ.77.20 ಹಾಗೂ ರೂ.272.80 ಲಕ್ಷಗಳನ್ನು ಅಂದರೆ ಒಟ್ಟು ರೂ.11.50/– (ರೂಪಾಯಿ ಹನ್ನೊಂದು ಕೋಟಿ ಐವತ್ತು ಲಕ್ಷಗಳು ಮಾತ್ರ) ಕೋಟಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಹಾವೇರಿ ಇವರಿಗೆ ಬಿಡುಗಡೆ ಮಾಡಲಾಗಿದೆ. ಈ ಮೊತ್ತದಲ್ಲಿ ಭೂಸ್ವಾಧೀನ ವೆಚ್ಚ ರೂ.108.10 ಲಕ್ಷಗಳು ಸೇರಿರುತ್ತದೆ.

2. In G.O. dated 12-08-2009 read at Sl. No. (2) above, approval was given for scope of services and sanction for payment of fees to iDeCK for project management services for Shimoga Airport Development project at the rate not exceeding of Rs.3,00,000/- exclusive of applicable service taxes per month for the project period of twelve months.

3. In Government Orders read at Sl. No. (3 to 5) above, necessary amounts have been released to iDeCK, Bangalore towards the fees for Project Management Services of Shimoga Airport Project from October 2009 – February 2011 respectively.

4. In letter dated: 16-09-2011 read at (6) above, the President (projects), iDeCK, Bangalore has stated that the construction of Airport started in October 2009 and is likely to continue upto August 2012 and has requested for extension of the Project Management and Consultancy Services till the completion of the project.

5. In G.O. dated 10.02.2012 read at Sl. No. (7), (8) & (9) above, an amount of Rs.37,50,200/- has been released to iDeCK, Bangalore towards fees to iDeck for Project Management and Consultancy Services for the Shimoga Airport Project for the months of March 2011 to February 2012.

6. In Government Notification read at (10) above, exemption for procuring the services of iDeCK under the provisions of 4(g) of the KTPP Act 1999 has been extended upto 28.02.2013.

7. In letter read at Sl.No.(11) above, the President (Projects), iDeCK, Bangalore has sent invoices for Rs.3,30,900/- & Rs.10,11,240/- respectively towards payment of fees to iDeCK for project management and consultancy services for the months of March 2012, April 2012, May 2012 and June 2012.

8. The proposal has been examined in detail and hence this order.

GOVERNMENT ORDER NO. IDD 86 DIA 2008 BANGALORE DATED: 27-11-2012.

Under the circumstances explained in the preamble, sanction is accorded for release of Rs.13,42,140/- (Rupees Thirteen lakhs Forty two thousand One Hundred forty only) to iDeCK, Bangalore towards fees for Project Management and Consultancy Services for the Shimoga Airport Project for the months of March 2012, April 2012, May 2012 and June 2012.

2. This amount shall be met under the Head of *Account "5465-01-190-1-05-211- Development of Minor Airports Investments"* out of the budget provision during 2012-13.

3. The Chief Financial Officer, iDeCK, Bangalore is authorised to draw the above amount on a payee's receipt duly countersigned by the Under Secretary to Government, Infrastructure Development Department, Bangalore.

4. This order is issued in accordance with the delegation of financial powers given to the Principal Secretaries / Secretaries to Government vide G.O.No.FD 04 TFP 2012 dated 27.04.2012 and FD 8 TFP 2012 dated: 04-10-2012.

By order and in the name of theGovernor of Karnataka

S. J. SAMPATH KUMAR

Under Secretary to Government,

Infrastructure Development Department

PR.395

INFRASTRUCTURE DEVELOPMENT SECRETARIAT

Sub: Dabhol Bangalore Gas Pipeline Project – Release of funds - reg.

Read:
1. G.O No. IDD 14 UIP 2008, dated 10.07.2008.
2. G.O No. IDD 14 UIP 2008, dated 25.11.2009.
3. G.O.No.IDD 18 UIP 2008(P-III) dt: 29.7.2010.
4. G.O No. IDD 18 UIP 2010, dated 08.06.2011.
5. G.O No. IDD 14 UIP 2008, dated 06.01.2012.
6. Letter No. DGM (IPD)/ GAIL/ 636/ 2012 & 13, dated 25-06-2012 received from the DGM, KSIIDC, Bangalore.

Preamble:

In the Government Order read at (1) above, an Apex Level Coordination group (COG) for overseeing in the implementation of the Dabhol Bangalore (Bidadi) Gas Pipeline Project was constituted.

2. In the Government Order read at (2) above, KSIIDC, has been designated as Nodal / Co-ordination / Liaison Agency for the project and also accorded for the approval for creation of "Gail Gas Project Cell" in Karnataka State Industrial Investment Development Corporation (KSIIDC), Bangalore.

3. In the Government Orders read at (3), (4) & (5) above, an amount of Rs.115.00 lakhs was released towards the expenditure of GAIL Cell for the periods of 2010, 2011 & 2012.

4. In the letter read at Sl.No.(6) above, the DGM, KSIIDC, Bangalore has furnished utilization certificate for the year 2011-12 and have stated that balance amount of Rs.62,000/- is available with them and requested to release an amount of Rs.82.00 lakhs towards the expenditure of GAIL Cell for the period of 2012-13 .

5. The proposal of KSIIDC, Bangalore has been examined in detail, hence this order.

GOVERNMENT ORDER NO. IDD 14 UIP 2008 (P-I) BANGALORE, DATED:07-08-2012.

Government of Karnataka is pleased to release an amount of Rs.40.00 lakhs (Rupees Fourty Lakhs only) towards the Gas Pipeline Project Gail Cell for the year 2012 - 2013.

2. This Expenditure shall be met from the Head of Account "5465-01-190-1-16- Gas Pipeline Project out of the Budget Provision of Rs.82.00 lakhs in 2012-13.

3. The Managing Director, KSIIDC, Bangalore is authorized to draw the amount on a payee's Receipt duly counter signed by the Under Secretary to Government Infrastructure Development Department & also furnish the utilization certificate for the periods 2010, 2011 & 2012 for funds released by Government of Karnataka towards Gas Pipeline Project Gail Cell.

4. This order is issued in accordance with the financial powers delegated to the Principal Secretaries/ Secretaries to Government vide Government Order No. FD 4 TFP 2012 dated 27.04.2012.

By order and in the name of theGovernor of Karnataka

S. J. SAMPATH KUMAR

Under Secretary to Government,

Infrastructure Development Department

PR.420

INFRASTRUCTURE DEVELOPMENT SECRETARIAT

Sub: Release of funds towards Equity contribution from KSIIDC (on behalf of Government of Karnataka) for Joint Venture Company for City Gas Distribution project - reg.

Read:
1. MoU signed between GOK and GAIL dated: 29-04-2009.
2. G.O. No. IDD 14 UIP 2008 dated 25-11-2009.
3. JVA signed between KSIIDC & GAIL on 08-06-2011.
4. G.O. No. IDD 18 UIP 2010 dated 20-01-2011.
5. G.O. No. IDD 18 UIP 2010 dated 03-08-2011.
6. G.O. No.IDD 18 UIP 2010 dated 29.02.2012.
7. Letter No. DGM (IPD)/ CGD/ 1748/ 2012-13, dated 09.11.2012 received from the Deputy General Manger (IPD), KSIIDC, Bangalore.

Preamble:

In the Sl. No. read at (1) above, A Memorandum of Understanding (MoU) for Natural Gas Infrastructure and City Gas Distribution was signed between the State Government in IDD and M/s.GAIL (India) Limited, New Delhi on 29-04-2009.

2. In the G.O. read at (2) above, Karnataka State Industrial and Infrastructure Development Corporation (KSIIDC), Bangalore has been nominated as the Nodal Agency for Dhabhol – Bangalore Gas pipeline project. As per the MoU, Promotion of Joint Venture for City Gas Distribution projects for Domestic, Commercial, Industrial and Transport sectors with the participation of M/s. GAIL, GAIL Gas Limited, (GGL), KSIIDC, KSRTC and BMTC was also agreed. It was also agreed that M/s.GAIL and IDD to conduct necessary Techno Economic studies based on demand potential and geographical distribution of demand and address accordingly the requirements of Infrastructure for distribution, including pipelines and City Gas Distribution networks and associated facilities for the state under feasible supply options on long term competitive basis. City Gas Distribution is also proposed to be taken up by the Government of Karnataka.

3. In Sl. No. read at (3) above, Joint Venture Agreement (JVA) was entered between KSIIDC & GAIL (India) Limited, for City Gas Distribution in the State. Joint Venture Company has been formed between the KSIIDC and GAIL for this project with the Initial Authorised Share Capital of Rs.100.00 crores. The Capital Structure of the Joint Venture Company is as follows:-

GAIL	26%
KSIIDC	24%
Strategic Investors/ Non – Government Companies / Financial Institutions	50%
Total	**100%**

The total equity contribution from KSIIDC (on behalf of Government of Karnataka) at 24% of initial authorized share capital of Rs.100.00 crores is Rs.24.00 crores. It was agreed that the equity contribution will be released in installment every year.

4. In the G.O.s read at (4 & 5) above, an amount of Rs.169.64 lakhs (Rs.One Hundred and Sixty Nine lakhs Sixty Four Thousand only) was released towards Establishment of a Joint Venture Company by KSIIDC and GAIL India Limited, for City Gas Distribution (CGD) Project.

5. In the G.O. read at (6) above, an amount of Rs.298.30 lakhs (Rs.Two Hundred and Ninety Eight lakhs and Thirty Thousand only) was released towards Equity Share for Joint Venture Company for the City Gas Distribution Project.

6. In the letter dated: 19.11.2012 read at (7) above, the Deputy General Manager, KSIIDC, Bangalore has requested to release Rs.553.60 lakhs i.e Rs.500.00 lakhs (Rs.Five Hundred lakhs only) towards equity investment and the balance amount of Rs.53.60 lakhs towards establishment & administrative expenses will be drawn in the last quarter of 2012-13.

7. Government of Karnataka after examining the proposal has decided to release Rs.253.60 lakhs (Rs. Two Hundred and Fifty Three lakhs and Sixty Thousand only) i.e. Rs.200.00 lakhs for Equity Investment and Rs.53.60 lakhs for Administrative Expenses towards City Gas Distribution Project. Hence this order.

GOVERNMENT ORDER NO. IDD 10 UIP 2012 BANGALORE, DATED: 29-12-2012.

Under the circumstances explained in the preamble, Government of Karnataka is pleased to release an amount of *Rs.253.60 lakhs (Rs.Two Hundred and Fifty Three lakhs and Sixty Thousand only)* i.e. Rs.200.00 lakhs for equity investment and Rs.53.60 lakhs for establishment & administrative expenses to Karnataka State Industrial and Infrastructure Development Corporation (KSIIDC), Bangalore towards City Gas Distribution Project for the year 2012-13.

2. This amount shall be met from the Head of Account *"5465-01-190-1-17-City Gas Distribution Project"* out of the Budget provision of Rs.553.50 lakhs during 2012-13.

3. The Managing Director, KSIIDC, Bangalore is authorized to draw the amount on a Payees Receipt duly countersigned by the Under Secretary to Government, Infrastructure Development Department.

4. This order is issued in accordance with the financial powers delegated to Principal Secretaries/ Secretaries to Government vide G.O No FD/04/TFP/2012, dated 27-04-2012 & No.FD 8 TFP 2012 dated 04.10.2012.

By order and in the name of theGovernor of Karnataka
S. J. SAMPATH KUMAR
Under Secretary to Government,
Infrastructure Development Department

PR.406

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 48 ರಾಅವಿ 2010 ದಿನಾಂಕ 20.05.2011
2. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 48 ರಾಅವಿ 2010 ದಿನಾಂಕ 16.11.2011.

3. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 48 ರಾಅವಿ 2010 ದಿನಾಂಕ 28.01.2012.
4. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 48 ರಾಅವಿ 2010 ದಿನಾಂಕ 20.03.2012
5. ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯ ಪತ್ರ ಸಂ.: ಎಲ್. ಎ. ಕ್ಯೂ. ಸಿ.ಆರ್. 72/ 2011–12, ದಿನಾಂಕ: 12–06–2012.

ಪ್ರಸ್ತಾವನೆ:–

ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ದಿನಾಂಕ: 06–10–2005 ರಂದು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅನುಸಾರ ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಳಕೆ ಬಿಲ್ಲನ್ನು ವಿಮಾನಯಾನ ಸೇವೆ ಕಾರ್ಯಾರಂಭಗೊಂಡ ದಿನಾಂಕದಿಂದ 5 ವರ್ಷಗಳ ಅವಧಿಗೆ ರಾಜ್ಯ ಸರ್ಕಾರದಿಂದ ಭರಿಸಬೇಕಾಗಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ. (1), (2), (3) & (4) ರ ಸರ್ಕಾರದ ಆದೇಶಗಳಲ್ಲಿ ನವೆಂಬರ್ 2010 ರಿಂದ ಜನವರಿ 2012 ರವರೆಗೆ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲು ಬಿಲ್ಲಿನ ಮೊತ್ತ ರೂ.63,75,101–00 ಗಳನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲಾಗಿದೆ.

3. ಮೇಲೆ ಕ್ರಮ ಸಂಖ್ಯೆ. (5) ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರು ಮಾರ್ಚ್ 2012 ರಿಂದ ಮೇ 2012 ರ ಮಾಹೆಯ ಅಂತ್ಯಕ್ಕೆ ಬಾಕಿ ಉಳಿದಿರುವ ವಿದ್ಯುತ್‌ಚ್ಛಕ್ತಿ ಬಿಲ್ಲಿನ ಮೊತ್ತ ರೂ.12,60,753/– (ಹನ್ನೆರಡು ಲಕ್ಷಗಳ ಅರವತ್ತು ಸಾವಿರದ ಏಳು ನೂರ ಐವತ್ತ ಮೂರು ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲು ಸರ್ಕಾರವನ್ನು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಮೂಅಇ 48 ರಾಅವಿ 2010, ಬೆಂಗಳೂರು, ದಿನಾಂಕ: 06–08–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಾರ್ಚ್ 2012ರ ಅಂತ್ಯಕ್ಕೆ ಬಾಕಿ ಉಳಿದಿರುವ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲಿನ ಮೊತ್ತ ರೂ.12,60,753/– (ಹನ್ನೆರಡು ಲಕ್ಷಗಳ ಅರವತ್ತು ಸಾವಿರದ ಏಳು ನೂರ ಐವತ್ತ ಮೂರು ರೂಪಾಯಿಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

2. ಈ ಮೊತ್ತವನ್ನು 2011–12ನೇ ಸಾಲಿನ ಹೊಸ ಲೆಕ್ಕ ಶೀರ್ಷಿಕೆ "3451–00–090–1–06–12–ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ (ಯೋಜನೆ) –71–ಕಟ್ಟಡ ವೆಚ್ಚಗಳು" ಇದರಡಿಯಲ್ಲಿ ಒದಗಿಸಿರುವ ರೂ.60.00 ಲಕ್ಷಗಳಿಂದ ಭರಿಸತಕ್ಕದ್ದು.

3. ಈ ಹಣವನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರು ಜಿಲ್ಲಾ ಖಜಾನೆ ಮೈಸೂರು ಇಲ್ಲಿ ಡಿ.ಸಿ. ಬಿಲ್ ಮೂಲಕ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ, ಬೆಂಗಳೂರು, ಇವರು ಈ ಮೊತ್ತವನ್ನು ಜಿಲ್ಲಾಧಿಕಾರಿಗಳ ಖಾತೆಗೆ ಅಪ್‌ಲೋಡ್ ಮಾಡುವುದು. ಈ ಹಣವನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು ಇವರಿಗೆ ಜಮಾ ಮಾಡಿ ಸ್ವೀಕೃತಿ ಪಡೆದು ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ/717/ವೆಚ್ಚ–1/2012 ದಿನಾಂಕ 28.06.2012 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ 4 ಟಿಎಫ್‌ಪಿ 2012 ದಿನಾಂಕ 27.04.2012 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.402

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಶಿವಮೊಗ್ಗ ಜಿಲ್ಲೆಯಲ್ಲಿ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಹಾರಾಟಕ್ಕಾಗಿ ರನ್‌ವೇ ಸಿದ್ಧಪಡಿಸಲು ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹಣ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 16 ರಾಅವಿ 2002 ದಿನಾಂಕ 03.01.2007
2. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 70 ರಾಅವಿ 2007 ದಿನಾಂಕ 19.07.2007
3. ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಅ.ಮಂಡಳಿ, ಬೈಕಂಪಾಡಿ, ಮಂಗಳೂರು ಇವರ ಪತ್ರ ಸಂಖ್ಯೆ.ಎಲ್.ಎ.ಕ್ಯೂ.ಎಸ್.ಆರ್:5/08–09 (VI)/207 ದಿನಾಂಕ 08.05.2012
4. ದಿನಾಂಕ 11.05.2012 ರಂದು ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿ.

ಪ್ರಸ್ತಾವನೆ:

ಮೇಲೆ ಕ್ರಮ ಸಂ.(1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 03.01.2007 ರಲ್ಲಿ ಶಿವಮೊಗ್ಗದಲ್ಲಿ ಒಂದು ಹೊಸ ವಿಮಾನ ನಿಲ್ದಾಣ ನಿರ್ಮಿಸಲು ಅವಶ್ಯವಿರುವ 662 ಎಕರೆ 38 ಗುಂಟೆ ಜಮೀನಿನ ಭೂಸ್ವಾಧೀನಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು ಅಂದಾಜಿಸಿದ ಒಟ್ಟು ವೆಚ್ಚ ರೂ.14,58,49,000.00 ಗಳ ಪೈಕಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಪ್ರಾರಂಭಿಕವಾಗಿ ರೂ.5,83,00,000.00 ಗಳನ್ನು ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ

ಅಂತಿಮ ಅಧಿಸೂಚನೆ ಹೊರಡಿಸುವ ಹಾಗೂ ಪರಿಹಾರ ಧನವನ್ನು ಬಟವಾಡೆ ಮಾಡುವ ಮುನ್ನ ಎಲ್ಲಾ ಔಪಚಾರಿಕ ಕಾರ್ಯಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2. ಮೇಲೆ ಕ್ರಮ ಸಂಖ್ಯೆ.(2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 19.07.2007 ರಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಸುಮಾರು 662.38 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಇದರಲ್ಲಿ 135 ಎಕರೆ ಜಮೀನು ಖಾಸಗಿ ಜಮೀನಾಗಿದ್ದು, ಉಳಿದ 529 ಎಕರೆ ಸರ್ಕಾರಿ ಜಮೀನಾಗಿರುತ್ತದೆ. ಅದರಲ್ಲಿ ಸುಮಾರು 300 ಕ್ಕಿಂತ ಹೆಚ್ಚು ಬಗರ್ ಹುಕುಂ ಸಾಗುವಳಿ ಮಾಡುತ್ತಾ ಬಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸ್ಥಳಾಂತರಿಸಿ ಅವರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸಲು ಪ್ರತಿ ಎಕರೆಗೆ ರೂ.2.00 ಲಕ್ಷದಂತೆ ಹಾಗೂ 4.00 ಎಕರೆಗೆ ಮೀರದಂತೆ ದಯಾತ್ಮಕ ಪರಿಹಾರ ನೀಡಲು ರೂ.20.13 ಕೋಟಿಗಳನ್ನು ಮಂಜೂರು ಮಾಡಲಾಗಿದೆ.

3. ಮೇಲೆ ಕ್ರಮ ಸಂ: (3) ರಲ್ಲಿ ಓದಲಾದ ಪತ್ರ ದಿ: 08–05–2012ರಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಅ. ಮಂಡಳಿ, ಬೈಕಂಪಾಡಿ, ಮಂಗಳೂರು, ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಬರೆದಿರುವ ಪತ್ರದಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಸ್ವಾಧೀನಪಡಿಸಿರುವ ಜಮೀನಿನಿಂದ ನಿರ್ವಸಿತರಾದವರಿಗೆ ಸೋಗಾನೆ ಗ್ರಾಮದ ಸರ್ವೇ ನಂ.120ರಲ್ಲಿ ನಿರ್ಮಿಸುತ್ತಿರುವ ಪುನರ್ವಸತಿ ಪ್ರದೇಶಕ್ಕೆ ಸಂಪರ್ಕ ರಸ್ತೆ ಕಲ್ಪಿಸುವ ಸಲುವಾಗಿ ನಿಧಿಗೆ ಗ್ರಾಮದ ಸರ್ವೇ ನಂ.158, 159 ಮತ್ತು 175/5 ರಲ್ಲಿ ರಸ್ತೆಗಾಗಿ 0.29 ಗುಂಟೆ ಜಮೀನನ್ನು ಸ್ವಾಧೀನಪಡಿಸಲು ಹಾಗೂ ರನ್‌ವೇಗಾಗಿ ಸೋಗಾನೆ ಗ್ರಾಮದ ಸರ್ವೆ ನಂ.131 ಮತ್ತು 133 ರಲ್ಲಿ 3 ಎಕರೆ 16 ಗುಂಟೆ ಜಮೀನು ಅಗತ್ಯವಿದೆಯೆಂದು ಈ ಜಮೀನಿಗೆ ಭೂಮೌಲ್ಯ ರೂ.46,62,000/– ಹಾಗೂ ಕಟ್ಟಡ ಮರ, ಮಾಲ್ಕಿ ಅಂದಾಜು ರೂ.7,00,000/– ಗಳು ಒಟ್ಟು ರೂ.53,62,500/– ವೆಚ್ಚ ತಗಲುತ್ತದೆಂದು ಈ ಬಗ್ಗೆ ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಗಳು ನಡೆಸಿದ ಸಭೆಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದ ರನ್ ವೇ ಗಾಗಿ ಹೆಚ್ಚುವರಿಯಾಗಿ ಬೇಕಾಗಿರುವ ಶಿವಮೊಗ್ಗ ತಾಲ್ಲೂಕು ಸೋಗಾನೆ ಗ್ರಾಮದ ಸರ್ವೇ ನಂ. 131, 133ರಲ್ಲಿನ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನ ಕಾಯಿದೆಯಡಿ ಸ್ವಾಧೀನಪಡಿಸುವುದು ವಿಳಂಬವಾಗುವುದರಿಂದ ನೇರವಾಗಿ ಹಿಡುವಳಿದಾರರಿಂದ ಕ್ರಯಕ್ಕೆಪಡೆಯುವಂತೆ ಸೂಚಿಸಿರುವುದಾಗಿಯೂ ಹಾಗೂ ದಿನಾಂಕ: 17–06–2010ರಂದು ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯಲ್ಲಿ ಒಳಗೊಂಡಿರುವ ಜಮೀನನ್ನು ಸಹ ಭೂಸ್ವಾಧೀನಪಡಿಸುವ ಮೊದಲು ನೇರವಾಗಿ ರೈತರಿಂದಲೇ ಖರೀದಿಸಲು ಸೂಚಿಸಿರುತ್ತಾರೆ ಹಾಗೂ ಅದರಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕಾ ಸದಸ್ಯರು, ಕೆ.ಐ.ಎ.ಡಿ.ಬಿ, ಬೆಂಗಳೂರು ಇವರು ದಿ: 25–02–2012ರ ಪತ್ರದಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ, ಇವರು ದಿನಾಂಕ: 23–04–2012ರಂದು ಸಭೆ ನಡೆಸಿ, ಈ ಜಮೀನಿಗೆ ರೂ.53,62,500.00ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸುತ್ತಾ ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಸೋಗಾನೆ ಗ್ರಾಮದಲ್ಲಿ 3 ಹಂತದಲ್ಲಿ ಭೂಸ್ವಾಧೀನಪಡಿಸಲು ದರ ನಿಗದಿಯಾಗಿರುವ ಪ್ರಕ್ರಿಯೆ ಬಗ್ಗೆ ಮಾಹಿತಿಯನ್ನು, ಈ ಕೆಳಕಂಡಂತೆ ನೀಡಿರುತ್ತಾರೆ. ಅದರಂತೆ, 3ನೇ ಹಂತದಲ್ಲಿ ವಿಮಾನ ನಿಲ್ದಾಣದ ರನ್ ವೇ ಗಾಗಿ ಭೂಸ್ವಾಧೀನಪಡಿಸಿದ ಜಮೀನಿಗೆ ಖುಷ್ಕಿ ಜಮೀನಿಗೆ 1 ಎಕರೆಗೆ ರೂ.13.50 ಲಕ್ಷ ಇತರೆ ಜಮೀನಿಗೆ 1 ಎಕರೆಗೆ ರೂ.14.50 ಲಕ್ಷ ದರ ನಿಗದಿಪಡಿಸಲಾಗುವುದರಿಂದ ಅಂತಿಮವಾಗಿ 3ನೇ ಹಂತದಲ್ಲಿ ನಿಗದಿಪಡಿಸಿದ ದರವನ್ನು ಈಗ ಖರೀದಿಸುವ ಜಮೀನಿಗೆ ಲೆಕ್ಕಾಚಾರ ಮಾಡಬೇಕಾಗಿರುತ್ತದೆ ಎಂದು ತಿಳಿಸಿ, ಈ ಜಮೀನಿನ ಮೌಲ್ಯದ ಬಗ್ಗೆ ಮಾಹಿತಿಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

ಗ್ರಾಮ	ಸ. ನಂಬರ್	ತರಹೆ	ವಿಸ್ತೀರ್ಣ	ನಿಗದಿಪಡಿಸಿದ ಮೌಲ್ಯ ಲಕ್ಷದಲ್ಲಿ	ಒಟ್ಟು ಮೌಲ್ಯ
ಸೋಗಾನೆ	131	ಖುಷ್ಕಿ	0.26	13.50	8,77,500.00
	131	ಖುಷ್ಕಿ	2.01	13.50	27,33,750.00
ನಿಧಿಗೆ	158	ತರಿ	0.11	14.50	3,98,750.00
	159	ತರಿ	0.10	14.50	3,62,500.00
	175	ತರಿ	0.08	14.50	2,90,000.00
			3.16		**46,62,500.00**

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 63 ರಾಅವಿ 2012, ಬೆಂಗಳೂರು, ದಿನಾಂಕ 09.07.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದ ಪುನರ್ವಸತಿ ಯೋಜನೆಯ ರಸ್ತೆ ಉದ್ದೇಶಕ್ಕಾಗಿ ಶಿವಮೊಗ್ಗ ತಾಲ್ಲೂಕು ನಿಧಿಗೆ / ಹೋಬಳಿ ನಿಧಿಗೆ ಗ್ರಾಮದ ಸರ್ವೆ ನಂ.158, 159 ಮತ್ತು 175/5 ರಲ್ಲಿ ರಸ್ತೆಗಾಗಿ 0.29 ಎಕರೆ ಹಾಗೂ ರನ್‌ವೇಗಾಗಿ ಸೋಗಾನೆ ಗ್ರಾಮದ ಸರ್ವೆ ನಂ.131 ಮತ್ತು 133 ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ರೂ.46,62,000/– ಹಾಗೂ ಕಟ್ಟಡ ಮರ, ಮಾಲ್ಕಿಗಳಿಗೆ ಅಂದಾಜು ರೂ.7,00,000/– ಗಳು ಒಟ್ಟು ರೂ.53,62,500.00 (ಐವತ್ತ ಮೂರು ಲಕ್ಷಗಳು ಅರವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

2. ಈ ಮೊತ್ತವನ್ನು 2012–13 ನೇ ಸಾಲಿನ ಲೆಕ್ಕಶೀರ್ಷಿಕೆ 5465–01–190–1–05 (ಯೋಜನೆ)–211–ಬಂಡವಾಳಗಳು–ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಇದರಡಿಯಲ್ಲಿ ಒದಗಿಸಿರುವ ರೂ.5.00 ಕೋಟಿಗಳ ಆಯವ್ಯಯದಿಂದ ಭರಿಸತಕ್ಕದ್ದು.

3. ಮೇಲೆ ತಿಳಿಸಿರುವ ಜಮೀನು ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಈಗಾಗಲೇ ಭೂಸ್ವಾಧೀನ ಪಡಿಸಿರುವ ಜಮೀನಿನ ವಿಸ್ತೀರ್ಣದಲ್ಲಿ ಬಿಟ್ಟುಹೋಗಿರುವ ಬಗ್ಗೆ ಖಚಿತ ಪಡಿಸಿಕೊಂಡು, ಬಿಟ್ಟುಹೋಗಿರುವುದಕ್ಕೆ ಕಾರಣಗಳನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಹಾಗೂ ಈ ಜಮೀನು ಬಗೇರ್ ಹುಕಂ ಸಾಗುವಳಿದಾರರ ಪ್ರದೇಶದಲ್ಲಿ ಬರುವುದಿಲ್ಲ ಎಂಬುದನ್ನು ಸಹ ಖಚಿತ ಪಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಈ ಮೊತ್ತವನ್ನು ಖರ್ಚು ಮಾಡುವಂತೆ ಸೂಚಿಸಿದೆ.

4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯಕಾರಿ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರು ಪೇಯೀಸ್ ರಸೀತಿಯ (Payees Receipt) ಮುಖೇನ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜು ಪಡೆದು ಹಣ ಪಡೆಯತಕ್ಕದ್ದು.

5. ಈ ಆದೇಶವನ್ನು ದಿನಾಂಕ 27.04.2012 ರ ಆದೇಶ ಸಂಖ್ಯೆಆಇ 4 ಟಿಎಫ್‌ಪಿ 2012 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.404

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಶಿವಮೊಗ್ಗ ವಿಮಾನ ನಿಲ್ದಾಣದ ನೀರು ಪೂರೈಕೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ, ಇವರ ಪತ್ರ ಸಂ: ಎಲ್. ಎನ್. ಡಿ.(1) ಸಿ. ಆರ್. 653/ 2011-12 (9583) ದಿನಾಂಕ: 20.07.2012.

ಪ್ರಸ್ತಾವನೆ:-

ಮೇಲೆ ಓದಲಾದ ದಿ: 20-07-2012ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಇವರು ಶಿವಮೊಗ್ಗ ವಿಮಾನ ನಿಲ್ದಾಣದ ಕಾಮಗಾರಿಗಾಗಿ ಅಗತ್ಯವಿರುವ ನೀರು ಪೂರೈಕೆಯನ್ನು ಮತ್ತೂರು ಗ್ರಾಮದ ಬಳಿ ತುಂಗಾ ನದಿಯಿಂದ ಸರಬರಾಜು ಮಾಡುವ ಬಗ್ಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಿಂದ Construction of intake well, jack well, intake pipeline, raising main, electrical express feeder line, ಇತರೆ ಕಾಮಗಾರಿಗಾಗಿ ರೂ.500.00 ಲಕ್ಷ ಹಾಗೂ ವಿಮಾನ ನಿಲ್ದಾಣ ಪ್ರಾಧಿಕಾರದಿಂದ water treatment plant, aerator, settling tank, ಇತರೆ ಕಾಮಗಾರಿಗಾಗಿ ರೂ.700.00 ಲಕ್ಷ ಮೊತ್ತಕ್ಕೆ ತಯಾರಿಸಿರುವ ಅಂದಾಜು ಪಟ್ಟಿಯಂತೆ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2. ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಜಿಲ್ಲಾ ಪಂಚಾಯತ್, ಶಿವಮೊಗ್ಗ, ಇವರು ಶಿವಮೊಗ್ಗ ವಿಮಾನ ನಿಲ್ದಾಣದ ನೀರು ಪೂರೈಕೆಗಾಗಿ ಮತ್ತೂರು ಗ್ರಾಮದ ಬಳಿ ತುಂಗಾ ನದಿಯಿಂದ ವಿಮಾನ ನಿಲ್ದಾಣದ ನಿವೇಶನದವರೆಗೆ ನೀರು ಸರಬರಾಜು ಮಾಡುವ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿ (ಆಕಖ) ತಯಾರಿಸಲು ತಗಲುವ ರೂ.500.00 ಲಕ್ಷಗಳನ್ನು ಬಿಡುಗಡೆ ಮಾಡಲು ಹಾಗೂ ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ. ಮೂಅಇ 32 ರಾಅವಿ 2012, ಬೆಂಗಳೂರು ದಿನಾಂಕ: 07-09-2012.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಶಿವಮೊಗ್ಗ ವಿಮಾನ ನಿಲ್ದಾಣದ ನೀರು ಪೂರೈಕೆಗಾಗಿ ಮತ್ತೂರು ಗ್ರಾಮದ ಬಳಿ ತುಂಗಾ ನದಿಯಿಂದ ವಿಮಾನ ನಿಲ್ದಾಣದ ನಿವೇಶನದವರೆಗೆ ನೀರು ಸರಬರಾಜು ಮಾಡುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಇದಕ್ಕಾಗಿ ವಿಸ್ತೃತ ಯೋಜನಾ ವರದಿ (DPR) ತಯಾರಿಸಲು ರೂ.5.00 ಲಕ್ಷಗಳನ್ನು (ರೂಪಾಯಿ ಐದು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

2) ಈ ಮೊತ್ತವನ್ನು 2012-13 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 5465-01-190-1-05 - (P) 211 ರಡಿಯಲ್ಲಿ ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ಒದಗಿಸಿರುವ ರೂ.500.00 ಲಕ್ಷಗಳ ಮೊತ್ತದಿಂದ ಭರಿಸತಕ್ಕದ್ದು.

3) ಈ ಮೊತ್ತವನ್ನು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರು ಜಿಲ್ಲಾ ಖಜಾನೆ, ಶಿವಮೊಗ್ಗ, ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ., ಬೆಂಗಳೂರು, ಇವರು ಈ ಮೊತ್ತವನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳ ಖಾತೆಗೆ ಅಪ್ ಲೋಡ್ ಮಾಡುವುದು. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಿ ಉಪಯೋಗಿತ ಪ್ರಮಾಣ ಪತ್ರವನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4) ಈ ಆದೇಶವನ್ನು ದಿ: 27-04-2012ರ ಆದೇಶ ಸಂ: ಆಇ 4 ಟಿಎಫ್‌ಪಿ 2012ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.409

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ. ಮೂಅಇ 32 ರಾಅವಿ 2004 ದಿನಾಂಕ: 20.03.2007.
2. ಸರ್ಕಾರದ ಆದೇಶ ಸಂಖ್ಯೆ. ಮೂಅಇ 32 ರಾಅವಿ 2004 ದಿನಾಂಕ: 07.05.2007.
3. ಸರ್ಕಾರದ ಆದೇಶ ಸಂಖ್ಯೆ. ಮೂಅಇ 23 ರಾಅವಿ 2008 ದಿನಾಂಕ: 23.05.2009.
4. ಸರ್ಕಾರದ ಆದೇಶ ಸಂಖ್ಯೆ. ಮೂಅಇ 23 ರಾಅವಿ 2008 ದಿನಾಂಕ: 27.11.2009, 26.03.2010 ಮತ್ತು 30.03.2010
5. ವಿಶೇಷ ಜಿಲ್ಲಾಧಿಕಾರಿಗಳು, ಕೆ.ಐ.ಎ.ಡಿ.ಬಿ ಇವರ ದಿನಾಂಕ: 08-09-2010ರ ಆದೇಶ ಸಂಖ್ಯೆ: ಕೆ.ಐ.ಎ.ಡಿ.ಬಿ/ ಕೇಂ.ಕವಿಜೆ/ 1849 - (2)10/ 88-2010-11.
6. ಸರ್ಕಾರದ ಆದೇಶ ಸಂಖ್ಯೆ: ಮೂಅಇ 23 ರಾಅವಿ 2008 ದಿನಾಂಕ: 04-12-2010ರ

7. ವಿಶೇಷ ಜಿಲ್ಲಾಧಿಕಾರಿಗಳು, ಕೆ.ಐ.ಎ.ಡಿ.ಬಿ ಇವರ ಆದೇಶ ಸಂಖ್ಯೆ: ಕೆ.ಐ.ಎ.ಡಿ.ಬಿ /ಕೇಂ.ಕವಿಜೆ/1849–(2) 14646 ದಿನಾಂಕ: 14–12–2010.
8. ಸರ್ಕಾರದ ಆದೇಶ ಸಂಖ್ಯೆ: ಮೂಅಇ 23 ರಾಅವಿ 2008 ದಿನಾಂಕ: 22–03–2011.
9. ಸರ್ಕಾರದ ಆದೇಶ ಸಂಖ್ಯೆ: ಮೂಅಇ 23 ರಾಅವಿ 2008 ದಿನಾಂಕ: 16.02.2012.
10. ಜಿಲ್ಲಾಧಿಕಾರಿ, ಧಾರವಾಡ ಜಿಲ್ಲೆ, ಧಾರವಾಡ, ಇವರ ಪತ್ರ ಸಂ: DC/ PA/ CR–116/ 2012–13, ದಿನಾಂಕ: 11.07.2012.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ತಯಾರಿಸಿರುವ ಮಾಸ್ಟರ್ ಪ್ಲಾನ್ ಪ್ರಕಾರ ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ವಿಸ್ತರಿಸಿ ಅಭಿವೃದ್ಧಿಪಡಿಸಲು ಸುಮಾರು 650 ಎಕರೆ ಜಮೀನಿನ ಭೂಸ್ವಾಧೀನಕ್ಕೆ ತಗಲುವ ವೆಚ್ಚವನ್ನು ಭರಿಸಲು ಮಂಜೂರಾತಿ ನೀಡಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ: (2), (3), (4), (6), (8) ಮತ್ತು (9) ರ ಆದೇಶಗಳಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿ ಹಾಗೂ ಈ ವಿಮಾನ ನಿಲ್ದಾಣದ ವಿಸ್ತರಣೆಗೆ ಅಗತ್ಯವಾದ ಭೂಸ್ವಾಧೀನಕ್ಕಾಗಿ ರೂ.220.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ, ಇವರಿಗೆ ಬಿಡುಗಡೆ ಮಾಡಲಾಗಿದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ: (5)ರ ಭೂಪರಿಹಾರಧನ ಬಿಡುಗಡೆ ಆದೇಶದಲ್ಲಿ ವಿಮಾನ ನಿಲ್ದಾಣದ ವಿಸ್ತರಣೆಗಾಗಿ ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕಿನ ಗೋಕುಲ ಮತ್ತು ಉಣಕಲ ಗ್ರಾಮಗಳಲ್ಲಿ ಭೂಸ್ವಾಧೀನಪಡಿಸಿರುವ 710.36 ಎಕರೆ ಜಮೀನಿಗೆ ಭೂಪರಿಹಾರ ಧನವನ್ನು ಬಿಡುಗಡೆ ಮಾಡಲಾಗಿದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ: (7)ರ ಕೆ.ಐ.ಎ.ಡಿ.ಬಿ. ಆದೇಶದಲ್ಲಿ ಹುಬ್ಬಳ್ಳಿ ವಿಮಾನ ನಿಲ್ದಾಣದ ಭೂಸ್ವಾಧೀನಕ್ಕಾಗಿ ಬಿಡುಗಡೆಗೆ ಬಾಕಿಯಿರುವ ಮೊತ್ತ ರೂ.27.45 ಕೋಟಿಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಧಾರವಾಡ ಜಿಲ್ಲೆ, ಧಾರವಾಡ, ಇವರಿಗೆ ಬಿಡುಗಡೆ ಮಾಡಲಾಗಿದೆ.

5. ಮೇಲೆ ಓದಲಾದ ಕ್ರಮ ಸಂ. (10)ರ ಪತ್ರ ದಿನಾಂಕ 11.07.2012 ರಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಇವರು ಹುಬ್ಬಳ್ಳಿ ವಿಮಾನದ ವಿಸ್ತರಣೆಗೆ ಅಗತ್ಯವಿರುವ 615 ಎಕರೆ ಜಮೀನಿನ ಭೂಸ್ವಾಧೀನಕ್ಕಾಗಿ ಬಾಕಿ ಪರಿಹಾರ ಮೊತ್ತ ರೂ.61.09 ಕೋಟಿಗಳ ಅನುದಾನದ ಅಗತ್ಯತೆ ಇದೆಯೆಂದು, ಇದರಲ್ಲಿ ಈ ಹಿಂದೆ ಬಿಡುಗಡೆ ಮಾಡಿದ ಮೊತ್ತದ ಪೈಕಿ ರೂ.4.21 ಕೋಟಿ ಶಿಲ್ಕು ಇರುವುದರಿಂದ ಇದನ್ನು ಕಡಿಮೆ ಮಾಡಿ ರೂ.56.88 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

6. ಹುಬ್ಬಳ್ಳಿ ವಿಮಾನ ನಿಲ್ದಾಣದ ಭೂಸ್ವಾಧೀನಕ್ಕಾಗಿ ಇದುವರೆಗೆ ಸರ್ಕಾರದಿಂದ ರೂ.220.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರು ಪ್ರಸ್ತಾಪಿಸಿರುವಂತೆ ರೂ.56.88 ಕೋಟಿಗಳನ್ನು ಬಿಡುಗಡೆ ಮಾಡಲು ವಿಷಯವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ. ಮೂಅಇ 23 ರಾಅವಿ 2008, ಬೆಂಗಳೂರು ದಿನಾಂಕ: 26–07–2012.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಾಲೀಕರಿಗೆ ಬಾಕಿ ಪರಿಹಾರ ಪಾವತಿಸುವ ಸಲುವಾಗಿ ರೂ.39.86 ಕೋಟಿಗಳನ್ನು (ಮೂವತ್ತೊಂಬತ್ತು ಕೋಟಿ ಎಂಬತ್ತಾರು ಲಕ್ಷಗಳು ಮಾತ್ರ) ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ, ಇವರಿಗೆ ಬಿಡುಗಡೆ ಮಾಡಲಾಗಿದೆ.

2) ಈ ಮೊತ್ತವನ್ನು 2012–13 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 5465–01–190–1–05 – (SDP) 133 ರಡಿಯಲ್ಲಿ ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿಗಾಗಿ ಒದಗಿಸಿರುವ ರೂ.40.00 ಕೋಟಿಗಳ ಮೊತ್ತದಿಂದ ಭರಿಸತಕ್ಕದ್ದು.

3) ಈ ಮೊತ್ತವನ್ನು ಜಿಲ್ಲಾಧಿಕಾರಿಗಳು ಧಾರವಾಡ ಜಿಲ್ಲೆ, ಧಾರವಾಡ ಇವರು ಜಿಲ್ಲಾ ಖಜಾನೆ, ಧಾರವಾಡ, ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್ ಎಂ ಸಿ, ಬೆಂಗಳೂರು, ಇವರು ಈ ಮೊತ್ತವನ್ನು ಧಾರವಾಡ ಜಿಲ್ಲಾಧಿಕಾರಿಗಳ ಖಾತೆಗೆ ಅಪ್ ಲೋಡ್ ಮಾಡುವುದು. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಿ ಉಪಯೋಗಿತ ಪ್ರಮಾಣ ಪತ್ರವನ್ನು ಧಾರವಾಡ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

4) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 867 ವೆಚ್ಚ–I/ 2012 ದಿನಾಂಕ 23–07–2012 ರಲ್ಲಿ ನೀಡಲಾದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಜೆ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.411

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ 200 ಕೆ.ವಿ.ಎ.ಹೆಚ್.ಟಿ. ವಿದ್ಯುತ್ ಸಂಪರ್ಕ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ.ನಂ.ಎಲ್.ಎನ್.ಡಿ(1).ಸಿಆರ್ 519/11–13 ದಿನಾಂಕ 12.09.2012.

2. ದಿನಾಂಕ 31.10.2012 ರಂದು ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆ.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1)ರ ದಿನಾಂಕ: 12.09.2012ರ ಪತ್ರದಲ್ಲಿ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ. ಇವರು ಶಿವಮೊಗ್ಗ ನಗರದ ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ದಿನಾಂಕ 15.09.2012ರಂದು ಮಾನ್ಯ ಉಪ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ರವರು 200 ಕೆ.ವಿ.ಎ ಹೆಚ್.ಟಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ತೆಗೆದುಕೊಂಡ ನಿರ್ಧಾರದಂತೆ ಕಾರ್ಯ ನಿರ್ವಾಹಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಶಿವಮೊಗ್ಗ ಇವರ ಪತ್ರ ಸಂಖ್ಯೆ.ಕಾನಿಇಂ (ವಿ)/ಸಕಾನಿಇಂ(ಕ)/ಸ.ಇಂ/ಶಿ/8875–79 ದಿನಾಂಕ 12.09.2012ರಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದ ನಿವೇಶನದಲ್ಲಿ 200 ಕೆ.ವಿ.ಎ ಹೆಚ್.ಟಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು, 11 ಕೆ.ವಿ. ಹೆಚ್.ಟಿ. ಎಲ್.ಟಿ. ಮಾರ್ಗಗಳ ಸ್ಥಳಾಂತರ ಮಾಡಲು ಮತ್ತು 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಮಾಚೇನಹಳ್ಳಿಯಲ್ಲಿ 2 ಸಂಖ್ಯೆ 11 ಕೆ.ವಿ ಸ್ವಿಚ್‌ಗೇರ್‌ಗಳನ್ನು ಸ್ವಯಂ ಕಾರ್ಯನಿರ್ವಹಣೆಯಡಿ ಅಳವಡಿಸಲು ಈ ಕೆಳಕಂಡಂತೆ ತಯಾರಿಸಿರುವ ಅಂದಾಜು ತ:ಖ್ತೆಯನ್ನು ಲಗತ್ತಿಸಿ ರೂ.2,26,33,824/–ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಅಂದಾಜು ಪಟ್ಟಿ ಮೊತ್ತ	10% ಅಂದಾಜು ಪಟ್ಟಿ ಮೊತ್ತ
1	ಶಿವಮೊಗ್ಗ ಏರ್‌ಪೋಟ್ ಡೆವಲಪರ್ಸ್ ಪ್ರೈ.ಲಿ ಇವರಿಗೆ 200 ಕೆ.ವಿ.ಎ ಹೆಚ್.ಟಿ. ವಿದ್ಯುತ್ ಸಂಪರ್ಕ ಕಲ್ಪಿಸಲು.	1,79,27,522/–	17,92,752/–
2	ಏರ್‌ಪೋರ್ಟ್ ಆವರಣದಲ್ಲಿ ಹೆಚ್.ಟಿ. ಎಲ್.ಟಿ. ಮಾರ್ಗ ಪರಿವರ್ತಕ ಕೇಂದ್ರ ಸ್ಥಳಾಂತರಿಲು	4,93,640/–	49,364/–
3	ಮಾಚೇನಹಳ್ಳಿಯಲ್ಲಿ ಸ್ವಿಚ್‌ಗೇರ್ ಅಳವಡಿಸಲು	21,55,042/–	2,15,504/–

2. ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ 200 ಕೆ.ವಿ.ಎ.ಹೆಚ್.ಟಿ. ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ನಿರ್ಣಯಿಸಲಾಗಿದೆ.

3. ಶಿವಮೊಗ್ಗ ವಿಮಾನ ನಿಲ್ದಾಣದ ಕಾಮಗಾರಿಯನ್ನು ಜೂನ್ 2013 ರೊಳಗಾಗಿ ಪೂರ್ಣಗೊಳಿಸುವ ಗುರಿಯನ್ನು ಹೊಂದಿರುವುದರಿಂದ ಇದಕ್ಕೆ ಅಗತ್ಯವಾದ ವಿದ್ಯುತ್ ಸಂಪರ್ಕ ಕಲ್ಪಿಸುವುದು ಅತ್ಯಗತ್ಯವಾಗಿರುತ್ತದೆ.

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 101 ರಾಅವಿ 2012, ಬೆಂಗಳೂರು, ದಿನಾಂಕ: 03.12.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ರವರು 200 ಕೆ.ವಿ.ಎ. ಹೆಚ್.ಟಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.2,26,33,824/– (ಎರಡು ಕೋಟಿ ಇಪ್ಪತ್ತಾರು ಲಕ್ಷಗಳ ಮುವತ್ತೂರು ಸಾವಿರದ ಎಂಟು ನೂರ ಇಪ್ಪತ್ತ ನಾಲ್ಕು ರೂಪಾಯಿಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿದೆ.

- ಸ್ಥಾಯಿ ನಿಯಮಗಳ ಅನುಸಾರ ಸಕ್ಷಮ ಪ್ರಾಧಿಕಾರದಿಂದ ಅಂದಾಜಿಗೆ ಅನುಮೋದನೆ ಪಡೆಯತಕ್ಕದ್ದು.
- ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಾಗ ಕೆಟಿಪಿಪಿ ಕಾಯ್ದೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
- ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.
- ಕಾಮಗಾರಿಯಲ್ಲಿ ಪರಿಷ್ಕೃತ ಅಂದಾಜನ್ನು ಸರ್ಕಾರವು ಪರಿಗಣಿಸುವುದಿಲ್ಲ.
- ಈಗ ಬಿಡುಗಡೆ ಮಾಡಿರುವ ಮೊತ್ತವನ್ನು ಬೇರೆ ಕಾಮಗಾರಿಗೆ ಉಪಯೋಗಿಸುವಂತಿಲ್ಲ.
- ಈ ಮೊತ್ತವನ್ನು ಕಾಮಗಾರಿಗೆ ವೆಚ್ಚ ಮಾಡಿ ಉಪಯೋಗಿತ ಪ್ರಮಾಣ ಪತ್ರ ಹಾಗೂ ಕಾಮಗಾರಿಯ ಭೌತಿಕ ಪ್ರಗತಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

2. ಈ ಮೊತ್ತವನ್ನು 2012–13ನೇ ಸಾಲಿನ ಲೆಕ್ಕಶೀರ್ಷಿಕೆ 5465–01–190–1–05 (ಯೋಜನೆ)–211–ಬಂಡವಾಳಗಳು–ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಇದರಡಿಯಲ್ಲಿ ಒದಗಿಸಿರುವ ಆಯವ್ಯಯದಿಂದ ಭರಿಸತಕ್ಕದ್ದು.

3. ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರು ಜಿಲ್ಲಾ ಖಜಾನೆ ಶಿವಮೊಗ್ಗ ಜಿಲ್ಲೆ, ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪನಿರ್ದೇಶಕರು, ಎನ್ ಎಮ್ ಸಿ, ಬೆಂಗಳೂರು ಇವರು ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಇವರ ಖಾತೆಗೆ ಮೊತ್ತವನ್ನು ಅಪ್‌ಲೋಡ್ ಮಾಡುವುದು.

4. ಈ ಆದೇಶವನ್ನು ಸಂಖ್ಯೆ. ಆಇ 4 ಟಿಎಫ್‌ಪಿ 2012 ದಿನಾಂಕ 27.04.2012 ಮತ್ತು ಸಂಖ್ಯೆ. ಆಇ 8 ಟಿಎಫ್‌ಪಿ 2012 ದಿನಾಂಕ 04.10.2012ರಲ್ಲಿ ಸರ್ಕಾರದ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

PR.396

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ಶ್ರೀ ಜಿ. ಎಸ್. ನಾರಾಯಣ, ನೋಟರಿ, ತುಮಕೂರು ಕಂದಾಯ ತಾಲ್ಲೂಕು ಇವರ ರಾಜೀನಾಮೆಯನ್ನು ಅಂಗೀಕರಿಸಿ, ಅವರ ಹೆಸರನ್ನು ನೋಟರಿ ರಿಜಿಸ್ಟರ್ ನಿಂದ ತೆಗೆದು ಹಾಕುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 97 ಎಲ್‌ಸಿಎಲ್ 1993 ದಿನಾಂಕ: 02-12-1993.

2. ವೃತ್ತಿ ಪ್ರಮಾಣ ಪತ್ರ ನಿಯಮ 8(5) ಸಂಖ್ಯೆ: ಲಾ 179 ಎಲ್‌ಸಿಎಲ್ 2012 ದಿನಾಂಕ: 24-09-2012

3. ನೋಟರಿ ಮನವಿ ದಿನಾಂಕ: 29-01-2013

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಶ್ರೀ ಜಿ.ಎಸ್. ನಾರಾಯಣ, ವಕೀಲರು ಚಿಕ್ಕಪೇಟೆ, ತುಮಕೂರು ಕಂದಾಯ ತಾಲ್ಲೂಕು, ತುಮಕೂರು ಜಿಲ್ಲೆರವರನ್ನು ದಿನಾಂಕ: 24-11-1993 ರಿಂದ ತುಮಕೂರು ಕಂದಾಯ ತಾಲ್ಲೂಕಿನ ನೋಟರಿಯಾಗಿ ನೇಮಕ ಮಾಡಲಾಗಿತ್ತು. ಮೇಲೆ (2)ರಲ್ಲಿ ಓದಲಾದ ಪ್ರಮಾಣ ಪತ್ರದಲ್ಲಿ ಸದರಿಯವರ ನೋಟರಿ ಪ್ರಮಾಣ ಪತ್ರವನ್ನು ದಿನಾಂಕ: 02-12-2012 ರಿಂದ 5 ವರ್ಷಗಳ ಅವಧಿಗೆ ನವೀಕರಿಸಲಾಗಿತ್ತು. ಮೇಲೆ (3)ರಲ್ಲಿ ಓದಲಾದ ಮನವಿಯಲ್ಲಿ ಶ್ರೀ ಜೆ.ಎಸ್. ನಾರಾಯಣ , ನೋಟರಿ, ತುಮಕೂರು ಕಂದಾಯ ತಾಲ್ಲೂಕುರವರು ತಮ್ಮ ನೋಟರಿ ಹುದ್ದೆಗೆ ರಾಜೀನಾಮೆಯನ್ನು ನೀಡಿ, ಅದನ್ನು ಒಪ್ಪಿಕೊಳ್ಳುವಂತೆ ವಿನಂತಿಸಿರುತ್ತಾರೆ.

ಸರ್ಕಾರವು ನೋಟರಿಯವರ ಮನವಿಯನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 44 ಎಲ್‌ಸಿಎಲ್ 2012, ಬೆಂಗಳೂರು ದಿನಾಂಕ: 18-02-2013

ಶ್ರೀ ಜಿ.ಎಸ್.ನಾರಾಯಣ, ನೋಟರಿ, ತುಮಕೂರು ಕಂದಾಯ ತಾಲ್ಲೂಕು, ತುಮಕೂರು ಜಿಲ್ಲೆ ಇವರು ನೋಟರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ದಿನಾಂಕ: 29-01-2013 ರಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಮತ್ತು ಸದರಿಯವರ ಹೆಸರನ್ನು ನೋಟರಿ ಕಾಯ್ದೆ 1952ರ ಕಲಂ 10 (ಎ)ರೀತ್ಯಾ ನೋಟರಿ ರಿಜಿಸ್ಟರ್ ನಿಂದ ಶಾಶ್ವತವಾಗಿ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಎಲ್.ಮಡಿವಾಳ

ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ-2)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

PR.522
S/C.15

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವಾಲಯ

ಸಂ:ಬಿಸಿಡಬ್ಲ್ಯೂ 2 ಬಿಎಂಎಸ್ 2013, ಬೆಂಗಳೂರು, ದಿನಾಂಕ: 02-01-2013

ತಿದ್ದುಪಡಿ

ಸರ್ಕಾರಿ ಆದೇಶ ಸಂಖ್ಯೆ: ಸಕಇ 159 ಬಿಎಂಎಸ್ 2012 ದಿನಾಂಕ: 23-06-2012ರ ಅನುಬಂಧದ ಕ್ರಮಸಂಖ್ಯೆ: 48ರ ಶೃಂಗೇರಿ ಟೌನ್ ಎಂಬುದರ ಬದಲಾಗಿ ಬಾಳೇಹೊನ್ನೂರು ಪಟ್ಟಣ, ನರಸೀಪುರ ತಾಲ್ಲೂಕು ಮತ್ತು ಕಾಲಂ ನಂ.5 ರಲ್ಲಿ ಪುರುಷ ಬದಲಾಗಿ ಮಹಿಳೆ ಎಂದು ತಿದ್ದುಪಡಿ ಮಾಡಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ. ಮುಳಕೂರ

ಸರ್ಕಾರದ ಅಧೀನ ಕಾರ್ಯದರ್ಶಿ-2

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

PR.521
S/C.100

ಆರ್ಥಿಕ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತಕ್ಕೆ 2012-13ನೇ ಅಬಕಾರಿ ಸಾಲಿಗೆ ಪ್ರಿವಿಲೇಜ್ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

ಪ್ರಸ್ತಾವನೆಃ

ರಾಜ್ಯದಲ್ಲಿ ಅಬಕಾರಿ ಸುಂಕ ಪಾವತಿಯನ್ನು ತಪ್ಪಿಸುವ ಪ್ರವೃತ್ತಿಗೆ ಕಡಿವಾಣ ಹಾಕುವ ಹಾಗೂ ಅಬಕಾರಿ ಶುಲ್ಕದ ಸೋರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಭಾರತೀಯ ತಯಾರಿಕಾ ಮದ್ಯದ ವಿತರಣೆಯನ್ನು ಕ್ರಮಬದ್ಧಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವನ್ನು ವಿಶೇಷ ಉದ್ದೇಶ ವಾಹಕವನ್ನಾಗಿ ಸ್ಥಾಪಿಸಲಾಯಿತು. ಸರ್ಕಾರಿ ಆದೇಶ ಸಂ: ಎಫ್‌ಡಿ 10 ಪಿಇಎಸ್ 2003 ದಿನಾಂಕ:23.6.2003 ರಲ್ಲಿ ನಿಗಮಕ್ಕೆ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸಲಾಯಿತು. ಅದನ್ವಯ ಮದ್ಯಸಾರ ಘಟಕಗಳು (ಡಿಸ್ಟಿಲರಿ), ಬಿಯರ್ ತಯಾರಿಕಾ ಘಟಕಗಳು (ಬ್ರಿವರೀಸ್) ಹಾಗೂ ವೈನ್ ತಯಾರಿಕಾ ಘಟಕಗಳಿಂದ (ವೈನರಿಸ್) ಪಡೆದ ಮದ್ಯವನ್ನು ಚಿಲ್ಲರೆ ಸನ್ನದುದಾರರಿಗೆ ವಿತರಿಸಬೇಕಾಗುತ್ತದೆ. ಅಬಕಾರಿ ಇಲಾಖೆಯು ಕರ್ನಾಟಕ ರಾಜ್ಯ ಪಾನೀಯ ನಿಗಮಕ್ಕೆ ಏಕೈಕ ಹಂಚಿಕೆದಾರ ಸಿಎಲ್11 ಸನ್ನದನ್ನು ನೀಡುತ್ತದೆ. ಈ ವಿಶೇಷ ಸೌಲಭ್ಯವನ್ನು ಹೊಂದಿರುವುದಕ್ಕಾಗಿ ಸರ್ಕಾರವು ನಿಗಮಕ್ಕೆ 2003 ರಿಂದಲೂ ಪ್ರಿವಿಲೇಜ್ ಫೀ/ಸನ್ನದು ಶುಲ್ಕವನ್ನು ಪ್ರತಿ ಅಬಕಾರಿ ಸಾಲಿನಲ್ಲೂ ನಿಗದಿಪಡಿಸುತ್ತಾ ಬಂದಿದೆ. ಅದರಂತೆ 2012-13ನೇ ಅಬಕಾರಿ ಸಾಲಿನಲ್ಲಿ ದಿನಾಂಕ:01-07-2012 ರಿಂದ 30-06-2013 ರವರೆಗೆ ನಿಗಮವು ನಡೆಸಿದ ಮದ್ಯ ವಹಿವಾಟಿನ ಸಂಬಂಧದಲ್ಲಿ ಸಿಎಲ್-11 ಸನ್ನದಿಗಾಗಿ ಪ್ರಿವಿಲೇಜ್ ಶುಲ್ಕವನ್ನು ನಿಗದಿಪಡಿಸುವ ವಿಷಯವನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 102 ಇಎಎ 2012 (1), ಬೆಂಗಳೂರು, ದಿನಾಂಕ:19.02.2013.

ಕರ್ನಾಟಕ ಅಬಕಾರಿ ಕಾಯಿದೆ, 1965ರ ಕಲಂ 24 ಹಾಗೂ ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಕರ್ನಾಟಕ ರಾಜ್ಯ ಪಾನೀಯ ನಿಗಮಕ್ಕೆ 2012-13ನೇ ಅಬಕಾರಿ

ಸಾಲಿನ ಸಿಎಲ್–11 ಸನ್ನದಿಗೆ ಸಂಬಂಧಿಸಿದಂತೆ ದಿನಾಂಕ: 01–07–2012 ರಿಂದ 30–06–2013 ರವರೆಗಿನ ಅವಧಿಗೆ ಪ್ರತಿ ಮಾಹೆಗೆ 50 (ಐವತ್ತು) ಲಕ್ಷಗಳ ಪ್ರಿವಿಲೇಜ್ ಶುಲ್ಕವನ್ನು ಈ ಮೂಲಕ ನಿಗದಿಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ, ಮತ್ತು ಅವರ ಹೆಸರಿನಲ್ಲಿ,
ಸಿದ್ದೇಶ್ ಪೋತಲಕಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).

PR.526

ಆರ್ಥಿಕ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತಕ್ಕೆ 2011–12ನೇ ಅಬಕಾರಿ ಸಾಲಿಗೆ ಪ್ರಿವಿಲೇಜ್ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

ಪ್ರಸ್ತಾವನೆಃ

ರಾಜ್ಯದಲ್ಲಿ ಅಬಕಾರಿ ಸುಂಕ ಪಾವತಿಯನ್ನು ತಪ್ಪಿಸುವ ಪ್ರವೃತ್ತಿಗೆ ಕಡಿವಾಣ ಹಾಕುವ ಹಾಗೂ ಅಬಕಾರಿ ಶುಲ್ಕದ ಸೋರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಭಾರತೀಯ ತಯಾರಿಕಾ ಮದ್ಯದ ವಿತರಣೆಯನ್ನು ಕ್ರಮಬದ್ಧಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತವನ್ನು ವಿಶೇಷ ಉದ್ದೇಶ ವಾಹಕವನ್ನಾಗಿ ಸ್ಥಾಪಿಸಲಾಯಿತು. ಸರ್ಕಾರಿ ಆದೇಶ ಸಂ: ಎಫ್‌ಡಿ 10 ಪಿಇಎಸ್ 2003 ದಿನಾಂಕ:23.6.2003 ರಲ್ಲಿ ನಿಗಮಕ್ಕೆ ಕರ್ತವ್ಯಗಳು ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸಲಾಯಿತು. ಅದನ್ವಯ ಮದ್ಯಸಾರ ಘಟಕಗಳು (ಡಿಸ್ಟಿಲರಿ), ಬಿಯರ್ ತಯಾರಿಕಾ ಘಟಕಗಳು (ಬ್ರಿವರೀಸ್) ಹಾಗೂ ವೈನ್ ತಯಾರಿಕಾ ಘಟಕಗಳಿಂದ (ವೈನರಿಸ್) ಪಡೆದ ಮದ್ಯವನ್ನು ಚಿಲ್ಲರೆ ಸನ್ನದುದಾರರಿಗೆ ವಿತರಿಸಬೇಕಾಗುತ್ತದೆ. ಅಬಕಾರಿ ಇಲಾಖೆಯು ಕರ್ನಾಟಕ ರಾಜ್ಯ ಪಾನೀಯ ನಿಗಮಕ್ಕೆ ಏಕೈಕ ಹಂಚಿಕೆದಾರ ಸಿಎಲ್11 ಸನ್ನದನ್ನು ನೀಡುತ್ತದೆ. ಈ ವಿಶೇಷ ಸೌಲಭ್ಯವನ್ನು ಹೊಂದಿರುವುದಕ್ಕಾಗಿ ಸರ್ಕಾರವು ನಿಗಮಕ್ಕೆ 2003 ರಿಂದಲೂ ಪ್ರಿವಿಲೇಜ್ ಫೀ/ಸನ್ನದು ಶುಲ್ಕವನ್ನು ಪ್ರತಿ ಅಬಕಾರಿ ಸಾಲಿನಲ್ಲೂ ನಿಗದಿಪಡಿಸುತ್ತಾ ಬಂದಿದೆ. ಅದರಂತೆ 2011–12ನೇ ಅಬಕಾರಿ ಸಾಲಿನಲ್ಲಿ ದಿನಾಂಕ:01–04–2012 ರಿಂದ 30–06–2012 ರವರೆಗೆ ನಿಗಮವು ನಡೆಸಿದ ಮದ್ಯ ವಹಿವಾಟಿನ ಸಂಬಂಧದಲ್ಲಿ ಸಿಎಲ್–11 ಸನ್ನದಿಗಾಗಿ ಪ್ರಿವಿಲೇಜ್ ಶುಲ್ಕವನ್ನು ನಿಗದಿಪಡಿಸುವ ವಿಷಯವನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 102 ಇಎಎ 2012 (2), ಬೆಂಗಳೂರು, ದಿನಾಂಕ:19.02.2013.

ಕರ್ನಾಟಕ ಅಬಕಾರಿ ಕಾಯಿದೆ, 1965ರ ಕಲಂ 24 ಹಾಗೂ ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 8ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಕರ್ನಾಟಕ ರಾಜ್ಯ ಪಾನೀಯ ನಿಗಮಕ್ಕೆ 2011–12ನೇ ಅಬಕಾರಿ ಸಾಲಿನ ಸಿಎಲ್–11 ಸನ್ನದಿಗೆ ಸಂಬಂಧಿಸಿದಂತೆ ದಿನಾಂಕ: 01–04–2012 ರಿಂದ 30–06–2012 ರವರೆಗಿನ ಅವಧಿಗೆ ಪ್ರತಿ ಮಾಹೆಗೆ 50 (ಐವತ್ತು) ಲಕ್ಷಗಳ ಪ್ರಿವಿಲೇಜ್ ಶುಲ್ಕವನ್ನು ಈ ಮೂಲಕ ನಿಗದಿಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ, ಮತ್ತು ಅವರ ಹೆಸರಿನಲ್ಲಿ,
ಸಿದ್ದೇಶ್ ಪೋತಲಕಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).

PR.527

ಆರ್ಥಿಕ ಸಚಿವಾಲಯ

ವಿಷಯ: ನ್ಯಾಯಾಂಗ ಅಧಿಕಾರಿಗಳ ದ್ವೈವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸುವ ನ್ಯಾಯಾಧೀಶರಿಗೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘವು ದ್ವೈವಾರ್ಷಿಕ ಸಮ್ಮೇಳನವನ್ನು ಆಯೋಜಿಸುತ್ತಿದ್ದು, ಈ ಸಮ್ಮೇಳನದಲ್ಲಿ ರಾಜ್ಯದ ಎಲ್ಲಾ ನ್ಯಾಯಾಂಗ ಅಧಿಕಾರಿಗಳು ಭಾಗವಹಿಸುವುದು ಕಡ್ಡಾಯವಾಗಿದೆ. ಈ ಹಿನ್ನೆಲೆಯಲ್ಲಿ, ನ್ಯಾಯಾಧೀಶರುಗಳು ಸಮ್ಮೇಳನದಲ್ಲಿ ಭಾಗವಹಿಸುವ ಈ ದಿನಗಳನ್ನು ನಿಯತಗೊಳಿಸುವುದನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 5 ಸೇನಿಸೇ 2013 ದಿನಾಂಕ: 08–04–2013

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ದ್ವೈವಾರ್ಷಿಕ ಸಮ್ಮೇಳನದಲ್ಲಿ ಎಲ್ಲಾ ನ್ಯಾಯಾಧೀಶರು ಭಾಗವಹಿಸುವುದು ಕಡ್ಡಾಯವಾಗಿದ್ದು, ಈ ಸಮ್ಮೇಳನದಲ್ಲಿ ನ್ಯಾಯಾಧೀಶರುಗಳ ಭಾಗವಹಿಸುವ ಈ ಅವಧಿಯನ್ನು ವಿಶೇಷ ಸಾಂದರ್ಭಿಕ ರಜೆಯೆಂದು ಪರಿಗಣಿಸಿ ನಿಯತಗೊಳಿಸುವಲ್ಲಿ ಸರ್ಕಾರವು ಈ ಮೂಲಕ ಅನುಮತಿಸಿದೆ ಹಾಗೂ ಈ ಸಂಬಂಧದಲ್ಲಿನ ಪ್ರಯಾಣಗಳಿಗೆ ಪ್ರಯಾಣ ಭತ್ಯೆಯ ಸೌಲಭ್ಯಕ್ಕೆ ಅರ್ಹರಾಗತಕ್ಕದ್ದಲ್ಲ ಎಂದು ಸರ್ಕಾರವು ಆದೇಶಿಸಿದೆ.

ಕರ್ನಾಟಕ ಸರ್ಕಾರಿ ನೌಕರರಿಗೆ ಸಾಂದರ್ಭಿಕ ರಜೆ ಮಂಜೂರು ಮಾಡುವುದನ್ನು ವಿನಿಯಮಗೊಳಿಸುವುದಕ್ಕೆ ಸಂಬಂಧಿಸಿದ ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿನ (ಅನುಬಂಧ 'ಬಿ')ಗೆ ಸೂಕ್ತ ಸೇರ್ಪಡೆಯನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ, ಮತ್ತು ಅವರ ಹೆಸರಿನಲ್ಲಿ,
ಆಲಿಸ್ ಗೊನ್ಸಾಲ್ವಿಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–1)

PR.529
S/C.100

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಆರ್.ಆರ್. ಪಾಟೀಲ್, ಪಿ.ಎಸ್.ಐ, ಸಂಚಾರಿ ಪೊಲೀಸ್ ಠಾಣೆ, ಗಂಗಾವತಿ, ಕೊಪ್ಪಳ ಜಿಲ್ಲೆ, ಇವರ ಪರಿಷ್ಕರಣ ಮೇಲ್ಮನವಿಯ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೊಪ್ಪಳ, ಇವರ ಆದೇಶ ಸಂಖ್ಯೆ: ಸಿಬ್ಬಂದಿ–4/ಶಿಕ್ಷೆ/270/2009 (ಆ.ಪು.ಸಂಖ್ಯೆ:775/2010) ದಿನಾಂಕ: 03–7–2010
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ: ಅಪೀಲು/34/ಈವ/2011 (ಆ.ಪು. ಸಂಖ್ಯೆ:481/ಈವ/2011/2997 ದಿನಾಂಕ: 08–9–2011
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 08–11–2011
4) 'ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)57/2011–12 ದಿನಾಂಕ: 15–6–2012 ಮತ್ತು 24–11–2012

ಪ್ರಸ್ತಾವನೆ:

ಶ್ರೀ ಆರ್.ಆರ್. ಪಾಟೀಲ್, ಪಿ.ಎಸ್.ಐ., ಗಂಗಾವತಿ ಗ್ರಾಮ ಪೊಲೀಸ್ ಠಾಣೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿಷ್ಕಾಳಜಿತನ, ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪವೆಸಗಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> "ಗಂಗಾವತಿ (ಗ್ರಾ) ಪೊಲೀಸ್ ಠಾಣೆ, ಯು.ಡಿ.ಆರ್. ಸಂ: 5/09, ಕಲಂ 174 (ಸಿ) ಸಿ.ಆರ್.ಪಿ.ಸಿ. ಅನ್ವಯ ದಾಖಲಾದ ಪ್ರಕರಣದ ಕಡತವನ್ನು ದಿನಾಂಕ: 31–01–09 ರಂದು ಎ.ಎಸ್.ಐ. ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದ್ದು, ಸದರಿ ಪ್ರಕರಣದಲ್ಲಿ ಪಿ.ಎಂ.ಇ. ವರದಿಯನ್ನು ನೀವು ದಿನಾಂಕ: 05–02–09 ರಂದು ಪಡೆದುಕೊಂಡು ಸದರಿ ವರದಿಯ ಆಧಾರದ ಮೇಲೆ ಸದರಿ ಪ್ರಕರಣಕ್ಕೆ ಕಲಂ 302, 201 ಐಪಿಸಿ ಗಳನ್ನು ಅಳವಡಿಸಿ ತನಿಖೆಯನ್ನು ಕೈಗೊಳ್ಳದೇ ಹಾಗೆಯೇ ಯು.ಡಿ.ಆರ್. ಅಂತಾ ಪರಿಗಣಿಸಿ ತನಿಖೆಯನ್ನು ಮುಂದುವರಿಸಿದ್ದನ್ನು ನೋಡಲಾಗಿ ನೀವು ಸದರಿ ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನವನ್ನು ಮಾಡಿದ್ದು ಅಲ್ಲದೇ ಆರೋಪಿತರ ಪತ್ತೆಗಾಗಿ ಯಾವುದೇ ಶ್ರದ್ಧಾಪೂರ್ವಕ ಪ್ರಯತ್ನ ಮಾಡದೇ ನೀವು ನಿಮ್ಮ ಕರ್ತವ್ಯದಲ್ಲಿ ಅತೀವ ನಿಷ್ಕಾಳಜಿತನ, ಬೇಜವಾಬ್ದಾರಿತನ ಹಾಗೂ ಕರ್ತವ್ಯ ಲೋಪವೆಸಗಿರುತ್ತೀರಿ."

ಮೇಲಿನ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೊಪ್ಪಳ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 03–7–2010ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗೆ ಪರಿಣಾಮ ಬೀರದಂತೆ ಎರಡು ವರ್ಷ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 08–9–2011ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ ಇವರ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡಲಾಗಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ಅತೀವ ನಿಷ್ಕಾಳಜಿತನ, ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪ–ವೆಸಗಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಮೇಲ್ಮನವಿ ಪ್ರಾಧಿಕಾರಿಯು ಮಾರ್ಪಡಿಸಿ ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 132 ಪೊಸಿಅ 2011 ಬೆಂಗಳೂರು, ದಿನಾಂಕ: 19–02–2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ಆರ್. ಪಾಟೀಲ್, ಪಿ.ಎಸ್.ಐ., ಸಂಚಾರಿ ಪೊಲೀಸ್ ಠಾಣೆ, ಗಂಗಾವತಿ, ಕೊಪ್ಪಳ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಟಿ.ಎನ್. ರವಿಪ್ರಕಾಶ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

PR.525
S/C.30